ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 17 ಏಪ್ರಿಲ್ 20-26, 1998 ರೂ.2.00

ಸಾಮ್ರಾಜ್ಯಶಾಹಿಯ ಹಿತಸಾಧಿಸಲಿಕ್ಕಾಗಿಯೇ 'ಸ್ವದೇಶಿ' ಮಂತ್ರವೇ?

ನಮ್ಮ ಹೊಸ ಕೇಂದ್ರ ಹಣಕಾಸು ಮಂತ್ರಿಗಳು ತನ್ನ ಮೊದಲ ಅಂತರ್‌ರಾಷ್ಟ್ರೀಯ ಮಿಶನ್‌ಗೆ ಆರಿಸಿಕೊಂಡ ಮೊದಲ ಸ್ಥಳವೆಂದರೆ ವಾಶಿಂಗ್ಟನ್. ಅಷ್ಟೇ ಅಲ್ಲ. "ನಾವು ಸುಧಾರಣೆಯನ್ನು ಇನ್ನಷ್ಟು ಆಳಗೊಳಿಸಲು, ಇನ್ನಷ್ಟು ಶೀಘ್ರಗೊಳಿಸಲು ಬದ್ಧರಾಗಿದ್ದೇವೆ" ಎಂದು ಅಮೆರಿಕನ್ ಮತ್ತು ಅನಿವಾಸಿ ಭಾರತೀಯ ಹೂಡಿಕೆದಾರರಿಗೆ ಆಶ್ವಾಸನೆ ಕೂಡಾ ನೀಡಿದ್ದಾರೆ. ಇನ್ನೂ ಮುಂದುವರಿದು ವಾಸ್ತವವಾಗಿ ಉದಾರೀಕರಣವನ್ನು ಎಲ್ಲರಿಗೂ ಮೊದಲು ಪ್ರತಿಪಾದಿಸಿದ್ದು ಬಿಜೆಪಿಯೇ, ಈ ದೇಶದಲ್ಲಿ "ಸಮಾಜವಾದದ ಮಾತುಗಳೇ ತುಂಬಿದ್ದ ದಿನಗಳಲ್ಲೂ ನಾವು ಉದಾರೀಕರಣದ ಪ್ರತಿಪಾದನೆ ಮಾಡುತ್ತಿದ್ದವರು" ಎಂದು 'ಸ್ವದೇಶಿ' ಮಂತ್ರದ ಸರಕಾರದ ಮಾನ್ಯ ಹಣಕಾಸು ಮಂತ್ರಿಗಳು ವಿದೇಶದಲ್ಲಿ ಸಾರಿದ್ದಾರೆ.

ಏಳು ವರ್ಷಗಳ ಹಿಂದೆ ನರಸಿಂಹರಾಯರು ಉದಾರೀಕರಣ-ಜಾಗತೀಕರಣದ ಧೋರಣೆಗಳನ್ನು ಆರಂಭಿಸಿದಾಗ ಅವರು ತಮ್ಮ ನೀತಿಗಳನ್ನು ಕಸಿದುಕೊಂಡಿದ್ದಾರೆ ಎಂದು ಸ್ವತಃ ಅಡ್ವಾಣಿಯವರೇ ಹೇಳಿರಲಿಲ್ಲವೇ ಎಂದೂ ಬಹುಶಃ ಅವರು ಕೇಳಬಹುದು. ಈ ಧೋರಣೆಗಳು ಹಗರಣಗಳ ಸರಮಾಲೆಯನ್ನೇ ಸೃಷ್ಟಿಸಿದಾಗ, ಆ ನೀತಿಗಳ ವಿರುದ್ಧ ಜನಸಾಮಾನ್ಯರ ಆಕ್ರೋಶ ಬೀದಿಗಳಲ್ಲಿ ವ್ಯಕ್ತಗೊಳ್ಳಲಾರಂಭಿಸಿದಾಗ ಬಿಜೆಪಿ ಮಂದಿ ತಾವೂ ಅದನ್ನು ವಿರೋಧಿಸಲಾರಂಭಿಸಿದ್ದನ್ನೂ, ಆಂತರಿಕ ಉದಾರೀಕರಣ, ಸ್ವದೇಶಿ ಇತ್ಯಾದಿ ಪದಗುಚ್ಛಗಳ ಹಿಂದೆ ತಿಪ್ಪರಲಾಗ ಹಾಕಲಾರಂಭಿಸಿದ್ದನ್ನು ಕೂಡಾ ಜನ ಮರೆತಿಲ್ಲ.

ಸಕ್ಕರೆಯನ್ನು ತುಟ್ಟಿಗೊಳಿಸಲಿರುವ ಸ್ವದೇಶೀ ಉದಾರೀಕರಣ

ಇವರ "ಸ್ವದೇಶಿ ಘೋಷಣೆ ಮೂಲತಃ ಜನರನ್ನು ದಾರಿ ತಪ್ಪಿಸಿ ಅವರ ಬೆಂಬಲ ಪಡೆಯಲಿಕ್ಕಾಗಿ ಮಾತ್ರ ಎಂಬುದು ಸ್ಪಷ್ಟ" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಪ್ರತಿಕ್ರಿಯೆ ವ್ಯಕ್ತಪಡಿಸಿದೆ. "ಉದಾರೀಕರಣಕ್ಕೆ ತನ್ನ ಬದ್ಧತೆಗೆ ಅನುಗುಣವಾಗಿ ಸರಕಾರ ಸಕ್ಕರೆ ಉದ್ದಿಮೆಯ ಮೇಲಿನ ಹತೋಟಿಯನ್ನು ತೆಗೆದು ರೇಶನ್ ಅಂಗಡಿಗಳಲ್ಲಿ ಸಕ್ಕರೆ ಮಾರಾಟವನ್ನು ನಿಲ್ಲಿಸುವ ಬಗ್ಗೆ ಗಂಭೀರ ಪರಿಶೀಲನೆ ನಡೆಸುತ್ತಿದೆ. ಇದು ಕೋಟಿಗಟ್ಟಲೆ ದುಡಿಮೆಗಾರ ಭಾರತೀಯರ ಮೇಲೆ ಅಸಹನೀಯ ಹೊರೆ ಹಾಕುತ್ತದೆ. ಅವರು ಇಂತಹ ಒಂದು ಜೀವನಾವಶ್ಯಕ ಸರಕನ್ನು ಬಳಸಬೇಕಾದರೆ ಮಾರುಕಟ್ಟೆ ಬೆಲೆಗಳ ಮರ್ಜಿಗೊಳಗಾಗಬೇಕಾಗುತ್ತದೆ" ಎಂದು ಸಿಪಿಐ(ಎಂ) ಖಂಡಿಸಿದೆ.

WTO ಮೊದಲು, ಸ್ವದೇಶೀ ಆಮೇಲೆ!

ಇದಕ್ಕೆ ಮೊದಲು ವಾಣಿಜ್ಯ ಮಂತ್ರಿಗಳು ಪ್ರಕಟಪಡಿಸಿದ 'ಹೊಸ' ವ್ಯಾಪಾರ ನೀತಿ ಕೂಡಾ ವಿಶ್ವ ವ್ಯಾಪಾರ ಸಂಸ್ಥೆ(ಡಬ್ಲ್ಯು.ಟಿ.ಒ.)ಯ ಶರತ್ತುಗಳ ಪಾಲನೆ ಮೊದಲು, 'ಸ್ವದೇಶಿ' ಆ ಮೇಲೆ ಎಂಬುದೇ ಬಿಜೆಪಿ ನೇತೃತ್ವದ ಸರಕಾರದ ನಿಜವಾದ ನೀತಿ ಎಂದು ತೋರಿಸಿದೆ. ದೇಶದಲ್ಲೇ ಉತ್ಪಾದಿಸಲಾಗುತ್ತಿರುವ ಇನ್ನಷ್ಟು ಬಳಕೆ ಸರಕುಗಳಿಗೂ ಆಮದು ಉದಾರೀಕರಣವನ್ನು ವಿಸ್ತರಿಸಿ ಪಾಶ್ಚಿಮಾತ್ಯ ಶಕ್ತಿಗಳನ್ನು ತೃಪ್ತಿಪಡಿಸುವುದು ಇದರ ಮುಖ್ಯ ಒತ್ತು.

ಕೈಗಾರಿಕಾ ಮಂತ್ರಿಗಳು ಪೇಟೆಂಟ್ ವ್ಯವಸ್ಥೆ ಕುರಿತಂತೆ ಜಂಟಿ ಪ್ಯಾರಿಸ್ ನಡವಳಿಕೆಗೆ ಭಾರತ ಸಹಿ ಹಾಕುವುದಾಗಿ ಘೋಷಿಸಿದ್ದಾರೆ.

ನಿಜಸ್ವರೂಪ ಬಯಲು

ಇದೊಂದು ದೇಶದ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪ್ರಭಾವ ಬೀರುವ ಪ್ರತಿಗಾಮಿ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಖಂಡಿಸಿದೆ. "ತಮಾಷೆಯ ಸಂಗತಿಯೆಂದರೆ ಇದೇ ಬಿಜೆಪಿ ಮುಖಂಡರೆ ಪ್ರತಿಪಕ್ಷದಲ್ಲಿದ್ದಾಗ ಭಾರತೀಯ ಪೇಟೆಂಟ್ ಕಾನೂನನ್ನು ತಿದ್ದುಪಡಿ ಮಾಡುವ ಇಂತಹ ಪ್ರಯತ್ನದ ವಿರುದ್ಧ ಕೂಗಾಡಿದ್ದರು; ವಾಸ್ತವವಾಗಿ, ರಾಜ್ಯಸಭೆಯಲ್ಲಿ ಇದಕ್ಕೆ ತಡೆಯೊಡ್ಡಿದ್ದರು! ಈಗ ಅವರ ಈ ತಿಪ್ಪರಲಾಗ ಅವರ ಇಬ್ಬಂದಿತನವನ್ನು, ಆ ಪಕ್ಷ ನಮ್ಮ ಆರ್ಥಿಕ ಸಾರ್ವಭೌಮತೆ ಹಾಗೂ ಸ್ವಾವಲಂಬನೆಯನ್ನು ಬಲಿಗೊಟ್ಟು ದೇಶದಲ್ಲಿ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಬೆಳೆಸಲು ಬದ್ಧವಾದ ಪಕ್ಷ ಎಂಬ ಅದರ ನಿಜ ಸ್ವರೂಪವನ್ನು ಬಯಲಿಗೆಳೆದಿದೆ" ಎಂದು ಟೀಕಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸಿಪಿಐ(ಎಂ) ಈ ಎಲ್ಲಾ ಪ್ರಯತ್ನಗಳನ್ನು ದೃಢವಾಗಿ ವಿರೋಧಿಸುತ್ತದೆ, ಈ ಪ್ರತಿಗಾಮಿ ನಿರ್ಣಯಗಳ ವಿರುದ್ಧ ಸಾರ್ವಜನಿಕ ಚಳುವಳಿ ಆರಂಭಿಸುತ್ತದೆ ಎಂದು ಹೇಳಿದೆ.

ಬೆಂಗಳೂರಿನಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನ

ದೇಶದಲ್ಲಿ ಮಾತ್ರವಲ್ಲ ಅಂತ್ರರಾಷ್ಟ್ರೀಯ ಮಟ್ಟದಲ್ಲೂ ಅತಿ ದೊಡ್ಡ ಸಂಘಟನೆಯಾಗಿ ಮಾನ್ಯತೆ ಪಡೆದು ಬೆಳೆಯುತ್ತಿರುವ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಅಖಿಲ ಭಾರತ 5ನೇ ಸಮ್ಮೇಳನ ಜೂನ್ 11 ರಿಂದ 14ರ ವರೆಗೆ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ನಡೆಯುತ್ತಿದೆ.

80 ಲಕ್ಷ ಸದಸ್ಯತ್ವ ಹೊಂದಿರುವ ಈ ಸಂಘಟನೆಯು ದೇಶದ ಎಲ್ಲಾ ರಾಜ್ಯಗಳಲ್ಲೂ ಕಾರ್ಯ ಚಟುವಟಿಕೆ ನಡೆಸುತ್ತಿದ್ದು ಸಮ್ಮೇಳನಕ್ಕೆ 1000 ಪ್ರತಿನಿಧಿ, ವೀಕ್ಷಕರುಗಳು ಆಗಮಿಸುತ್ತಿದ್ದು ನೆರೆ ರಾಷ್ಟ್ರಗಳಾದ, ನೇಪಾಳ, ಬಾಂಗ್ಲಾದೇಶ, ಚೀನಾ, ಬರ್ಮಾ ಪಾಕಿಸ್ತಾನ, ಕ್ಯೂಬಾ ಮುಂತಾದ ರಾಷ್ಟ್ರಗಳಿಂದಲೂ ವೀಕ್ಷಕರು ಆಗಮಿಸಲಿದ್ದಾರೆ.

ಸಮ್ಮೇಳನದಲ್ಲಿ ಶಾಸನ ಸಭೆಗಳಲ್ಲಿ ಶೇ. 33 ಮಹಿಳಾ ಮೀಸಲಾತಿ, ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ, ಅಸಂಘಟಿತ ಮಹಿಳಾ ಕಾರ್ಮಿಕರ ಸ್ಥಿತಿಗತಿ, ಕುಟುಂಬ ಹಾಗೂ ಸಮಾಜದಲ್ಲಿ ಮಹಿಳೆಯರ ಪಾತ್ರ



ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ

ಮತ್ತು ದೇಶದ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಮಹಿಳೆಯರ ಮುಂದಿನ ಸವಾಲುಗಳು ಹಾಗೂ ಇನ್ನಿತರೆ ಮಹಿಳಾ ಸಮಸ್ಯೆಗಳ ಕುರಿತು ಪ್ರತಿನಿಧಿಗಳು ಚರ್ಚಿಸಲಿದ್ದಾರೆ.

ಸಮ್ಮೇಳನದ ಯಶಸ್ವಿಗಾಗಿ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸ್ವಾಗತ ಸಮಿತಿಯನ್ನು ಏಪ್ರಿಲ್ 5ರಂದು ರಾಷ್ಟ್ರಮುಖಂಡರಾದ ಮೈಥಿಲಿ ಶಿವರಾಮನ್ ಸಮ್ಮುಖದಲ್ಲಿ ರಚಿಸಲಾಯಿತು.

ಅಧ್ಯಕ್ಷರು : *ಎಂ.ಎಸ್. ಸತ್ಯು, ಚಲನಚಿತ್ರ ನಿರ್ದೇಶಕರು,*

ಉಪಾಧ್ಯಕ್ಷರುಗಳು : *ಗಿರೀಶ್ ಕಾಸರವಳ್ಳಿ, ಡಾ॥ ವಿಜಯ, ಡಾ॥ ಪಾರ್ವತಿ ಮೆನನ್, ಗಾಯಿತ್ರಿ ದೇವಿ, ಡಾ. ಗಿರಿಜಮ್ಮ, ಪಿ.ಜಗನ್ನಾಥ್, ಜಿ.ಎನ್. ನಾಗರಾಜ್, ಜಿ.ಕೆ. ಗೋವಿಂದ್ ರಾವ್, ನಾಗಮೋಹನ್ ದಾಸ್, ಹೇಮಲತಾ ಮಹಿಷಿ.*

ಕಾರ್ಯದರ್ಶಿ: *ವಿಮಲ ಕೆ.ಎಸ್.*

ಸಹ ಕಾರ್ಯದರ್ಶಿಗಳು : *ಕೆ. ನೀಲಾ, ಎಸ್. ವರಲಕ್ಷ್ಮಿ, ಎಸ್. ಸತ್ಯ, ಶಾರದಾ ಕೆ.ಎಸ. ಕೆ.ಎನ್. ಉಮೇಶ್, ಎಸ್.ವೈ. ಗುರಶಾಂತ್,*

ಖಜಾಂಚಿಗಳು : *ಲಲಿತಾ ರತ್ನಾಕರ್ ಮತ್ತು ಎನ್. ಪ್ರಭಾ*

ಸಮ್ಮೇಳನದ ಯಶಸ್ವಿಗೆ ಕರ್ನಾಟಕದ ಜನತೆಯ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರವನ್ನು ಮಹಿಳಾ ಚಳುವಳಿಯ ಪರವಾಗಿ ಸ್ವಾಗತ ಸಮಿತಿ ವಿನಂತಿಸಿದೆ.

ರಾಜ್ಯಪಾಲರುಗಳನ್ನು ತೆಗೆದು ಹಾಕುವ ಕ್ರಮ ಸಂವಿಧಾನವನ್ನು ಬುಡಮೇಲು ಮಾಡುವ ಕ್ರಮ

ಬಿಜೆಪಿ ನೇತೃತ್ವದ ಸರಕಾರ ತಾನೇ ಸಾರ್ವಜನಿಕವಾಗಿ ಘೋಷಿಸಿದ ರಾಷ್ಟ್ರೀಯ ಅಜೆಂಡಾಕ್ಕೆ ಸಂಪೂರ್ಣ ಅಪ್ರಾಮಾಣಿಕವಾಗಿದೆ ಎಂಬುದನ್ನು ನಿರಂತರವಾಗಿ ಬಯಲುಗೊಳಿಸುತ್ತಲೇ ಇದೆ. ವಾಸ್ತವವಾಗಿ ಸಾರ್ವಜನಿಕವಾಗಿ ಘೋಷಿಸದ ಅಜೆಂಡಾವೊಂದನ್ನು ಅದು ಅನುಸರಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಅಭಿಪ್ರಾಯಪಟ್ಟಿದೆ.

ಮೂವರು ರಾಜ್ಯಪಾಲರುಗಳು ಹಾಗೂ ಇಬ್ಬರು ಉಪರಾಜ್ಯಪಾಲರುಗಳನ್ನು ಅವರ ಕಾರ್ಯಾವಧಿ ಮುಗಿಯುವ ಮೊದಲೇ ಬಲವಂತದಿಂದ ತೆಗೆದು ಹಾಕುವ ಬಿಜೆಪಿ ನೇತೃತ್ವದ ಸರಕಾರದ ನಿರ್ಣಯ ಭಾರೀ ದುಷ್ಪರಿಣಾಮ ಬೀರಲಿದೆ ಎಂದು ಪೊಲಿಟ್ ಬ್ಯುರೊ ಖಂಡಿಸಿದೆ. ಸಂವಿಧಾನದ ಭಾವನೆಯನ್ನು ಉಲ್ಲಂಘಿಸಿರುವ, ರಾಜ್ಯಪಾಲರ ಉನ್ನತ ಹುದ್ದೆಗೆ, ಆ ಮೂಲಕ ರಾಷ್ಟ್ರಪತಿ ಗಳು ಹಾಗೂ ಸಂವಿಧಾನಕ್ಕೂ ಅಪಮಾನ ಮಾಡಿರುವ ಕ್ರಮ ಇದು ಎಂದು ಸಿಪಿಐ (ಎಂ) ಹೇಳಿದೆ. ರಾಜ್ಯಪಾಲರ ನೇಮಕ ಹಾಗೂ ಕಾರ್ಯಾವಧಿಯನ್ನು ರಾಜ್ಯ ಸರಕಾರಗಳೊಂದಿಗೆ ಸಮಾಲೋಚಿಸಿ ನಿರ್ಧರಿಸಲಾಗುವುದೆಂಬ ರಾಷ್ಟ್ರೀಯ ಅಜೆಂಡಾದ ಘೋಷಣೆಗೆ ಮತ್ತು ರಾಜ್ಯಪಾಲರ ಹುದ್ದೆಯನ್ನು ರಾಜಕೀಯಕ್ಕೆ ಬಳಸುವುದಿಲ್ಲ ಎಂದು ಸಂಸತ್ತಿನ ಜಂಟಿ ಅಧಿವೇಶನಕ್ಕೆ ರಾಷ್ಟ್ರಪತಿಗಳ ಭಾಷಣದಲ್ಲಿ ನೀಡಿದ ಭರವಸೆಗೆ ವ್ಯತಿರಿಕ್ತವಾದ ಕ್ರಮ ಎಂದು ಹೇಳಿರುವ ಸಿಪಿಐ(ಎಂ) ಸಂವಿಧಾನ ದ ಭಾವನೆಯನ್ನು ಹಾಗೂ ಪವಿತ್ರ ಗೊಂಡಿರುವ ನೀತಿಗಳನ್ನು ಕಾಪಾಡುವ ಬದಲು ರಾಜ್ಯಪಾಲರ ಹುದ್ದೆಯನ್ನು ತನ್ನ ರಾಜಕೀಯ ಉದ್ದೇಶ ಸಾಧನೆಗೆ ಬಳಸಿ ಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಆಪಾದಿಸುತ್ತಾ ಸವಿಧಾನವನ್ನು ಈ ರೀತಿ ಬುಡಮೇಲು ಮಾಡಲು ಬಿಡಲಾಗದು ಎಂದಿದೆ.



ನವದೆಹಲಿಯಲ್ಲಿ ನಡೆದ ಪೊಲಿಟ್‌ಬ್ಯೂರೋ ಸಭೆಯಲ್ಲಿ ಭಾಗವಹಿಸುತ್ತಿರುವ ಇ.ಕೆ.ನಾಯನಾರ್, ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹಾಗೂ ಜ್ಯೋತಿ ಬಸು


ಒಳಪುಟಗಳಲ್ಲಿ

ಇಲ್ಲಿನೋಡಿ, ನಿಜಅಜೆಂಡಾ ಅನಾವರಣಗೊಳ್ಳುತ್ತಿದೆ. ಸೀತಾರಾಂ ಯೆಚೂರಿ — ಪುಟ 4

ತ್ರಿಪುರಾದಲ್ಲಿ ಏನಾಗುತ್ತಿದೆ? — ಪುಟ 6

ವಾಜಪೇಯಿ ಸರಕಾರಕ್ಕೆ ಶಾಕ್ ಟ್ರೀಟ್‌ಮೆಂಟ್ — ಪುಟ 6

ಐತಿಹಾಸಿಕ ಉತ್ತರ ಐರ್ಲೆಂಡ್ ಶಾಂತಿ ಒಪ್ಪಂದ — ಪುಟ 7



ಭಾರತೀಯ ವಿಮೋಚನಾಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಜುಲೈ 29, 1946. ಭಾರತದ ಅಂಚೆ-ತಂತಿ ನೌಕರರ ಮುಷ್ಕರಕ್ಕೆ ಬೆಂಬಲವಾಗಿ ಕಲ್ಕತ್ತೆಯಲ್ಲಿ ಒಂದು ಸೌಹಾರ್ದ ಸಾರ್ವತ್ರಿಕ ಮುಷ್ಕರ ನಡೆಯಿತು. ಇಡೀ ಕಲ್ಕತ್ತಾ ಇದರಲ್ಲಿ ಭಾಗವಹಿಸಿತು. ಕಾರ್ಖಾನೆಗಳು, ಶಾಲೆಗಳು, ಕಾಲೇಜುಗಳು, ಕಚೇರಿಗಳು, ಜನಗಳು ಸ್ವಯಂ ಸ್ಫೂರ್ತಿಯಿಂದ ಇದರಲ್ಲಿ ಭಾಗವಹಿಸಿದರು. ಮಹಿಳೆಯರು, ಹುಡುಗಿಯರ ಪಿಕೆಟಿಂಗ್‌ನಿಂದ ಕಲ್ಕತ್ತಾ ಆಕಾಶವಾಣಿಯ ಕೆಲಸ ಸಂಪೂರ್ಣ ಅಸ್ತವ್ಯಸ್ತಗೊಂಡಿತು. ಜನತೆಯ ಭಾಗವಹಿಸುವಿಕೆ ಸರಕಾರ ನಿರೀಕ್ಷಿಸಿದ ಮಿತಿಗಳನ್ನೆಲ್ಲಾ ಮೀರಿದಾಗ ನಿರ್ವಾಹವಿಲ್ಲದೆ ಮಿಲಿಟರಿ, ಪೋಲಿಸರನ್ನು ಹಿಂತೆಗೆದುಕೊಳ್ಳಲಾಯಿತು. 1946 ರಲ್ಲಿ ಬಂಗಾಳದಲ್ಲಿ ಒಟ್ಟು 1629 ಮುಷ್ಕರಗಳು ನಡೆದವು. 41748 ಮಂದಿ ಭಾಗವಹಿಸಿದ್ದರು. ದೇಶದ ಇತರೆಡೆಗಳಲ್ಲೂ ಇಂತಹ ಮುಷ್ಕರಗಳು ನಡೆಯುತ್ತಿದ್ದವು. ಆಗಸ್ಟ್-ಸೆಪ್ಟೆಂಬರ್ 1946 ರಲ್ಲಿ ದಕ್ಷಿಣ ಭಾರತೀಯ ರೈಲ್ವೆಯ ಕಾರ್ಮಿಕರು ಮುಷ್ಕರಕ್ಕಿಳಿದರು. ದಕ್ಷಿಣ-ಪೂರ್ವ ರೈಲ್ವೆಯ ಕಾರ್ಮಿಕರು ಮುಷ್ಕರ ನಡೆಸಿದರು. ಮುಂಬೈ, ನಾಗಪುರ ಕಾರ್ನೂಲ್‌ಗಳಲ್ಲಿ, ಬಿಹಾರದ ಕಲ್ಲಿದ್ದಲು ಗಣಿಗಳಲ್ಲಿ, ಕೋಲಾರ ಚಿನ್ನದ ಗಣಿಗಳಲ್ಲಿ ಮುಷ್ಕರಗಳು ನಡೆದವು. ಪೋಲೀಸರ ಗೋಲಿಬಾರುಗಳಲ್ಲಿ ಹಲವರು ಸತ್ತರು. ಕಮ್ಯುನಿಸ್ಟರು, ಎಡಪಂಥೀಯರು ಇದರ ನೇತೃತ್ವದಲ್ಲಿದ್ದರೆ ಕಾಂಗ್ರೆಸ್ಸಿಗರು ಮಂತ್ರಿಮಂಡಳ ರಚನೆಯ ಕನಸು ಕಾಣುತ್ತಿದ್ದರು.

ಕಾರ್ಮಿಕರ, ರೈತರ ಈ ಧೀರ ಹೋರಾಟಗಳ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿಗಳು ಪ್ರತಿಧಾಳಿ ಮಾಡಿದರು. ಈ ಹೋರಾಟ ನಿರತ ಜನಗಳ ಐಕ್ಯತೆಯನ್ನು ಒಡೆಯಲು ಬೃಹತ್ ಕೋಮುವಾದಿ ದಂಗೆಗೆ ಪ್ರೋತ್ಸಾಹ ನೀಡಿದರು. ಮುಸ್ಲಿಂ ಲೀಗ್ ಪ್ರತ್ಯೇಕ ಪಾಕಿಸ್ತಾನಕ್ಕಾಗಿ 'ನೇರ ಕಾರ್ಯಾಚರಣೆ ದಿನ' ಆಚರಿಸಿದ ನಂತರ ಕಲ್ಕತ್ತೆಯಲ್ಲಿ 5000 ಹಿಂದುಗಳು, ಮುಸಲ್ಮಾನರ ಹತ್ಯೆ ನಡೆಯಿತು. 10000 ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ನಂತರ ಇದಕ್ಕೆ ಪ್ರತಿಯಾಗಿ ನೋವಾಖಲಿ, ಬಿಹಾರ, ಉತ್ತರ ಪ್ರದೇಶದ ಗರ್‌ಮುಕ್ತೇಶ್ವರ್ ಪಂಜಾಬಿನಲ್ಲೂ ಕೋಮುದಂಗೆಗಳು ನಡೆದವು.




ಇಡೀ ದೇಶದಲ್ಲಿ ವಾತಾವರಣ ಕೋಮು ವಿಷದಿಂದ ಬಾಧಿತವಾಗಿತ್ತು. ಆಗ ಕೆಲವೇ ಕೆಲವು ಮಂದಿ ಈ ಕೋಮು ವಿಷವನ್ನು ತಡೆಯಲು ಹತಾಶ ಪ್ರಯತ್ನ ನಡೆಸಿದ್ದರು. ಅವರಲ್ಲಿ **ಗಾಂಧೀಜಿ** ಪ್ರಮುಖರು. ಅವರು ಕಲ್ಕತ್ತಾ, ನೋವಾಖಲಿ, ಬಿಹಾರ, ಪಂಜಾಬ್‌ಗಳಿಗೆ ಧಾವಿಸಿ ಏನು ಸಾಧ್ಯವೋ ಅವನ್ನೆಲ್ಲಾ ಮಾಡಲು ಪ್ರಯತ್ನ ಪಟ್ಟರು.



ಕಲ್ಕತ್ತೆಯ ಕುಖ್ಯಾತ ಕೋಮುದಂಗೆಗಳನ್ನು ನಿಲ್ಲಿಸುವ ಪ್ರಯತ್ನದಲ್ಲಿ ಚಿತ್ತಗಾಂಗ್ ಶಸ್ತ್ರಾಗಾರ ಧಾಳಿಯ ಪ್ರಸಿದ್ಧಿಯ **ಲಾಲ್ ಮೋಹನ್ ಸೆನ್** ಹುತಾತ್ಮರಾದರು. ಅವರು ಈ ಧಾಳಿಗಾಗಿ ಅಂಡಮಾನ್ ಜೈಲಿನಲ್ಲಿ ಸೇರಿದಾಗ ಅಲ್ಲಿ ಕಮ್ಯುನಿಸ್ಟರಾಗಿದ್ದರು. ಇವರಲ್ಲದೆ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ **ಸುಶೀಲ್ ದಾಸ್‌ಗುಪ್ತಾ, ಸ್ಮೃತೀಶ್‌ಮುಖ್ಯೋಪಾಧ್ಯಾಯ, ಸಚಿನ್ ಮಿತ್ರ ಹಾಗೂ ನಾನಿ ಸೇನ್** ಕೂಡಾ ಕೋಮುದಂಗೆ ನಿಲ್ಲಿಸುವ ಪ್ರಯತ್ನದಲ್ಲಿ ಹುತಾತ್ಮರಾದರು.

ಸೆಪ್ಟೆಂಬರ್ 1946 ರ ವೇಳೆಗೆ ಮತ್ತೆ ಕೋಮುದಂಗೆಗಳು ನಡೆಯುವ ಸಂಭವ ಕಂಡು ಕಲ್ಕತ್ತೆಯ ಲೇಖಕರೂ, ಕಲಾವಿದರು, ಪ್ರಗತಿಪರ ಲೇಖಕ ಸಂಘ, ಕಾಂಗ್ರೆಸ್ ಸಾಹಿತ್ಯ ಸಂಘ, ಇಪ್ಟಾ ಹಾಗೂ ಕಲಾವಿದರ ಸಂಘ ಜಂಟಿಯಾಗಿ ಕೋಮುದಂಗೆಗಳ ವಿರುದ್ಧ ಮತ ಪ್ರದರ್ಶನ ನಡೆಸಿದರು.

ಇತ್ತ ಗಾಂಧೀಜಿ ಕಾಂಗ್ರೆಸ್, ಲೀಗ್ ಮುಖಂಡರಲ್ಲಿ ರಾಜಿ ಮಾಡಿಸಿ ಕೋಮುಶಾಂತಿಗೆ ಪ್ರಯತ್ನಿಸುತ್ತಿದ್ದರೆ ಅತ್ತ ರೈತ, ಕಾರ್ಮಿಕ ಆಂದೋಲನಗಳಲ್ಲಿ ಸಕ್ರಿಯರಾಗಿದ್ದವರು ಬ್ರಿಟಿಶರ ವಿರುದ್ಧ ಹೋರಾಟದಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಪ್ರತಿಪಾದಿಸಿ ಹೋರಾಟ ನಡೆಸುತ್ತಿದ್ದರು. ಒಂದು ದುಷ್ಟ ಕೋಮುದಂಗೆ ನಡೆದ ಸ್ವಲ್ಪದರಲ್ಲೇ ಇನ್ನೂ ಕೋಮು ಜ್ವಾಲೆ ಹರಡಿದ್ದಾಗ ಬಂಗಾಳ ಪ್ರಾಂತೀಯ ಕೃಷಿಕ್ ಸಭಾ **ತೆಭಾಗ ಹೋರಾಟಕ್ಕೆ** ಕರೆ ನೀಡಿತು. ಈ ಹೋರಾಟದ ಪ್ರಮುಖ ಬೇಡಿಕೆಯೆಂದರೆ ಗೇಣಿ ಬೆಳೆಗಾರರಿಗೆ ತಾವು ಬೆಳೆದ ಬೆಳೆಯ 2/3 ಭಾಗ ದೊರೆಯಬೇಕು ಎಂದು. ಅದುವರೆಗೆ ಅರ್ಧದಷ್ಟು ಮಾತ್ರ ದೊರೆಯುತ್ತಿತ್ತು. ಜೋತೇದಾರರು ಅರ್ಧದಷ್ಟು ತಮಗೇ ಇಟ್ಟುಕೊಳ್ಳುತ್ತಿದ್ದರು. ಈ ಬೇಡಿಕೆಯ ಸುತ್ತ 60 ಲಕ್ಷ ರೈತರ 'ಇಂಕ್ವಿಲಾಬ್ ಜಿಂದಾಬಾದ್', 'ನಿಮ್ಮ ಬೆಳೆಯನ್ನು ನಿಮ್ಮ ಕಣಜಕ್ಕೆ ಒಯ್ಯಿರಿ' ಎಂಬ ಕೂಗುಗಳು ಮೊಳಗಿದವು.




ದಿನಾಜ್‌ಪುರ ಜಿಲ್ಲೆಯ ರಾಂಪುರ ಗ್ರಾಮದಲ್ಲಿ ರೈತರು ತಾವು ಬೆಳೆದ ಬೆಳೆಯನ್ನು ತಮ್ಮ ಕಣಜಕ್ಕೆ ಒಯ್ಯಲು ಪ್ರಯತ್ನಿಸಿದಾಗ ಈ ಹೋರಾಟ ಆರಂಭವಾಯಿತು. ಮಧ್ಯಂತರ ಚುನಾವಣೆಗಳಲ್ಲಿ ಬಂಗಾಳ ಪ್ರಾಂತೀಯ ವಿಧಾನಸಭೆಗೆ 1946 ರಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಸ್ಪರ್ಧಿಸಿ ಗೆದ್ದ ಮೂವರಲ್ಲಿ ಒಬ್ಬರಾದ **ರೂಪನಾರಾಯಣ್ ರಾಯ್** ಇಲ್ಲಿಯವರು. ರಾಜ್‌ಬಂಶೀ ರೈತನ ಮಗನಾದ ಈತನ ನೇತೃತ್ವದಲ್ಲಿ ರೈತರ ಹೋರಾಟ ಆರಂಭವಾದಾಗ ಪೋಲೀಸರ ದಮನವೂ ಆರಂಭವಾಯಿತು. ರೈತರ ಪ್ರತಿರೋಧವೂ ಆರಂಭವಾಯಿತು. ಬೇಗನೇ ಈ ಜಿಲ್ಲೆಯ 30 ಪೋಲೀಸ್ ಸ್ಟೇಶನ್‌ಗಳಲ್ಲಿ 22 ರಲ್ಲಿ ಹೋರಾಟಗಳು ಹರಡಿದವು. ಕಿಸಾನ್ ಸಭಾ ಕಟ್ಟಿದ ವೋಲಂಟಿಯರ್ ಬಾಹಿನಿಯಲ್ಲಿ ಸಾವಿರಾರು ಧೀರ ರೈತರು, ಯುವಜನ ಸೇರಿಕೊಂಡರು. **ಅಬನಿ ಲಾಹಿರಿ** ಇದರ ಸೇನಾಧಿಪತಿಯಾದರು. ಹಲವು ಧೀರ ಹೋರಾಟಗಳು ನಡೆದವು. ನಂತರ ಪೂರ್ವಪಾಕಿಸ್ತಾನದಲ್ಲಿ ಹುತಾತ್ಮರಾದ **ಕಂಪೋರಾಂ ಸಿಂಗ್**, ಪೋಲೀಸ್ ಇನ್ಸ್‌ಪೆಕ್ಟರ್ ಕೈಯಿಂದ ರೈಫಲ್ ಕಿತ್ತುಕೊಂಡ ಚಿಕ್ಕಹುಡುಗಿ ವಂದನಿಯ ಸಾಹಸ, ಚಿರೀರ್ ಭಂಡಾರ್‌ನಲ್ಲಿ ಪೋಲೀಸರು ರೈತರ ರ್‍ಯಾಲಿಯ ಮೇಲೆ ಧಾಳಿ ಮಾಡಿದಾಗ ಬಲಿಯಾದ ಸಂತಾಲ್ ಯುವಕ **ಶಿವರಾಂ**, ಮುಸ್ಲಿಂ ಭೂಹೀನ ಕಾರ್ಮಿಕ **ಸಮೀರುದ್ದೀನ್** ಬ್ರಿಟಿಶರಿಗೆ ಶರಣಾಗತರಾಗಬೇಡಿ ಎಂದು ಕರೆ ನೀಡಿದ **ಜಸೋದಾ**, ಪೋಲೀಸರ ಗುಂಡುಗಳಿಗೂ ಹೆದರದೆ ಮುನ್ನುಗ್ಗಿದ **ರಾಣಿ ಮಿತ್ರ, ದೀಪಾ ಗುಹಾ** ಹೀಗೆ ಈ ಹೋರಾಟದಲ್ಲಿ ಮೂಡಿಬಂದ ಸಮರಧೀರರು, ಮುಖಂಡರು ಅನೇಕ.

ತೆಭಾಗ ಹೋರಾಟ ದಿನಾಜ್‌ಪುರ ಜಿಲ್ಲೆಯಿಂದ ಜಲಪೈಗುರಿಗೆ, ನಂತರ ಮೈಮನ್‌ಸಿಂಗ್ ಜಿಲ್ಲೆಗೆ ಹರಡಿತು. ಮಾರ್ಚ್ 1, 1947 ರಂದು ಜಲಪೈಗುರಿ ರೈತರು ಜೋತೇದಾರನ ಕಣಜದಿಂದ ಧಾನ್ಯವನ್ನು ಕಿತ್ತುಕೊಂಡು ಸಾಗಿಸಲಾರಂಭಿಸಿದಾಗ ಪೋಲೀಸ್ ಗೋಳಿಬಾರಿನಲ್ಲಿ ಲಾಧ್ರಾ ಮತ್ತಿತರ ಐದು ರೈತರು ಹುತಾತ್ಮರಾದರು. ಏಪ್ರಿಲ್ 4 ರಂದು ಮಾಕಳಿಯಲ್ಲಿ ನಡೆದ ಇನ್ನೊಂದು ಸಂಘರ್ಷದಲ್ಲಿ ರೈತರು ಪೋಲೀಸರ ರೈಫಲ್‌ಗಳಿಗೆದುರಾಗಿ ಬಿಲ್ಲು-ಬಾಣಗಳಿಂದ ಹೋರಾಡಿದರು.

(ಮುಂದುವರಿಯುವುದು)

ಆರ್ಥಿಕ ಟಿಪ್ಪಣಿ



ಜಿ.ಎಸ್.ಮಣಿ

ಪ. ಬಂಗಾಳ ಸರ್ಕಾರದ ಮಾದರಿ ಕ್ರಮ

ಪ.ಬಂಗಾಳ ಸರ್ಕಾರ ಹಿಂದೆಂದೂ ಯಾವುದೇ ರಾಜ್ಯ ಸರ್ಕಾರವೂ ಕೈಗೊಳ್ಳದೇ ಇರುವಂತಹ ಕ್ರಮಗಳನ್ನು ಕೈಗೊಂಡಿದೆ. ಉದಾರೀಕರಣದ ಈ ದಿನಗಳಲ್ಲಿ ಹಲವು ಉದ್ದಿಮೆಗಳು ರೋಗಗ್ರಸ್ತವಾಗುತ್ತಿರುವಾಗ ಜವಾಬ್ದಾರಿಯುಳ್ಳ ಸರ್ಕಾರವೊಂದು ಏನನ್ನು ಮಾಡಬಹುದೆಂಬುದಕ್ಕೆ ಈ ಕ್ರಮ ಮಾದರಿಯಾಗಿದೆ. ಪ.ಬಂಗಾಳ ಸರ್ಕಾರ ಡನ್‌ಲಪ್ ಇಂಡಿಯಾ ಲಿಮಿಟೆಡ್ ಎಂಬ ರೋಗಗ್ರಸ್ತ ಕಂಪನಿಯನ್ನು ತಾತ್ಕಾಲಿಕವಾಗಿ ತಾನೇ ವಹಿಸಿಕೊಂಡಿದೆ. ಮನು ಆರ್. ಚೌಬ್ರಿಯಾ ಎಂಬ ಉದ್ಯಮಪತಿಯ ಉದ್ಯಮ ಸಾಮ್ರಾಜ್ಯದ ಒಂದು ಕಂಪನಿ ಈ ಡನ್‌ಲಪ್ ಕಂಪನಿ. ಈ ಕಂಪನಿಯ ಶಾಖೆಗಳು ದೇಶದಾದ್ಯಂತ ಹರಡಿ ಕೊಂಡಿದ್ದರೂ ಮುಖ್ಯ ಕಾರ್ಖಾನೆ ಪ.ಬಂಗಾಳದ ಸಾಹಾಗಂಜ್‌ನಲ್ಲಿದೆ. ಈ ಕಾರ್ಖಾನೆಯಲ್ಲಿ ಸುಮಾರು 4500 ಕೆಲಸಗಾರರು ದುಡಿಯುತ್ತಿದ್ದಾರೆ.

ಈ ಕಂಪನಿ ರೋಗಗ್ರಸ್ತವಾದ ಮೇಲೆ ಬಿ.ಐ.ಎಫ್.ಆರ್‌ಗೆ ತಿಳಿಸಲಾಗಿತ್ತು. ಬಿ.ಐ.ಎಫ್.ಆರ್ ಐ.ಡಿ.ಬಿ.ಐ.ಯನ್ನು ಈ ವಿಷಯದಲ್ಲಿ ಆಪರೇಟಿಂಗ್ ಏಜೆನ್ಸಿ ಅಂದರೆ ಪುನರುಜ್ಜೀವನದ ವಿಷಯದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಯೆಂದು ನೇಮಕ ಮಾಡಿತ್ತು. ಒಟ್ಟಾರೆ ಈ ಕಂಪನಿಯ ಪುನರುಜ್ಜೀವನದ ಕುರಿತು ಐ.ಡಿ.ಬಿ.ಐ. ಯೋಜನೆ ತಯಾರಿಸಬೇಕಿದೆ.

ಪ.ಬಂಗಾಳ ಸರ್ಕಾರದ ಹಣಕಾಸು ಮಂತ್ರಿಗಳಾದ ಡಾ|| ಅಶಿಮ್‌ದಾಸ್‌ಗುಪ್ತ ಐ.ಡಿ.ಬಿ.ಐ.ನ ಅಧ್ಯಕ್ಷರಾದ ಶ್ರೀ ಎಸ್.ಎಚ್.ಖಾನ್ ಅವರ ಜೊತೆಗೆ ಈ ವಿಷಯದಲ್ಲಿ ಚರ್ಚಿಸಿದ ನಂತರ ಈ ನಿರ್ಧಾರವನ್ನು ಕೈಗೊಳ್ಳಲಾಯಿತು.

ಈ ಕಂಪನಿಯನ್ನು ಶಾಶ್ವತವಾಗಿ ಪ.ಬಂಗಾಳ ಸರಕಾರ ನಡೆಸುವುದಿಲ್ಲ. ಯಾಕೆಂದರೆ ಅದು ಸರ್ಕಾರದ ಕೆಲಸವಲ್ಲ. ಸೂಕ್ತವಾದ ವರು ಈ ಕಂಪನಿಯನ್ನು ಕೊಳ್ಳಲು ಮುಂದೆ ಬರುವವರೆಗೆ ಮಾತ್ರ ಈ ಕ್ರಮ.

ಉದಾರೀಕರಣ ಬಂದ ಮೇಲೆ ಹಲವು ಉದ್ದಿಮೆಗಳು ಬೇರೆ ಬೇರೆ ರಾಜ್ಯಗಳಲ್ಲಿ ರೋಗಗ್ರಸ್ತವಾಗಿವೆ. ರಾಜ್ಯ ಸರ್ಕಾರಗಳು ಮಧ್ಯಪ್ರವೇಶ ಮಾಡಿ ಆ ಉದ್ದಿಮೆಗಳ ಕಾರ್ಮಿಕರಿಗೆ ಪರಿಹಾರ ಒದಗಿಸುವ ಬದಲು ಖಾಸಗಿ ಉದ್ಯಮ ಪತಿಗಳಿಗೆ ಲಾಭ ಮಾಡಿಕೊಡುವಲ್ಲಿ ಮುಖ್ಯ ಪಾತ್ರ ವಹಿಸಿವೆ. ಪ.ಬಂಗಾಳ ಸರ್ಕಾರ ಈಗ ಇಂತಹ ಸಂದರ್ಭಗಳಲ್ಲಿ ಎಂತಹ ಪಾತ್ರ ವಹಿಸಬಹುದೆಂಬುದಕ್ಕೆ ಒಂದು ಮಾದರಿಯನ್ನು ಒದಗಿಸಿದೆ.

ಸ್ವದೇಶಿಯರ ವಿದೇಶೀ ವಿಮೆ

ವಿಮಾ ವಲಯವನ್ನು ವಿದೇಶೀ ಕಂಪನಿಗಳಿಗೆ ತೆರೆಯಬೇಕೆಂಬ ಒತ್ತಡ ಬಹಳ ದಿನಗಳಿಂದ ಇದೆ. ಸಂಯುಕ್ತರಂಗ ಸರ್ಕಾರ ಈ ದಿಸೆಯಲ್ಲಿ ಸಂಸತ್ತಿನಲ್ಲಿ ಮಸೂದೆಯೊಂದನ್ನು ಮಂಡಿಸಿತ್ತು. ವಿಮಾ ವಲಯವನ್ನು ತೆರೆಯುವ ಪ್ರಸ್ತಾಪ ಅದರಲ್ಲಿತ್ತು. ಆದರೆ ಎಡಪಕ್ಷಗಳ ವಿರೋಧ ಮತ್ತು ಬಿ.ಜೆ.ಪಿ.ಯ ವಿರೋಧದಿಂದಾಗಿ ಈ ಮಸೂದೆ ಪಾಸಾಗಲಿಲ್ಲ.

ಬಿ.ಜೆ.ಪಿ ತಾನು ವಿಮಾ ವಲಯದ ಸಂರಕ್ಷಕ ಎಂಬ ಹೆಮ್ಮೆಯ ಫೋಸುಕೊಡುವುದು ಸಾಧ್ಯವಾಗಿತ್ತು. ಅದು ಬಿ.ಜೆ.ಪಿ ವಿರೋಧ ಪಕ್ಷವಾಗಿದ್ದ ದಿನಗಳ ಮಾತಾಯಿತು. ಈಗ ಬಿ.ಜೆ.ಪಿ ಅಧಿಕಾರದ ಚುಕ್ಕಾಣಿ ಹಿಡಿದಿರುವಾಗ?

ಈಗ ಬಿ.ಜೆ.ಪಿ ಈ ವಿಷಯದಲ್ಲಿ ಬೇರೆ ನಿಲುವನ್ನೇ ತೋರುತ್ತಿದೆ. ವಿದೇಶೀ ಹೂಡಿಕೆ ಅಭಿವೃದ್ಧಿ ಮಂಡಳಿಯ ಮುಂದೆ ಜುರಿಕ್ ಇನ್ಶೂರೆನ್ಸ್ ಎಂಬ ಬಹುರಾಷ್ಟ್ರೀಯ ಕಂಪನಿಯ ಪ್ರಸ್ತಾಪ ಬಂದಿವೆ. ಬಿ.ಜೆ.ಪಿ ವಿದೇಶೀ ಕಂಪನಿಗಳಿಗೆ ನಮ್ಮ ವಿಮಾ ವಲಯವನ್ನು ತೆರೆಯುವುದರ ವಿರುದ್ಧವೇ ಇದ್ದಿದ್ದರೆ ಈ ವಿಷಯದಲ್ಲಿ ಆಗಲೇ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಈ ಪ್ರಸ್ತಾಪವನ್ನು ತಿರಸ್ಕರಿಸಬೇಕಾಗಿತ್ತು. ಆದರೆ ಅದು ಅಂತಹ ನಿರ್ಧಾರ ಕೈಗೊಂಡಿಲ್ಲ.

ಈಗ ಈ ಪ್ರಸ್ತಾಪವನ್ನು ವಿದೇಶಿ ಹೂಡಿಕೆ ಅಭಿವೃದ್ಧಿ ಮಂಡಳಿಯ ಮುಖ್ಯ ಸಮಿತಿಯ ಮಂದಿಡಲಾಗುವುದಂತೆ. ಈಗಾಗಲೇ ಬಹಳ ದಿನಗಳಿಂದ ನಿರ್ಧಾರಕ್ಕಾಗಿ ಕಾಯುತ್ತಿರುವ ಈ ಪ್ರಸ್ತಾಪ ಇಷ್ಟು ದಿನಗಳ ಕಾಲ ಜೀವಂತವಾಗಿರುವ ಅವಶ್ಯಕತೆ ಇರಲಿಲ್ಲ. ಆದರೆ ಬಿಜೆಪಿ ಸರ್ಕಾರಕ್ಕೆ ಅನುಮತಿ ನೀಡುವ ಒಲವು ಇರುವುದರಿಂದ ಅದು ಇಂದಿಗೂ ಜೀವಂತವಾಗಿದೆ.

ಈಗಾಗಲೇ ಬಳಕೆ ವಸ್ತುಗಳ ವಲಯದಲ್ಲಿ ವಿದೇಶೀ ಹೂಡಿಕೆಗೆ ಅವಕಾಶವಿಲ್ಲ ಎಂದು ಹೇಳಿ ನಂತರ ಈ ಬಗ್ಗೆ ಮೆತ್ತಗಿನ ಧೋರಣೆ ತೋರಿದ ಬಿಜೆಪಿ ಸರ್ಕಾರ ಈಗ ವಿಮಾ ವಲಯದ ಬಗೆಗೂ ಇಂತಹದ್ದೇ ಧೋರಣೆ ತೋರಿಸುತ್ತಿದೆ. ಬಿಜೆಪಿ ಹೇಳುವುದೊಂದು ಮಾಡುವುದೊಂದು ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೆ?

ವಿಶ್ವ ವ್ಯಾಪಾರ ಸಂಸ್ಥೆ ಮತ್ತು ಆಮೆ

ಅಮೇರಿಕ ಏಶಿಯಾ ಖಂಡದಿಂದ ರಫ್ತಾಗುವ ಸೀಗಡಿ ಮೀನಿನ ಬಗ್ಗೆ ಒಂದು ದೊಡ್ಡ ತಕರಾರನ್ನು ವಿಶ್ವ ವ್ಯಾಪಾರ ಸಂಸ್ಥೆಗೆ ಸಲ್ಲಿಸಿತ್ತು. ಏಶಿಯಾ ಖಂಡದಿಂದ ಸೀಗಡಿ ರಫ್ತು ಮಾಡುವವರು ಸಮುದ್ರ ಆಮೆಗಳು ಸಾಯದಂತೆ ತಡೆಯುವುದಿಲ್ಲವಾದ್ದರಿಂದ ಪರಿಸರಕ್ಕೆ ಹಾನಿಯಾಗುತ್ತದೆ ಆದ್ದರಿಂದ ಏಶಿಯಾ ಖಂಡದಿಂದ ರಫ್ತಾಗುವ ಸೀಗಡಿ ಮೀನಿನ ಮೇಲೆ ಪ್ರತಿಬಂಧ ಹಾಕ ಬೇಕೆಂಬುದು ಅಮೇರಿಕದ ವಾದ. ವಿಶ್ವ ವ್ಯಾಪಾರ ಸಂಸ್ಥೆ ಅಮೇರಿಕದ ಆ ತಕರಾರನ್ನು ತಳ್ಳಿ ಹಾಕಿದೆ. ಅಮೇರಿಕ ಬೇರೆ ಇನ್ನಾವು ದಾದರೂ ತಕರಾರು ಸಲ್ಲಿಸಬಹುದು.

ಹಲವು ಪರಿಸರ ಪರ ಗುಂಪುಗಳೂ ಈ ಬಗ್ಗೆ ಪ್ರತಿಭಟನೆ ಮಾಡುತ್ತಿವೆ. ಇಲ್ಲಿ ಪರಿಸರದ ವಿಷಯವನ್ನು ಹೇಗೆ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂಬುದು ಗಮನಾರ್ಹವಾದ ವಿಷಯ.

ನಾಶದ ಅಂಚಿನಲ್ಲಿರುವ ಸಮುದ್ರ ಆಮೆಯನ್ನು ರಕ್ಷಿಸಬೇಕೆಂಬುದರ ಬಗ್ಗೆ ಎರಡು ಮಾತಿಲ್ಲ. ಆದರೆ ಈ ನೆಪದಲ್ಲಿ ಲಕ್ಷಗಟ್ಟಲೆ ಜನರ ಜೀವನವನ್ನು ದುರ್ಬಲಗೊಳಿಸುವುದರ ವಿರುದ್ಧ ಧ್ವನಿಯೆತ್ತಲೇ ಬೇಕಾಗುತ್ತದೆ. ಯಾಕೆಂದರೆ ಅಭಿವೃದ್ಧಿ ಹೊಂದಿದ ದೇಶಗಳು ಮಾಡುತ್ತಿರುವ ಪರಿಸರ ನಾಶ ಅಭಿವೃದ್ಧಿ ಶೀಲ ದೇಶಗಳು ಮಾಡುತ್ತಿರುವುದಕ್ಕಿಂತ ಹಲವು ಪಟ್ಟು ಹೆಚ್ಚು. ಆದ್ದರಿಂದ ಈಗ ದೇಶಗಳಿಗೆ ಭೂಮಿಯ ಒಟ್ಟಾರೆ ಪರಿಸರ ಸಂರಕ್ಷಿಸುವ ಜವಾಬ್ದಾರಿ ಇದೆ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಅಭಿವೃದ್ಧಿ ಶೀಲ ದೇಶಗಳು ಮತ್ತು ಬಡ ದೇಶಗಳಿಗೆ ನೆರವು ನೀಡಬೇಕಾದ ಜವಾಬ್ದಾರಿ ಅಭಿವೃದ್ಧಿ ಹೊಂದಿದ ದೇಶಗಳದ್ದು. ಅದಕ್ಕೆ ಬದಲು ಅಭಿವೃದ್ಧಿ ಶೀಲ ಮತ್ತು ಬಡ ದೇಶಗಳಿಗೆ ತೊಂದರೆ ನೀಡುವ ಪ್ರತಿಬಂಧಕ ಕ್ರಮಗಳನ್ನು ಅಭಿವೃದ್ಧಿ ಹೊಂದಿದ ದೇಶಗಳು ಕೈಗೊಳ್ಳುತ್ತಿವೆ. ಕೆಲವು ಪರಿಸರವಾದಿ ಗುಂಪುಗಳೂ ಈ ದಿಸೆಯಲ್ಲಿ ಸಾಮ್ರಾಜ್ಯ ಶಾಹಿ ದೇಶಗಳಿಗೆ ನೇರವು ನೀಡುತ್ತಿವೆ ಎಂಬುದನ್ನು ಗಮನಿಸಬೇಕಾಗುತ್ತದೆ.

ವಿದೇಶೀ ಹೂಡಿಕೆ ಬಾರದೇ ಹಿಂಜರಿತಕ್ಕೆ ಕಾರಣ

ಔದ್ಯಮಿಕ ಹಿಂಜರಿತ ಯಾಕೆ ಉಂಟಾಯಿತು ಎಂಬ ಜಿಜ್ಞಾಸೆಯಲ್ಲಿ ಉದಾರೀಕರಣವಾದಿಗಳು ಬಿದ್ದಿದ್ದಾರೆ. ಏಸ್ಕಾಪ್ ಎಂಬ ಸಂಸ್ಥೆ ಒಂದು ಸಮೀಕ್ಷೆ ನಡೆಸಿ ಈ ಹಿಂಜರಿತಕ್ಕೆ ಕಾರಣ ಕಂಡುಕೊಂಡಿದೆ. ಅದರ ಪ್ರಕಾರ ಭಾರತ ವಿದೇಶೀ ನೇರ ಹೂಡಿಕೆ ಆಕರ್ಷಿಸುವಲ್ಲಿ ವಿಫಲವಾಗಿರುವುದೇ ಇದಕ್ಕೆ ಕಾರಣ.

ಕಳೆದ ಸಾಲಿನಲ್ಲಿ ಔದ್ಯಮಿಕ ಹಿಂಜರಿತ ವಿದ್ದರೂ ಕೃಷಿ ಕ್ಷೇತ್ರದಲ್ಲಿ ಬೆಳವಣಿಗೆ ಇದ್ದುದರಿಂದ ಒಟ್ಟಾರೆ ಪರಿಣಾಮ ಅಷ್ಟೊಂದು ತೀವ್ರವಾಗಿರಲಿಲ್ಲ. ಈ ಅಂತರ್ರಚನಾ ಸೌಲಭ್ಯಗಳ ಉದ್ದಿಮೆಗಳಾದ ವಿದ್ಯುತ್, ಕಲ್ಲಿದ್ದಲು, ಉಕ್ಕು, ಸಿಮೆಂಟ್, ರಸಗೊಬ್ಬರ, ಕಚ್ಚಾತೈಲ, ಮತ್ತು ಪೆಟ್ರೋಲಿಯಂ ಉತ್ಪನ್ನ ಇವುಗಳಲ್ಲಿ ಬೆಳವಣಿಗೆಯ ಪ್ರಮಾಣ ಬರೀ ಶೇ 2.9 ರಷ್ಟಿದೆ.

ಆರ್ಥಿಕ ಸುಧಾರಣೆಗಳ ಕ್ರಮಗಳನ್ನು ಇನ್ನು ವೇಗದಿಂದ ಮಾಡದೇ ಇದ್ದುದರಿಂದ ಈ ಹಿಂಜರಿತ ಉಂಟಾಗಿದೆ ಎಂದೂ ಅದು ಹೇಳಿದೆ.

ಉದಾರೀಕರಣದ ಕ್ರಮಗಳ ಒಟ್ಟಾರೆ ಸೋಲು ಎಂಬುದನ್ನು ಉದಾರೀಕರಣ ವಾದಿಗಳು ಒಪ್ಪಿಕೊಳ್ಳುತ್ತಿಲ್ಲ. ಈಗ ಮಾಡಿ ರುವ ಉದಾರೀಕರಣದಿಂದಾಗಿ ಆರ್ಥಿಕ ಬೆಳವಣಿಗೆ ಅಪಾರ ಪ್ರಮಾಣದಲ್ಲಿ ಆಗ ಬೇಕಾಗಿತ್ತು. ಯಾಕೆಂದರೆ ಉದಾರೀಕರಣ ವಾದಿಗಳ ಪ್ರಕಾರ ಉದಾರೀಕರಣ ದಿಂದ ಆರ್ಥಿಕಕ್ಕೆ ಚಾಲನೆ ಉಂಟಾಗುತ್ತದೆ. ಆದರೆ ಹಾಗಾಗುವ ಬದಲು ಈಗ ಹಿಂಜರಿತ ಉಂಟಾಗಿದೆ. ಬಂಡವಾಳಶಾಹಿ ದಾರಿ ಹೇಗೆ ಬಿಕ್ಕಟ್ಟುಗಳನ್ನೇ ಸೃಷ್ಟಿಸುತ್ತದೆ ಎಂಬುದಕ್ಕೆ ಇದು ಒಳ್ಳೆಯ ಉದಾಹರಣೆ. ಉದಾರೀಕರಣ ವಾದಿಗಳು ಈಗ ಇದನ್ನು ವಿವರಿಸಲಾಗದೇ ಉದಾರೀಕರಣದ ರೀತಿಯಲ್ಲೇ ಇಂದಿನ ಬಿಕ್ಕಟ್ಟಿನ ಕಾರಣ ಗಳನ್ನು ಹುಡುಕುತ್ತಿದ್ದಾರೆ.

ಉದಾರೀಕರಣದ ನೋವಿಗೆ ಪ.ಬಂಗಾಳ ಸರ್ಕಾರದ ಪರಿಹಾರ

ಈ ಬಗ್ಗೆ ಬಂಡವಾಳಶಾಹಿಗಳ ಪರವಿರುವ ಎಡವಿರೋಧಿ ಪತ್ರಕರ್ತರು ಪ. ಬಂಗಾಳ ಸರ್ಕಾರವನ್ನೇ ಟೀಕಿಸಿದ್ದಾರೆ. ಆದರೆ ಇಂತಹ ಪರಿಹಾರವನ್ನು ಬೇರಾವ ರಾಜ್ಯ ಸರ್ಕಾರ ನೀಡದೇ ಹೋದರೂ ಪ.ಬಂಗಾಳ ಸರ್ಕಾರ ನೀಡಿದೆ.

ಈ ಸಾಲಿನ ಬಜೆಟ್ಟಿನಲ್ಲಿ 50 ಕೋಟಿ ರೂಪಾಯಿಗಳಷ್ಟನ್ನು ಪ.ಬಂಗಾಳ ಸರ್ಕಾರ ಈ ಯೋಜನೆಗಾಗಿ ತೆಗೆದಿರಿಸಿದೆ. ಈ ಯೋಜನೆ ಉದ್ದಿಮೆ ಘಟಕಗಳು ಮುಚ್ಚುವುದರಿಂದ ಉಂಟಾಗುವ ನಿರುದ್ಯೋಗಕ್ಕೆ ಪರಿಹಾರ ಒದಗಿಸುತ್ತದೆ.

ಇಂತಹ ಮುಚ್ಚುವಿಕೆಯಿಂದ ನಿರುದ್ಯೋಗಿಗಳಾಗುವವರಿಗೆ ತಿಂಗಳಿಗೆ 500 ರೂಪಾಯಿಗಳ ಪರಿಹಾರವನ್ನು ನೀಡುತ್ತಿದೆ. ಉದ್ಯೋಗ ಕಳೆದುಕೊಂಡು ಬೀದಿಪಾಲಾಗಿ ದಿಕ್ಕುಕಾಣದೇ ಹೋಗುವವರಿಗೆ ಇದು ಅಲ್ಪ ಪರಿಹಾರವೆಂಬುದು ನಿಜ ಆದರೆ ಖಂಡಿತವಾಗಿಯೂ ಇದು ಪರಿಹಾರ.

ಇದರ ವಿರೋಧಿಗಳ ಟೀಕೆ ಪರಿಹಾರ ಸಂಘಟಿತ ವಲಯದ ಕಾರ್ಮಿಕರಿಗೆ ಮಾತ್ರ ದೊರೆಯುತ್ತಿದೆ. ಅಸಂಘಟಿತ ವಲಯದ ಕಾರ್ಮಿಕರ ಪಾಡೇನು? ಅಸಂಘಟಿತ ವಲಯದ ಕಾರ್ಮಿಕರಿಗೂ ಪರಿಹಾರ ನೀಡಬೇಕಾದದ್ದು ನ್ಯಾಯವೇ. ಹಾಗೆಯೇ ದೇಶದ ಎಲ್ಲರಿಗೂ ಉದ್ಯೋಗ ನೀಡಬೇಕಾದುದೂ ಸರ್ಕಾರದ ಕರ್ತವ್ಯ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಸರ್ಕಾರ ಇಂತಹ ನೀತಿಯನ್ನು ಜಾರಿಗೆ ತರಬೇಕು. ಭಾರತ ಒಕ್ಕೂಟದಲ್ಲಿ ಕೇಂದ್ರ ಸರ್ಕಾರಕ್ಕಿರುವ ಸಂಪನ್ಮೂಲಗಳು ರಾಜ್ಯ ಸರ್ಕಾರಕ್ಕಿರುವುದಿಲ್ಲ. ಹಾಗೆಯೇ ಅಧಿಕಾರವೂ ಕೂಡ. ಹೀಗಿರುವಾಗ ರಾಜ್ಯ ಸರ್ಕಾರ ತನ್ನ ಮಿತಿಯಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಅಂತಹ ಮಿತಿಯಲ್ಲಿ ಸಿಪಿಐ(ಎಂ) ನೇತೃತ್ವದ ಪ.ಬಂಗಾಳ ಸರ್ಕಾರ ಉದ್ಯೋಗ ಕಳೆದು ಕೊಂಡವರಿಗೆ ಪರಿಹಾರ ನೀಡುವ ಯೋಜನೆ ಜಾರಿಗೆ ತಂದಿದೆ. ಉಳಿದ ರಾಜ್ಯ ಸರ್ಕಾರಗಳು ಇಂತಹ ನೀತಿಗಳನ್ನು ಅನುಸರಿಸುವವೆ?



ಏಪ್ರಿಲ್ 10

➡ ಕಾಡುಗಳ್ಳ ವೀರಪ್ಪನ್ ನ ಮೂವರು ಸಹಚರರು ಕರ್ನಾಟಕ -ತಮಿಳುನಾಡು ಜಂಟಿ ಕಾರ್ಯಾಚರಣೆ ಪಡೆಯ ಕಮಾಂಡರ್ ಮುಂದೆ ಶರಣಾಗತಿ.

➡ ಸರಕಾರದ ಖಜಾನೆ ಖಾಲಿಯಾಗಿದೆ 750 ಕೋಟಿ ರೂ. ಬಾಕಿಯಾದೆ ಎಂದು ಪ್ರತಿಪಕ್ಷದ ನಾಯಕ ಖರ್ಗೆಯವರ ಆರೋಪ

ಏಪ್ರಿಲ್ 11

➡ ತುಮಕೂರಿನ ಬಳಿ ಅಮಲಾಪುರದಲ್ಲಿ ಪ್ರಾಣಿವಧೆ ಪ್ರತಿಭಟನೆಯಲ್ಲಿ ಹಿಂಸಾಚಾರ -ಗಾಳಿಯಲ್ಲಿ ಗುಂಡು

ಏಪ್ರಿಲ್ 12

➡ ಲೋಕಸಭಾ ಚುನಾವಣೆಗಳಲ್ಲಿ ಹೀನಾಯ ಸೋಲಿಗೆ ಕಾರಣಗಳ ಅತ್ಮವಿಮರ್ಶೆ ಮಾಡಬೇಕು ಎಂದು ಜನತಾದಳ ಕಾರ್ಯಕರ್ತರಿಗೆ ದೇವೇಗೌಡರ ಸಲಹೆ.

ಏಪ್ರಿಲ್ 13

➡ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಮತ್ತು ಮನೆಗಳಿಗೆ ನೀಡುವ ಪರಿಹಾರದ ಪ್ರಮಾಣವನ್ನು ಹೆಚ್ಚಿಸಲು ರಾಜ್ಯಸರಕಾರದ ನಿರ್ಧಾರ -ಮೊದಲ ಕಂತಿನಲ್ಲಿ 25ಕೋಟಿ ರೂ.ಬಿಡುಗಡೆ.

➡ ರಾಮಗುಂಡಂ ವಿದ್ಯುತ್ ಕೇಂದ್ರದಲ್ಲಿ ಎರಡು ಘಟಕಗಳು ಕೆಟ್ಟಿದ್ದರಿಂದ ಅನಿಗದಿತ ಲೋಡ್ ಶೆಡ್ಡಿಂಗ್ ಜಾರಿಗೆ ಬಂದಿದೆಯೆಂದು ಕೆ.ಇ.ಬಿ. ವಿವರಣೆ.

ಏಪ್ರಿಲ್ 14

➡ ರಾಜ್ಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭ -549 ಕೇಂದ್ರಗಳಲ್ಲಿ 3ಲಕ್ಷ ವಿದ್ಯಾರ್ಥಿಗಳು.

ಏಪ್ರಿಲ್ 15

➡ ಕಾವೇರಿ ವಿವಾದದ ಬಗ್ಗೆ ಕರ್ನಾಟಕದೊಂದಿಗೆ ಮಾತುಕತೆಯಿಲ್ಲ, ನ್ಯಾಯಾಂಗದ ಮೂಲಕವೇ ಬಗೆ ಹರಿಸಿಕೊಳ್ಳುವುದಾಗಿ ತಮಿಳುನಾಡು ಮುಖ್ಯಮಂತ್ರಿಗಳು.


➡ ರಾಜ್ಯದ ಹಣಕಾಸು ಪರಿಸ್ಥಿತಿ ಸುಭದ್ರವಾಗಿದೆ ಎಂದು ವಿಧಾನ ಸಭೆಯಲ್ಲಿ ಸರಕಾರದ ಪ್ರತಿಪಾದನೆ -ಕಾಂಗ್ರೆಸ್ -ಬಿಜೆಪಿ ಸಭಾತ್ಯಾಗ

ಏಪ್ರಿಲ್ 16

➡ ಬೆಂಗಳೂರಿನಲ್ಲಿ ಲೋಕಶಕ್ತಿ 'ಕೃತಜ್ಞತಾ' ಸಮಾರಂಭ -ಪಟೇಲ್ ಸರಕಾರ ಬದಲಿಸಬೇಕೆಂದು ಜನತಾದಳ ಶಾಸಕರಿಗೆ ಹೆಗ್ಡೆ

➡ ಕಾವೇರಿ ಜಲವಿವಾದದ ಬಗ್ಗೆ ಕೇಂದ್ರಕ್ಕೆ ರಾಜ್ಯದ ಪ್ರತಿಭಟನಾ ಪತ್ರ ಕಳಿಸಿರುವುದಾಗಿ ಉಪ ಮುಖ್ಯಮಂತ್ರಿಗಳು

ಧಾರವಾಡದಲ್ಲಿ ಉಪನ್ಯಾಸ ಕಾರ್ಯಕ್ರಮ



ಕಾಂ. ಇ.ಎಂ.ಎಸ್. ಲಾಲ್‌ಸಲಾಮ್

ಏಪ್ರಿಲ್ 3, 1998 ರಂದು ಸಂಜೆ ಧಾರವಾಡ ವಿದ್ಯಾವರ್ಧಕ ಸಂಘದ ಸಭಾ ಭವನದಲ್ಲಿ ಸ್ಥಳೀಯ ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಸಮುದಾಯ, ವಿಮಾ ನೌಕರರ ಸಂಘ ಮತ್ತು ಟೆಲಿಕಾಂ ನೌಕರರ ಸಂಘ ಇವುಗಳ ಸಂಯುಕ್ತ ಆಶ್ರಯದಲ್ಲಿ ಭಾರತದ ಶ್ರೇಷ್ಠ ಹಾಗೂ ಆದರ್ಶ ಮಾರ್ಕ್ಸ್‌ವಾದಿಗಳಲ್ಲಿ ಒಬ್ಬರಾದ ಇ.ಎಂ.ಎಸ್. ನಂಬೂದರಿಪಾಡ್‌ರ ಸ್ಮಾರಕ ಉಪನ್ಯಾಸ ಏರ್ಪಡಿಸಲಾಗಿತ್ತು.

ಇ.ಎಂ.ಎಸ್. ನಿಕಟವರ್ತಿಗಳೂ, ಕೇರಳ ವಿಶ್ವವಿದ್ಯಾಲಯ ನಿವೃತ್ತ ಪ್ರಾಧ್ಯಾಪಕರು ಆದ ಪಿ.ಎನ್. ವರ್ಗೀಸ್ 'ಇ.ಎಂ.ಎಸ್. ವ್ಯಕ್ತಿ ಮತ್ತು ಸಂದೇಶ'ದ ಕುರಿತು ಉಪನ್ಯಾಸ ನೀಡಿದರು. ಇ.ಎಂ.ಎಸ್. ಪ್ರಾರಂಭದಲ್ಲಿ ತನ್ನ ಕುಟುಂಬದ ಹಾಗೂ ನಂಬೂದರಿ ಸಮಾಜದ ಸುಧಾರಣೆಯಲ್ಲಿ ಪಾಲ್ಗೊಂಡು, ನಂತರ ಕೇರಳದ ಹಾಗೂ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ಅಂತಿಮವಾಗಿ ಶ್ರಮಿಕ ವರ್ಗದ ಪರವಾಗಿ ಶೋಷಣಾ ರಹಿತ ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿ ಯುಗಪರಿವರ್ತಕರಾದ ವಿವಿಧ ಮಜಲುಗಳನ್ನು ವರ್ಗೀಸ್ ಹೃದಯಸ್ಪರ್ಶಿಯಾಗಿ ತಿಳಿಸಿದರು. ಅವರ ತ್ಯಾಗಮಯ ಸರಳತೆಯ, ಸಂಯಮದ, ಸಮಯ ಪ್ರಜ್ಞೆಯ, ಶಿಸ್ತಿನ, ಹಾಸ್ಯ ಪ್ರವೃತ್ತಿಯ, ಹಸನ್ಮುಖತೆಯ, ಸಂವಾದಶೀಲತೆಯ ತೊಂಬತ್ತು ವರ್ಷಗಳ ಸಾರ್ಥಕ ಜೀವನವು ಮುಂದಿನ ಪೀಳಿಗೆಗೆ ಮಾದರಿಯಾಗಲಿದೆ ಎಂದು ಹಾರೈಸಿದರು.

'ಇ.ಎಂ.ಎಸ್.- ಒಬ್ಬ ಮಾರ್ಕ್ಸ್‌ವಾದಿ ಸಿದ್ಧಾಂತವೇತ್ತ' ಎಂಬ ಕುರಿತು ಉಪನ್ಯಾಸ ನೀಡಿದ ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ಸದಸ್ಯರೂ, ರಾಜ್ಯ ಸಮಿತಿ ಕಾರ್ಯದರ್ಶಿಗಳೂ ಆದ ಪಿ.ರಾಮಚಂದ್ರರಾವ್ ಇ.ಎಂ.ಎಸ್. ಸಮಾಜವಾದದ ಕುರಿತು, ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಮುಂತಾದವರ ಗ್ರಂಥಗಳನ್ನು ಆಳವಾಗಿ ಅಧ್ಯಯನ ನಡೆಸಿದುದೇ ಅಲ್ಲದೆ, ಪ್ರಬುದ್ಧರಿಗೂ ಶ್ರೀಸಮಾನ್ಯರಿಗೂ ತಿಳಿಯುವಂತೆ ಅವುಗಳ ಕುರಿತು ವಿವರಣಾತ್ಮಕವಾಗಿ ಬರೆದ ಹಲವಾರು ಗ್ರಂಥಗಳನ್ನು, ಕೇರಳ ಹಾಗೂ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ವಿಷಯಗಳ ಕುರಿತಾದ ಅವರ ಬರಹಗಳನ್ನು ಪರಿಚಯಿಸಿದರು. 1957-59 ಮತ್ತು 1967-69ರ ಅವಧಿಗಳಲ್ಲಿ ಕೇರಳದಲ್ಲಿ ಸುಧಾರಣೆ, ಸಂಪೂರ್ಣ ಸಾಕ್ಷರತೆ, ಪಂಚಾಯತ್ ರಾಜ್ಯ, ಮುಂದೆ ದೇಶದ ಎಲ್ಲಾ ರಾಜ್ಯಗಳಿಗೆ ಮಾದರಿಯಾದುದನ್ನು ನೆನಪಿಸಿಕೊಟ್ಟರು. ಗಾಂಧೀಜಿ, ನೆಹರೂಜಿ ಕಂಡಕನಸುಗಳನನು, ಆದರ್ಶಗಳನ್ನು ಅವರ ಅನುಯಾಯಿಗಳು ಸ್ವಾತಂತ್ರ್ಯನಂತರದ ಐವತ್ತು ವರ್ಷಗಳಲ್ಲಿ ಸಾಧಿಸಲಾರದುದನ್ನು ಇ.ಎಂ.ಎಸ್. ಒಬ್ಬ ಪ್ರಯೋಗಶೀಲ ಮಾರ್ಕ್ಸ್‌ವಾದಿ ಸಿದ್ಧಾಂತಿವೇತ್ತರಾಗಿ ಸಾಧಿಸಿರುವುದನ್ನು ಉದಾಹರಿಸಿ ತಿಳಿಸಿದರು.



ಸಮುದಾಯದ ರಾಜ್ಯ ಉಪಾಧ್ಯಕ್ಷರೂ ಸ್ಥಳೀಯ ಅಧ್ಯಕ್ಷರೂ ಆದ ಸಿ.ಆರ್. ಭಟ್ ಸಂಸ್ಕೃತಿಯ ಕುರಿತು ಇ.ಎಂ.ಎಸ್.ರ ವಿಚಾರಧಾರೆಯನ್ನು ತಮ್ಮ ಉಪನ್ಯಾಸದಲ್ಲಿ ಪ್ರಸ್ತಾಪಿಸಿದರು. ದುಡಿಯುವ ಜನರೇ ಸಮಾಜದ ಸಂಪತ್ತು ಮತ್ತು ಸಂಸ್ಕೃತಿಗಳನ್ನು ಸೃಷ್ಟಿಸಿರುವವರೆಂದು ಇ.ಎಂ.ಎಸ್. ಮಾರ್ಕ್ಸ್‌ವಾದಿ ಲೋಕ ದೃಷ್ಟಿಯಿಂದ ವಿಶ್ಲೇಶಿಸಿರುವುದನ್ನು ಭಟ್ ತಿಳಿಸಿದರು. ವರ್ಗ ಸಮಾಜದಲ್ಲಿ ಅವುಗಳನ್ನು ಭೂಮಾಲಿಕರು, ಬಂಡವಾಳಶಾಹಿಗಳು, ಸಾಮ್ರಾಜ್ಯಶಾಹಿಗಳು ತಮ್ಮದಾಗಿಸಿಕೊಂಡಿರುವ ಸಮಕಾಲೀನ ಪರಿಸ್ಥಿತಿಯಲ್ಲಿ, ಸಮಾಜ ಪರಿವರ್ತನೆಗಾಗಿ ದುಡಿಯುವ ಜನರು ನಡೆಸುವ ಹೋರಾಟದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ - ತತ್ವಜ್ಞಾನ, ವಿಜ್ಞಾನ, ಕಲೆ, ಸಾಹಿತ್ಯ, ಸಮೂಹ ಮಾಧ್ಯಮಗಳಯೂ ಹೋರಾಡುವುದು ಅಗತ್ಯ ಎಂದು ಇ.ಎಂ.ಎಸ್. ನೀಡಿದ ಮಾರ್ಗದರ್ಶನವನ್ನು ಪರಿಚಯಿಸಿದರು. ಕರ್ನಾಟಕ ವಿ.ವಿ. ನಿವೃತ್ತ ಪ್ರಾಧ್ಯಾಪಕರಾದ ಸಮಾಜ ವಿಜ್ಞಾನ ಕೇಂದ್ರ ಗೌರವ ನಿರ್ದೇಶಕರಾದ ಡಾ|| ವಿ.ಎನ್. ದೇಶಪಾಂಡೆ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಆರ್.ಎಚ್. ಆಯಿ ಸ್ವಾಗತಿಸಿದರು. ಕರ್ನಾಟಕದ ಸಮಾಜ ವಿಜ್ಞಾನ ಕೇಂದ್ರದ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ್ ಕಾರ್ಯಕ್ರಮ ನಿರ್ವಹಿಸಿದರು. ಟೆಲಿಕಾಂ ನೌಕರರ ಸಂಘದ ಅಧ್ಯಕ್ಷರಾದ ಎಂ. ಸದಾನಂತ ಧನ್ಯವಾದ ಇತ್ತರು. ಸಿ.ಆರ್. ಶಾನಭಾಗ, ಖಾನ್, ಬಿ.ಐ.ಈಳಿಕೇರ ಪುಸ್ತಕ ಪ್ರದರ್ಶನ ಹಾಗೂ ಮಾರಾಟ ಮತ್ತು ಇ.ಎಂ.ಎಸ್.ರ ಕುರಿತು ಪತ್ರಿಕೆಗಳಲ್ಲಿದ್ದ ವೈವಿಧ್ಯಮಯ ಸುದ್ದಿಗಳ ಪ್ರದರ್ಶನ ಏರ್ಪಡಿಸಿದ್ದರು.

ಬೆಳಗಾವಿ

ಸವದತ್ತಿ ತಾಲೂಕು ಕರ್ನಾಟಕ ಪ್ರಾಂತ ರೈತ ಸಂಘವು ಮಾರ್ಚ್ 30ರಂದು ಅಗಲಿದ ರಾಷ್ಟ್ರದ ಮೇರು ನಾಯಕ ಕಾಂ|| ಇ.ಎಂ.ಎಸ್.ರವರಿಗೆ ಶ್ರದ್ಧಾಂಜಲಿ ಸಲ್ಲಿಸಿತು.

ಸಭೆಗೆ ಆಗಮಿಸಿದ ಎಸ್.ಎಚ್. ಕಪ್ಪಣ್ಣನವರು ಇ.ಎಂ.ಎಸ್.ರವರ ಸಾಧನೆಯನ್ನು ವಿವರಿಸಿ, ಅವರು ನಂಬಿದ್ದ ಸಿದ್ಧಾಂತವನ್ನು ಮುಂದಕ್ಕೊಂಡ್ಯೆಯ್ಯುವುದು ನಮ್ಮ ಕರ್ತವ್ಯ ಎಂದರು. ಜಿ.ಬಿ. ತೋರಗಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಅಭಿವೃದ್ಧಿ ಶಿಲ್ಕ ವಿರುದ್ಧ ಡಿ.ವೈ.ಎಫ್.ಐ. ಪ್ರತಿಭಟನೆ:

ರಾಜೀವ್ ಗಾಂಧಿ ನೇತೃತ್ವದ ಕೇಂದ್ರ ಸರ್ಕಾರ ಪಂಚಾಯತ್ ರಾಜ್ ಕಾಯಿದೆಗೆ 64ನೇ ತಿದ್ದುಪಡಿ ತಂದು ಗ್ರಾಮೀಣ ಪ್ರದೇಶವನ್ನು ಜಿಲಾ ಪಂಚಾಯತ್ ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಾಗಿ ವಿಂಗಡಿಸಿದರೆ ನಗರ ಪ್ರದೇಶಗಳನ್ನು ಮಹಾನಗರ ಪಾಲಿಕೆ ನಗರಸಭೆ ಮತ್ತು ಪುರಸಭೆಗಳನ್ನಾಗಿ ವಿಂಗಡಿಸಿತು.

ಬೆಂಗಳೂರಿನ ಹೊರವಲಯದ ರೆವಿನ್ಯೂ ನಿವೇಶನಗಳು ಮುಂಚೆ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಜನಸಂಖ್ಯೆ ಹೆಚ್ಚಾಗುತ್ತಿದ್ದ ಹಾಗೆ ನಿವೇಶನಗಳ ಬೇಡಿಕೆಯೂ ಹೆಚ್ಚಾಯಿತು. ನಂತರ ಕನಿಷ್ಠ ಸೌಲಭ್ಯಗಳಾದ ನೀರು, ರಸ್ತೆ, ಬೆಳಕು ಚರಂಡಿಗಳ ವ್ಯವಸ್ಥೆಗಾಗಿ ಸರ್ಕಾರ ಇಲ್ಲಿನ ನಿವಾಸಿಗಳಿಂದ ಅಭಿವೃದ್ಧಿ ಶುಲ್ಕ ವಸೂಲಿ ಮಾಡತೊಡಗಿತು.

ರೆವಿನ್ಯೂ ಪ್ರದೇಶಗಳನ್ನು ಅಧಿಸೂಚಿತ ಪ್ರದೇಶಗಳಾನ್ನಾಗಿ ಸರ್ಕಾರ ರೂಪಿಸಿತು. ಇದನ್ನು ನಗರ ಸಭೆಗೆ ಒಳಪಡಿಸಿತು. ನಗರ ಸಭೆಗಳ ಪ್ರತಿನಿಧಿಗಳು ಅಭಿವೃದ್ಧಿ ಶುಲ್ಕವಾಗಿ ಒಂದು ಚದುರ ಗಜಕ್ಕೆ 100ರೂ ವಸೂಲಿ ಮಾಡ ತೊಡಗಿದರು. ಮತ್ತೆ ಮಾರ್ಚ್ 31 ಕಡೆ ದಿನಾಂಕ ಗೊತ್ತುಮಾಡಿ ನಂತರ 200 ರೂ ನೀಡುವಂತೆ ಆದೇಶ ಹೊರಡಿಸಿತು. ಇದು ಇಲ್ಲಿನ ನಿವಾಸಿಗಳನ್ನ ಕಂಗೆಡಿಸಿತು. ಈ ದರದಲ್ಲಿ ಅಭಿವೃದ್ಧಿ ಶುಲ್ಕ ನೀಡಿದರೆ ನಿವೇಶನ ಒಂದಕ್ಕೆ 30-40 ಸಾವಿರ ಪಾವತಿಸ ಬೇಕಾಗುತ್ತದೆ. ಇದರಿಂದ ಮಧ್ಯಮ ವರ್ಗದವರೂ ತತ್ತರಿಸುವಂತಾಯಿತು. ಕೆಲವರು ನಿವೇಶನಗಳ ಮಾರುವತ್ತ ಯೋಚನೆ ಪ್ರಾರಂಭಿಸಿದರು.

ಡಿ.ವೈ.ಎಫ್.ಐ ನ ಪ್ರವೇಶ:

ಈ ಅವೈಜ್ಞಾನಿಕವಾದ ದರ ಮತ್ತು ವಸೂಲಿ ನಗರ ಸಭೆ ನಡೆಸಿರುವ ಹಗಲು ದರೋಡೆಯಾಗಿದೆ ಎಂದಿರುವ ಡಿ.ವೈ. ಎಫ್.ಐ. ಬೆಂಗಳೂರು ಹೊರ ವ್ಯಾಪ್ತಿಯಲ್ಲಿ ಬರುವ 6 ನಗರ ಸಭೆ ಹಾಗೂ 2 ಪುರಸಭೆಗಳ ಪ್ರದೇಶಗಳ ಒಟ್ಟು ಅಭಿವೃದ್ಧಿಗೆ 198 ಕೋಟಿ ರೂ. ಬೇಕೆಂದು ಸರ್ಕಾರಕ್ಕೆ ವರದಿ ಸಲ್ಲಿಸಿ ವಸೂಲಿಗೆ ಅನುಮತಿ ಪಡೆದಿದೆ. ಆದರೆ ನಗರ ಸಭೆಯೊಂದರಲ್ಲಿ 50 ಸಾವಿರ ನಿವೇಶನಗಳಿದ್ದು ಈ ರೀತಿಯ ವಸೂಲಿಯಿಂದ 560 ಕೋಟಿ ರೂ. ಸಂಗ್ರಹವಾಗುತ್ತಿದೆ. ಹಾಗಾದರೆ ಈ ಹೆಚ್ಚಿನ ಹಣ ಏತಕ್ಕಾಗಿ? ಈ ಹಿಂದೆ ವಸೂಲಿ ಮಾಡಿರುವ ಹಣ ಎಲ್ಲಿ? ರಸ್ತೆ ಎಲ್ಲಿ, ಚರಂಡಿ ಗಳೆಲ್ಲಿ? ಬೀದಿ ದೀಪಗಳೆಲ್ಲಿ, ಬಸ್ ಸೌಕರ್ಯ ವೆಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳೆಲ್ಲಿ ಎಂದು ನಗರ ಸಭೆ ಜನರಿಗೆ ವಿವರಿಸಬೇಕು ಎಂದಿದೆ.

ಜಾರಿಕೊಂಡ ಜಿಲ್ಲಾಧಿಕಾರಿ:

ಇಂತಹ ಕ್ರಮವನ್ನು ಪ್ರತಿಭಟಿಸಿ ಜನವರಿ 20 ರಂದು ಮಹಾನಗರ ಪಾಲಿಕೆ ವೃತ್ತದಿಂದ ಡಿವೈಎಫ್ಐ ನೇತೃತ್ವದಲ್ಲಿ ಸಾವಿರಾರು ನಿವಾಸಿಗಳು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿಗಳು ಸರ್ಕಾರದ ಜೊತೆ ಮಾತನಾಡಿ ಫೆ.15ಕ್ಕೆ ತಿಳಿಸುತ್ತೇವೆಂದು ಹೇಳಿ ಜಾರಿಕೊಂಡರು. ನಂತರ ಯಾರಿಂದಲೂ ಯಾವ ಪ್ರತಿಕ್ರಿಯೆಯೂ ನಿವಾಸಿಗಳಿಗೆ ರವಾನೆಯಾಗಲಿಲ್ಲ.

ನಗರ ಸಭೆಗಳ ಮುಂದೆ ಧರಣಿ:

ಸರ್ಕಾರವನ್ನು ಎಚ್ಚರಿಸಬೇಕಾದರೆ ತೀವ್ರ ಪ್ರತಿಭಟನೆಯೇ ದಾರಿ ಎಂದು ಮನಗಂಡ ಡಿ.ವೈ.ಎಫ್.ಐ ಪ್ರತಿ ನಗರ ಸಭೆಯ ವ್ಯಾಪ್ತಿಯಲ್ಲಿ ಸಮಾವೇಶ ಮಾಡಿ ಕಛೇರಿ ಮುಂದೆ ಪ್ರತಿಭಟನೆ ಧರಣಿ ಮಾಡಿ ತೊಡಗಿತು.



ಕೆ.ಆರ್.ಪುರ ಮತ್ತು ಮಹದೇವಪುರ;

ಮಾರ್ಚ್ 8 ರಂದು ಸಾವಿರಾರು ನಿವಾಸಿಗಳು ಸಮಾವೇಶ ನಡೆಸಿದರು. ವರ್ತೂರಿನ ಜಯರಾಮು, ರಾಮಚಂದ್ರ, ರವೇಶ್, ವಕೀಲರಾದ ನಾಗಮೋಹನ ದಾಸ್ ಕೆ.ಪ್ರಕಾಶ್, ಪಿ.ಜಗನ್ನಾಥ್ ಹೆಚ್.ಎನ್. ಗೋಪಾಲಗೌಡ ಮಾತನ್ನಾಡಿ. ಸರ್ಕಾರದ ಈ ಆದೇಶವನ್ನು ಖಂಡಿಸಿದರು. ಕೊನೆಯಲ್ಲಿ ಸಹಿ ಸಂಗ್ರಹ ಮಾಡಲಾಯ್ತು.

ಟಿ. ದಾಸರಹಳ್ಳಿ:

ಫೆ. 8 ರಂದು ಬೃಹತ್ ಸಮಾವೇಶ ಸೇರಿ ತುಮಕೂರು ರಸ್ತೆಯಲ್ಲಿ ರಸ್ತೆ ತಡೆ ನಡೆಸಲಾಯ್ತು. ಟಿ.ಎಂ. ರಾಮಕೃಷ್ಣ, ಗಂಗರಾಜು, ವೀರಭದ್ರ ಮತ್ತು ಗುರುಪ್ರಸಾದ್ ಮುಖಂಡತ್ವದಲ್ಲಿ 5 ಸಾವಿರ ಜನರು ಭಾಗವಹಿಸಿದ್ದರು. ಪಿ.ಜಗನ್ನಾಥ್ ಮತ್ತು ಗೋಪಾಲಕೃಷ್ಣ ಭಾಗವಹಿಸಿದ್ದರು.

ಪಟ್ಟಣ ಗೆರೆ:

ಮಾರ್ಚ್ 17 ರಂದು ಸೆನೆಟ್ ಸದಸ್ಯೆ ಲಕ್ಷ್ಮಿ, ಶಿವಣ್ಣಗೌಡ, ನಾಗರಾಜ್ ಸನಾತನ ಮೂರ್ತಿ, ಮಧುರ ಜೊಸೆಫ್ ನೇತೃತ್ವದಲ್ಲಿ ಸಮಾವೇಶ ನಡೆಯಿತು. ಮಾರ್ಚ್ 19ಕ್ಕೆ ನಗರ ಸಭೆ ಮುತ್ತಿಗೆ ಹಾಕಲಾಯಿತು. ಸಾವಿರಾರು ಜನರು ಸ್ವಯಂ ಸ್ಫೂರ್ತಿಯಿಂದ ಬಂದ ಭಾಗವಹಿಸಿದರು.

ಬೊಮ್ಮನಹಳ್ಳಿ

ಶಾಮಣ್ಣರೆಡ್ಡಿ, ಎಂ. ಲಕ್ಷ್ಮಣ, ರಾಮು, ವೆಂಕಟೇಶ್, ಪ್ರಕಾಶ್, ಸಿದ್ಧಯ್ಯ, ಶಿವರೆಡ್ಡಿ, ಲಕ್ಷ್ಮಣ ಕುಮಾರ್ ಮತ್ತು ಅವರ ನೇತೃತ್ವದಲ್ಲಿ ಹಳ್ಳಿ ಹಳ್ಳಿಗಳಲ್ಲಿ ಸಭೆ ನಡೆಸಿ ಮಾರ್ಚ್ 11ಕ್ಕೆ ಸಮಾವೇಶ ನಡೆಸಲಾಯಿತು. ಸಾವಿರಾರು ಜನ ಪಾಲ್ಗೊಂಡು 13 ರಂದು ಸಿ.ಎಂ.ಸಿ.ಗೆ ಮುತ್ತಿಗೆ ಹಾಕಲಾಯಿತು.

ಮುಖ್ಯಮಂತ್ರಿ ಮನೆ ಮುಂದೆ

ಎಲ್ಲ ನಗರ ಸಭೆ ಆಯುಕ್ತರು ಈ ಆದೇಶದ ಬಗ್ಗೆ ಸರ್ಕಾರದ ಕಡೆ ಬೊಟ್ಟು ಮಾಡಿದ್ದರಿಂದ ಮುಖ್ಯಮಂತ್ರಿ ಮನೆ ಮುಂದೆ ಏಪ್ರಿಲ್ 3 ರಂದು 6 ಸಾವಿರ ಜನರು ಧರಣಿ ನಡೆಸಿದರು. ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿ ಈ ವಸೂಲಿ ಕ್ರಮ ಕೈಬಿಡುವಂತೆ ಒತ್ತಾಯಿಸಿದರು. ಸಚಿವ ಸೋಮಣ್ಣ ಮುಖ್ಯಮಂತ್ರಿಗಳ ಪರವಾಗಿ ಮಾತನಾಡಿ ಏಪ್ರಿಲ್ 7ರಂದು ಸಭೆ ಕರೆದು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಏಪ್ರಿಲ್ 7ಕ್ಕೆ ವಿಧಾನ ಸೌಧಕ್ಕೆ ಹೋದರೆ ಅನಂತನಾಗ್ ಕಡೆ, ಅನಂತನಾಗ್ ಮಹಾ ಪೌರರ ಕಡೆ ತೋರಿಸತೊಡಿಗಿದ್ದಾರೆ.

ಬೇಜವಾಬ್ದಾರಿ ಮಂತ್ರಿಗಳು ಹಾಗೂ ಅಧಿಕಾರಿಗಳು ಜನತೆಯ ಸಮಸ್ಯೆ ಪರಿಹಾರಕ್ಕೆ ಗಮನ ಹರಿಸದೆ ನುಣಚಿಕೊಳ್ಳ ತೊಡಗಿರುವುದರಿಂದ ಮುಂದಿನ ಹೋರಾಟದ ಅಂಗವಾಗಿ ಹೆದ್ದಾರಿ ತಡೆ ಹಾಗೂ ಸಚಿವರಿಗೆ ಘೇರಾವ್ ಕಾರ್ಯಕ್ರಮ ರೂಪಿಸಲಾಗಿದೆ.

ವಸೂಲಿ ಮುಂದಕ್ಕೆ

ಡಿ.ವೈ.ಎಫ್.ಐ.ನ ತೀವ್ರ ಪ್ರತಿಭಟನೆಯಿಂದಾಗಿ ಮಾರ್ಚ್ 31ಕ್ಕೆ ನಿಗದಿಯಾಗಿದ್ದ ವಸೂಲಿ ದಿನಾಂಕವನ್ನು ಜೂನ್ 30ಕ್ಕೆ ಮುಂದೂಡಲಾಗಿದೆ.

ಡಿವೈಎಫ್ಐ ಜಿಲ್ಲಾ ಸಮ್ಮೇಳನ

ಡಿವೈಎಫ್ಐ ಬೆಂಗಳೂರು 6ನೇ ಜಿಲ್ಲಾ ಸಮ್ಮೇಳನ ಕೆ.ಆರ್.ಪುರಂನ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ದಿನಾಂಕ 25-26, ಏಪ್ರಿಲ್ 98 ರಂದು ನಡೆಯಲಿದ್ದು ಇದರಲ್ಲಿ ಸುಮಾರು 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅಭಿವೃದ್ಧಿ ಶುಲ್ಕ ಏರಿಕೆ ವಿರುದ್ಧ ಹೋರಾಟದ ಸಂದರ್ಭದಲ್ಲಿ ನಡೆಯುತ್ತಿರುವ ಈ ಸಮ್ಮೇಳನವು ಬೆಂಗಳೂರಿನ ಯುವಜನರ ಸಮಸ್ಯೆಗಳನ್ನು ಚರ್ಚಿಸಲಿದೆ.

ಈ ಸಮ್ಮೇಳನಕ್ಕೆ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಇದರ ಅಧ್ಯಕ್ಷರಾಗಿ ವೆಂಕಟೇಶ್ ಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಗೋಪಾಲಕೃಷ್ಣ, ಕಾರ್ಯಾಧ್ಯಕ್ಷರಾಗಿ ಗೋಪಾಲಗೌಡ ಹೆಚ್.ಎನ್. ಇದ್ದಾರೆ.

ಇದೇ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಕೂಡ ಹೊರತರಲಾಗುತ್ತಿದೆ ಎಂದು ತಿಳಿಸಲಾಗಿದೆ.

ಇಲ್ಲಿ ನೋಡಿ, ನಿಜ ಅಜೆಂಡಾ ಅನಾವರಣಗೊಳ್ಳುತ್ತಿದೆ

- ಸೀತಾರಾಂ ಯೆಚೂರಿ

ಈ ಸರಕಾರದ ಮೊತ್ತಮೊದಲ ವಾರದಲ್ಲೇ ಕೈಗೊಂಡ ಈ ನಿರ್ಣಯಗಳು, ನೀಡಿದ ನಿರ್ದೇಶನಗಳು ಈ ಸರಕಾರ ಎರಡು ಹಂತಗಳಲ್ಲಿ ಬಚ್ಚಿಟ್ಟ ಅಜೆಂಡಾಗಳನ್ನು ಅನುಸರಿಸುವ ಸೂಚನೆಗಳನ್ನು ಸ್ಪಷ್ಟವಾಗಿ ತೋರಿವೆ -ಒಂದು ಹಂತದಲ್ಲಿ ,ಆಧುನಿಕ ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವದ ಸ್ತಂಭಗಳನ್ನು ನಾಶಮಾಡುವ ಬಚ್ಚಿಟ್ಟ ಅಜೆಂಡಾ; ಇನ್ನೊಂದು ಹಂತದಲ್ಲಿ ,ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ನಾಶಮಾಡಿ ಆಡಳಿತವನ್ನು ದುಷ್ಟ ಶಕ್ತಿಗಳ ಕೈಯಲ್ಲಿ ಇಡುವ ಬಚ್ಚಿಟ್ಟ ಅಜೆಂಡಾ.ಕೇವಲ ಬಿಜೆಪಿಯನ್ನು ಅಧಿಕಾರದಲ್ಲಿಡಲು ನಮ್ಮ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಲಾಗುತ್ತಿದೆ ಎನ್ನುತ್ತಾರೆ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಸದಸ್ಯರು ಹಾಗೂ ರಾಜಕೀಯ ವಿಶ್ಲೇಷಕರೂ ಆದ ಕಾಂ|| ಸೀತಾರಾಂ ಯೆಚೂರಿಯವರು. ಯಾವುದು ಈ ನಿರ್ಣಯಗಳು, ಈ ನಿರ್ದೇಶನಗಳು - ಈ ಲೇಖನ ನೋಡಿ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರದ ಮೊದಲ ವಾರದಲ್ಲೇ ಜನಗಳನ್ನು ಮರುಳು ಮಾಡಲು ಅಡಗಿಸಿಟ್ಟ ನಿಜ ಅಜೆಂಡಾ ಸ್ಪಷ್ಟವಾಗಿ ಪ್ರಕಟ ಗೊಳ್ಳುತ್ತಿದೆ.ನಿಜ ಹೇಳಬೇಕೆಂದರೆ, ಎರಡು ಅಜೆಂಡಾಗಳು ಪ್ರಕಟಗೊಂಡಿವೆ.

ಒಂದು, ರಾಷ್ಟ್ರೀಯ ಅಜೆಂಡಾದಲ್ಲಿ ಪಕ್ಕಾ ಕೋಮುವಾದಿ ಪ್ರಶ್ನೆಗಳನ್ನು ಬಿಟ್ಟಂತೆ ತೋರಿಕೊಂಡರೂ ತಮ್ಮ ನಿಜ ಅಜೆಂಡಾ ಆರ್. ಎಸ್. ಎಸ್. ನ 'ಹಿಂದೂರಾಷ್ಟ್ರ'ದ ಕರ್ನ್ಯೋಟವೇ ಎಂಬುದು ಅವರ ವಿವಿಧ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ, ಎರಡನೆ ಯದಾಗಿ, ಬಿಜೆಪಿಯ ಸರಕಾರೀ ಮಿತ್ರರ ಅಜೆಂಡಾ. ಇವೆಂದರೆ ತಮ್ಮ ವಿರೋಧಿಗಳ ಸರಕಾರಗಳನ್ನು ವಜಾ ಮಾಡುವುದರಿಂದ ಹಿಡಿದು ಜಯಲಲಿತಾ ಅಥವಾ ಸುಖರಾಂ ವಿಧದ ಭ್ರಷ್ಟಾಚಾರಗಳನ್ನು ಮುಚ್ಚಿ ಹಾಕುವುದು.

ಲೋಕಸಭೆಯಲ್ಲೂ, ರಾಜ್ಯಸಭೆ ಯಲ್ಲೂ ರಾಷ್ಟ್ರಪತಿಗಳ ಭಾಷಣದ ಮೇಲಿನ ಚರ್ಚೆಗೆ ಉತ್ತರದಲ್ಲಿ ಬಿಜೆಪಿ ಕೇವಲ ಆರ್. ಎಸ್. ಎಸ್. ನ ರಾಜಕೀಯ ಅಂಗವಾಗಿ ಕೆಲಸ ಮಾಡುತ್ತದೆ ಎಂಬ ಬಗ್ಗೆ ಸಂದೇಹವುಳಿದಿಲ್ಲ. ಬಿಜೆಪಿ 'ಒಂದು ರಾಜಕೀಯ ಪಕ್ಷವಾಗಿ' ಕೋಮುವಾದಿ ಅಜೆಂಡಾಕ್ಕೆ ಅತ್ಯುನ್ನತ ಪ್ರಾಶಸ್ತ್ಯ ನೀಡುತ್ತದೆ ಎಂದು ಪ್ರಧಾನ ಮಂತ್ರಿಗಳು, ಗೃಹ ಮಂತ್ರಿಗಳು ಬಹಿರಂಗವಾಗಿಯೇ ಸಂಕೇತ ನೀಡಿದ್ದಾರೆ.ಇಲ್ಲಿ ಬಿಜೆಪಿಯ ಪರವಾಗಿರುವ ಹೊಗಳು ಭಟ್ಟಂಗಿ ಮಾಧ್ಯಮ ಜನಗಳು ಮರೆಯುವಂತೆ ಮಾಡದಿರಲು ಒಂದು ವಿಷಯವನ್ನು ಪುನರುಚ್ಚರಿಸಬೇಕಾಗುತ್ತದೆ. ಅದೇನೆಂದರೆ, ಹಿಂದಿನ ಸಲ ಕೂಡಾ ಆರ್. ಎಸ್.. ಎಸ್. ಮತ್ತದರ ಅಂಗ ಸಂಘಟನೆಗಳು ಅಯೋಧ್ಯೆ ಪ್ರಶ್ನೆಯಲ್ಲಿ ಭಾವ ವೇಶಪೂರ್ಣ ಚಳುವಳಿ ಎಬ್ಬಿಸಿದಾಗ ಎದು ತನ್ನ ಅಜೆಂಡಾದಲ್ಲಿಲ್ಲ ಎಂದು ಸಾರ್ವ ಜನಿಕವಾಗಿ ಸಾರಿದ ಬಿಜೆಪಿ ಅನುಕೂಲ ಸಂದರ್ಭ ಬಂದೊಡನೆ ನೇತೃತ್ವವನ್ನು ವಹಿಸಿ ಕೊಂಡಿತು - ತನ್ನ ಚುನಾವಣಾ ಚಿಹ್ನೆಯನ್ನು ಪ್ರದರ್ಶಿಸುತ್ತಾ 'ರಥಯಾತ್ರೆ' ಹೊರಟಿತು.

'ಅನುಕೂಲಗಳಿಗೆ' ಸೃಷ್ಟಿ

ಇಂದಿನ ಸನ್ನಿವೇಶವೂ ಅದೇ ರೀತಿಯದ್ದು.ತಾನು ರಾಷ್ಟ್ರೀಯ ಅಜೆಂಡಾಕ್ಕೆ ಬದ್ಧ ಎಂದು ಬಿಜೆಪಿ ಸಾರ್ವಜನಿಕವಾಗಿ ಹೇಳಿಕೊಂಡರೆ, ವಿಹೆಚ್‌ಪಿ, ಭಜರಂಗ ದಳ ಇತ್ಯಾದಿ ಆರ್‌ಎಸ್‌ಎಸ್‌ನ ಇತರ ಅಂಗ ಗಳು ನಾಲ್ಕು ಕೋಮುವಾದಿ ಪ್ರಶ್ನೆಗಳು ಅಂದರೆ ಅಯೋಧ್ಯೆ,370ನೇಕಲಮಿನ ರದ್ಧತಿ, ಏಕರೂಪದ ನಾಗರಿಕ ಸಂಹಿತೆ ಹಾಗು ಕಾಶಿ,ಮಥುರಾಗಳ ಮಸೀದಿಗಳ 'ವಿಮೋಚನೆ'(ಧ್ವಂಸ ಎಂದು ಓದಿಕೊಳ್ಳಿ) ಇವುಗಳ ಮೇಲೆ ಪ್ರಚಾರ ನಡೆಸುತ್ತವೆ.ಈ ಬಾರಿ ಇಂತಹ ಪ್ರಚಾರಕ್ಕೆ ಸರಕಾರೀ ಶಕ್ತಿಯ ಬಲಿಷ್ಟ ಬೆಂಬಲ ಬೇರೆ ಇರುತ್ತದೆ.ಇಂತಹ ಸನ್ನಿವೇಶದ ಅಪಾಯಕಾರಿ ಸಾಧ್ಯತೆಗಳನ್ನು ಅರಿಯಬೇಕು. ಕಳೆದ ಬಾರಿಯಂತೆ

> ಆರ್ಗನೈಸರ್ ಪತ್ರಿಕೆ ವರದಿಯ ಕೊನೆಯಲ್ಲಿ "ಸನ್ನಿವೇಶಗಳು ನಮಗೆ ಅನುಕೂಲಕರವಾದ ಕೂಡಲೇ" ದೇವಸ್ಥಾನ ಕಟ್ಟಬಹುದು ಎಂದು ಹೇಳಿದೆ. ಬಿಜೆಪಿ ಮತ್ತು ಕಾವಿಪಡೆಗಳ ಬಗ್ಗೆ ಹಿಂದಿನ ಅನುಭವದ ನೆರಳಲ್ಲಿ ಹೇಳುವುದಾದರೆ ಅವು ಒಂದು ಯೋಜನೆಯಂತೆ ಮುಂದೊತ್ತುತ್ತಿವೆ. ಜಾರ್ಜ್ ಫರ್ನಾಂಡೀಸ್, ರಾಮಕೃಷ್ಣ ಹೆಗ್ಗಡೆಯವರಂತಹ ಬಿಜೆಪಿಯ ಜಾತ್ಯಾತೀತರೆನಿಸಿಕೊಳ್ಳುವ ಮಿತ್ರರು ಬಿಜೆಪಿಯ ಈ ನಿಜ ಅಜೆಂಡಾದ ಬಗ್ಗೆ ಏನು ಹೇಳುತ್ತಾರೋ!

ಈಬಾರಿಯೂ ಬಿಜೆಪಿ ಅನುಕೂಲ ಗಳಿಗೆಗಾಗಿ ಕಾಯುತ್ತದೆಯಷ್ಟೆ.ಹಿಂದೆ ಇಡೀ ದೇಶ ಕೋಮುದಂಗೆಗಳಲ್ಲಿ ಸಾವಿರಾರು ಮುಗ್ಧ ಜೀವಗಳನ್ನು ಕಳಕೊಂಡಂತೆ ಈ ಬಾರಿ ಇನ್ನೂ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ.

ಇದು ಕಾವಿಪಡೆಗಳ ನಿಜವಾದ ಕಾರ್ಯತಂತ್ರ ಎಬ ಬಗ್ಗ ಇನ್ನೂ ಯಾರಿಗಾದರೂ ಸಂದೇಹ ಉಳಿದಿದ್ದಲ್ಲಿ ಅವರು ಆರ್. ಎಸ್. ಎಸ್. ನ ಮುಖವಾಣಿ 'ಆರ್ಗನೈಸರ್'ನ ಎಪ್ರಿಲ್ 1,1998ರ ಸಂಚಿಕೆಯನ್ನು ನೋಡು ವದೊಳ್ಳೆಯದು. ಆ ಸಂಚಿಕೆಯ ಕೊನೆಯ ಪುಟದಲ್ಲಿ ಒಂದು ವರದಿ ಹೀಗಿದೆ -"ಅಯೋಧ್ಯೆಯಲ್ಲಿ ದೇವ ಸ್ಥಾನಕ್ಕೆ ಸಾಮಗ್ರಿಗಳನ್ನು ಸಿದ್ಧಗೊಳಿಸುವಲ್ಲಿ ನಿರತರಾಗಿರುವ ಶಾಪ್‌ಗಳು". ವಾಸ್ತವವಾಗಿ, ಈನೆಲದ ಕಾನೂನನ್ನು ಯಾವುದೇ ನಾಚಿಕೆಯಿಲ್ಲದೆ ಉಲ್ಲಂಘಿಸಿ, ನಾಡಿನ ಅತ್ಯುಚ್ಚ ನ್ಯಾಯಾಲಯಕ್ಕೆ ನೀಡಿದ ವಚನವನ್ನು ಮುರಿದುದನ್ನು ಸಾರುವ ಈ ವರದಿ ರಾಜಸ್ಥಾನದಲ್ಲಿ ಮೂರು ವರ್ಕ್‌ಶಾಪುಗಳಲ್ಲಿಹಾಗೂ ಅಯೋಧ್ಯೆ ಯಲ್ಲಿ ಒಂದು ಕಡೆ ಕೆಲಸ ಭಾರೀ ವೇಗದಿಂದ ಸಾಗುತ್ತಿದೆ ಎಂದು ಹೇಳಿದೆ. -

"ದೇವಸ್ಥಾನದ ಮಾದರಿ ಗನುಗುಣವಾಗಿ ಶಿಲ್ಪಕಾರ್ಯ 1991ರಲ್ಲಿ ಅಯೋಧ್ಯೆಯ ರಾಮಘಾಟ್ ಪ್ರದೇಶದಲ್ಲಿನ ನ್ಯಾಸ ಕಾರ್ಯಶಾಲಾದಲ್ಲಿ ಆರಂಭವಾಗಿತ್ತು. ಅಂದಿನಿಂದ ರಾಜಸ್ಥಾನ, ಗುಜರಾತ, ಉತ್ತರಪ್ರದೇಶಗಳಿಂದ ಬಂದಿರುವ ನೂರಾರು ನುರಿತ ಶಿಲ್ಪಿಗಳು,ತಂತ್ರಜ್ಞರು ಕೆತ್ತನೆ ಕೆಲಸಗಳಲ್ಲಿ ಮಗ್ನರಾಗಿದ್ದಾರೆ. ಕೆಲಸವನ್ನು ತ್ವರಿತಗೊಳಿಸಲು ಟ್ರಸ್ಟ್ ಕಳೆದ ವರ್ಷ ಕೆಲವು ಅತ್ಯಾಧುನಿಕ ಯಂತ್ರಗಳನ್ನು ಸ್ಥಾಪಿಸಿದೆ.ರಾಜಸ್ಥಾನದ ಸಿರೋಹಿ ಜಿಲ್ಲೆಯ ಅಜರಿ ಮತ್ತು ಪಿಂದ್ವಾರಾ ಗ್ರಾಮಗಳಲ್ಲಿಯೂ 1998ರಲ್ಲಿ ಹಲವು ಹೊಸ ವರ್ಕ್‌ಶಾಪುಗಳನ್ನು ತೆರೆಯಲಾಯಿತು. ಈ ವರ್ಕ್‌ಶಾಪುಗಳಲ್ಲಿ ಕೆತ್ತನೆಯ ನಂತರ ಅವನ್ನು ಅಯೋಧ್ಯೆಯ ವರ್ಕ್‌ಶಾಪಿಗೆ ಕಳಿಸಲಾಗುತ್ತಿದೆ."

ಈ ವರದಿಯ ಕೊನೆಯಲ್ಲಿ "ಸನ್ನಿವೇಶಗಳು ನಮಗೆ ಅನುಕೂಲಕರವಾದ ಕೂಡಲೇ "ದೇವಸ್ಥಾನ ಕಟ್ಟಬಹುದು ಎಂದು ಹೇಳಿದೆ. ಬಿಜೆಪಿ ಮತ್ತು ಕಾವಿಪಡೆಗಳ ಬಗ್ಗೆ ಹಿಂದಿನ ಅನುಭವದ ನೆರಳಲ್ಲಿ ಹೇಳು ವುದಾದರೆ ಅವು ಒಂದು ಯೋಜನೆ ಯಂತೆ ಮುಂದೊತ್ತುತ್ತಿವೆ. ಜಾರ್ಜ್ ಫರ್ನಾಂಡೀಸ್, ರಾಮಕೃಷ್ಣ ಹೆಗ್ಗಡೆ ಯವರಂತಹ ಬಿಜೆಪಿಯ ಜಾತ್ಯಾತೀತರೆನಿಸಿಕೊಳ್ಳುವ ಮಿತ್ರರು ಬಿಜೆಪಿಯ ಈ ನಿಜ ಅಜೆಂಡಾದ ಬಗ್ಗೆ ಏನು ಹೇಳುತ್ತಾರೋ!

ಈ ಬಚ್ಚಿಟ್ಟ ಅಜೆಂಡಾದ ಇನ್ನೊಂದು ಅಂಶವೆಂದರೆ ಆಡಳಿತದ ವಿವಿಧ ಹಂತಗಳಲ್ಲಿ ತೂರಿಕೊಳ್ಳಲು ಅಧಿಕಾರದ ಸ್ಥಾನಗಳನ್ನು ಬಳಸಿಕೊಳ್ಳುವುದು. ಇದನ್ನು ನಾವು ಈ ಹಿಂದೆಯೂ ನೋಡಿದ್ದೇವೆ. ಇಂತಹ ಹತೋಟಿಯಿಂದ "ಅನುಕೂಲಕರ ಸನ್ನಿವೇಶ "ಸೃಷ್ಟಿಸಿ ತನ್ನ 'ಹಿಂದೂರಾಷ್ಟ್ರ'ದ ಗುರಿ ಸಾಧಿಸಲು ಅದಕ್ಕೆ ಪ್ರಯೋಜನ ವಾಗುತ್ತದೆ.

ಪ್ರಧಾನಿಯ ಮುಜುಗರ

ವಿಶ್ವಾಸ ಠರಾವಿನ ಚರ್ಚೆಗೆ ಉತ್ತರ ಕೊಡುವಾಗ ಬಚ್ಚಿಟ್ಟ ಇಂತಹ ಒಂದು ಸಂಗತಿ ಬಯಲಿಗೆ ಬಂತು. ಮಾನವ ಸಂಪನ್ಮೂಲ ಮಂತ್ರಾಲಯದ ಕಾರ್ಯದರ್ಶಿಗಳು ಇಲಾಖೆ ಜ್ಯಾರಿ ಮಾಡ ಬೇಕಾದ್ದು ಬಿಜೆಪಿಯ ಪ್ರಣಾಳಿಕೆ ಎಂಬ ಸುತ್ತೋಲೆ ಹೊರಡಿಸಿದ್ದನ್ನು ಮುಜಗರಪಟ್ಟು ಒಪ್ಪಿಕೊಂಡ ಪ್ರಧಾನ ಮಂತ್ರಿಗಳು ಅದನ್ನು ಹಿಂತೆಗೆದುಕೊಳ್ಳುವ ಹಾಗೂ ಇದಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳುವ ಭರವಸೆ ನೀಡಬೇಕಾಯಿತು ಮತ್ತು ಬಿಜೆಪಿ ಇನ್ನು ಮುಂದೆ ಇಂತಹ ಪ್ರಯತ್ನ ಮಾಡುವುದಿಲ್ಲ ಎಂದು ಹೇಳಬೇಕಾಯಿತು.

ಅದರೆ ಇಂತಹ ಭರವಸೆಗಳ ಹಿಂದೆ ಯಾವುದೇ ಪ್ರಾಮಾಣಿಕತೆಯಿಲ್ಲ ಎಂಬುದನ್ನೂ ನಂತರ ಬಂದ ಈ ಇನ್ನೊಂದು ಸುದ್ದಿ ತೋರಿಸುತ್ತದೆ -"ವಿದೇಶಗಳಲ್ಲಿನ ಭಾರತೀಯ ರಾಯಭಾರ ಕೇಂದ್ರಗಳು ಪಶ್ಚಿಮದಲ್ಲಿನ ಬಿಜೆಪಿ -ವಿರೋಧಿ ಪ್ರಚಾರವನ್ನು ಪರಿಣಾಮಕಾರಿಯಾಗಿ ಎದುರಿಸ ಬೇಕೆಂದು ಜಾಗೃತಗೊಳಿಸ ಲಾಗಿದೆ'. ಏಶ್ಯನ್ ಏಜ್ ಪತ್ರಿಕೆಯ ಎಪ್ರಿಲ್ 5ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಯಿದು. ಈ ಸುದ್ದಿ ವಿದೇಶಾಂಗ ಇಲಾಖೆಯ ವಕ್ತಾರರೊಬ್ಬರ ಹೇಳಿಕೆಯಿಂದ ದೃಢಪಟ್ಟಿದೆ. ಬಿಜೆಪಿ ಒಂದು ಬಲಪಂಥೀಯ ಹಿಂದೂ ರಾಷ್ಟ್ರೀಯವಾದಿ ಬಾಂಬ್ ತಯಾರಿಕಾ ಪಕ್ಷ ಎಂಬ ಪೂರ್ವಗ್ರಹೀತ ಭಾವನೆಯನ್ನು ಮೂಲಭೂತವಾಗಿ ಬದಲಿಸಬೇಕಾಗಿದೆ ಎಂದು ಈ ವಕ್ತಾರ ಹೇಳಿರುವುದಾಗಿ ತಿಳಿದುಬಂದಿದೆ. ನಿಜ, ಹಲವು ಅಧಿಕಾರ ಶಾಹಿಗಳು ಗೆದ್ದೆತ್ತಿನ ಬಾಲ ಹಿಡಿಯು ವವರು.ಆದರೂ ಅತ್ಯುನ್ನತ ಸ್ಥಾನಗಳಿಂದ ಇಂತಹ ರಾಜಕೀಯ ನಿರ್ದೇಶನ ಬರದೆ ಯಾವುದೇ ಅಧಿಕಾರಶಾಹಿ ಇಂತಹ ಸ್ಪಷ್ಟ ನಿಲುವು ತಳೆಯಲಾರ. ಮಾನವ ಸಂಪನ್ಮೂಲ ಮಂತ್ರಾಲಯದ ನಿರ್ದೇಶನ ವನ್ನು ರದ್ದುಪಡಿಸಿರುವುದಾಗಿ ಲೋಕಸಭೆ ಯಲ್ಲಿ ಹೇಳಿದ ಮೇಲೆ ಪ್ರಧಾನಮಂತ್ರಿಗಳು ತನ್ನದೇ ಕೈಯಲ್ಲಿರುವ ಇಲಾಖೆಯಲ್ಲಿ ಅದೇ ದಾರಿ ಹಿಡಿಯುತ್ತಾರೆ.

ಇಂತಹುದೇ ಬೇರೆ ಉದಾಹರಣೆಗಳೂ ಇವೆ. ಮಾನವ ಸಂಪನ್ಮೂಲ ಇಲಾಖೆಯ ರಾಜ್ಯ ಮಂತ್ರಿ ಅಂದರೆ ಅಯೋಧ್ಯಾ ಖ್ಯಾತಿಯ ಉಮಾಭಾರತಿ ನೆಹರೂ ವಿಶ್ವ ಯುವಕ ಕೇಂದ್ರದ ರಾಷ್ಟ್ರವ್ಯಾಪೀ ಜಾಲವನ್ನು ಸುಧಾರಿಸುವ ನೆಪದಲ್ಲಿ ವಹಿಸಿಕೊಳ್ಳುವ ಪ್ರಸ್ತಾವವನ್ನಿಟ್ಟಿದ್ದಾರೆ ಎಂಬ ಸುದ್ದಿ ಪ್ರಕಟ ವಾಗಿದೆ. ಎಂಭತ್ತು ಲಕ್ಷ ಗ್ರಾಮೀಣ ಯುವ ಜನರನ್ನು ಒಳಗೊಂಡಿರುವ ಜಾಲ ವಿದು. ಈ ಪ್ರಸ್ತಾವ ಅಪಾರ ಸಾರ್ವಜನಿಕ ಸಂಪನ್ಮೂಲ ಪಡೆಯುವ ಈ ರಾಷ್ಟ್ರವ್ಯಾಪಿ ಜಾಲವನ್ನು ತಮ್ಮ ಪ್ರಣಾಳಿಕೆ ಗನುಗುಣವಾಗಿ ತಮ್ಮ ರಾಜಕೀಯ ಅಂಗ ಸಂಘಟನೆಗಳ ಬಾಲಂಗೋಚಿ ಯಾಗಿಸುವುದನ್ನು ಮರೆಮಾಚುವ ಒಂದು ತಂತ್ರವಷ್ಟೆ. ಈ ಜಾಲವನ್ನು 1972ರಲ್ಲಿ ಕಾಂಗ್ರೆಸ್ ಆಡಳಿತ ರಚಿಸಿದ್ದು, 167000 ಗ್ರಾಮೀಣ ಯುವ ಕ್ಲಬ್‌ಗಳ ಮೂಲಕ ಕೆಲಸ ಮಾಡುವಂತದ್ದು. ಪ್ರತಿಯೊಂದು ರಾಜ್ಯದ ಪ್ರತಿಯೊಂದು ತಾಲೂಕಿನಲ್ಲಿ ಒಂದು ನೆಹರೂ ಯುವ ಕೇಂದ್ರವಿದೆ.ಸರಕಾರ ನೇಮಿಸುವ ಸಂಯೋಜಕರು ಇದನ್ನು ನಡೆಸುತ್ತಾರೆ.

ಇದಲ್ಲದೆ ಈ ಮಂತ್ರಿಗಳು 14ಲಕ್ಷ ಶಾಲಾ -ಕಾಲೇಜು ವಿದ್ಯಾರ್ಥಿಗಳನ್ನೊಳ ಗೊಂಡ ರಾಷ್ಟ್ರೀಯ ಸೇವಾ ಯೋಜನೆ(ಎನ್. ಎಸ್. ಎಸ್.)ಯನ್ನು ಕೂಡಾ ಆಮೂಲಾಗ್ರವಾಗಿ ಬದಲಿಸು ತ್ತಾರಂತೆ. ಇಲ್ಲಿ ಕೂಡಾ ವಿದ್ಯಾರ್ಥಿಗಳಿಗೆ "ಸರಕಾರೀ -ನೇಮಿತ ಸಂಯೋಜಕರು ಸೈದ್ಧಾಂತಿಕ ತರಬೇತಿ ನೀಡುತ್ತಾರೆ." ಈ 'ಮಾನವ ಸಂಪನ್ಮೂಲ ಅಭಿವೃದ್ಧಿ ' ಇಲಾಖೆ ಬಿಜೆಪಿಯ ಹತೋಟಿಯಲ್ಲಿರುವಾಗ ಇಂತಹ 'ಆಮೂಲಾಗ್ರ ಸುಧಾರಣೆ'ಯ ಪರಿಣಾಮಗಳು, ನಿಧಾನವಾಗಿ ದೇಶದ ಯುವಶಕ್ತಿಯ ತಲೆಯಲ್ಲಿ ತಪ್ಪು ಸಿದ್ಧಾಂತಗಳನ್ನು ತುರುಕಲು ಇದು ಎಂತಹ ಅವಕಾಶ ನೀಡುತ್ತದೆ ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು.

ಈ ರೀತಿ ಆಡಳಿತದಲ್ಲಿ ತೂರಿಕೊಂಡು ಆರ್. ಎಸ್. ಎಸ್. ನ 'ಹಿಂದೂರಾಷ್ಟ್ರ ' ದ ಸಾಧನೆಗೆ 'ಅನುಕೂಲಕರ ಸನ್ನಿವೇಶ ' ಕಲ್ಪಿಸಲು ಈ ಸರಕಾರ ಕೆಲಸ ಮಾಡುತ್ತದೆ. ಈಗಾಗಲೇ ವಿದ್ಯಾಸಂಸ್ಥೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರಾಜಕೀಯ ವ್ಯಕ್ತಿಗಳನ್ನು ನೇಮಿಸಿರುವ ವರದಿಗಳು ಬಂದಿವೆ. ಒಂದು ವಾರದೊಳಗೆ ಹಲವಾರು ಮುಖ್ಯ ನ್ಯಾಯಾಧೀಶರನ್ನು ವರ್ಗ ಮಾಡಲಾಗಿದೆ. ಏಕೆಂದರೆ ನ್ಯಾಯಾಂಗದಲ್ಲಿ ತೂರಿಕೊಳ್ಳು ವುದೂ ಕಾವಿಪಡೆಗಳ ಯೋಜನೆಯ ಒಂದು ಭಾಗ .ಇದು ನ್ಯಾಯಾಂಗದ ನಿಷ್ಪಕ್ಷಪಾತತೆ ಯನ್ನು, ಸ್ವಾತಂತ್ರ್ಯವನ್ನು ನಾಶಮಾಡುತ್ತದೆ.ಪ್ರಸಾರ ಭಾರತಿ ಮಸೂದೆಯನ್ನು ಬದಲಿಸುವುದು ತಮ್ಮ ಆದ್ಯತೆಗಳಲ್ಲಿ ಒಂದು ಎಂದು ಆಗಲೇ ಸಂಸದೀಯ ವ್ಯವಹಾರಗಳ ಮಂತ್ರಿಗಳು ಸ್ಪಷ್ಟವಾಗಿ ಸಾರಿದ್ದಾರೆ.

> ಆಡಳಿತದಲ್ಲಿ ತೂರಿಕೊಂಡು ಆರ್.ಎಸ್.ಎಸ್.ನ 'ಹಿಂದೂರಾಷ್ಟ್ರ' ದ ಸಾಧನೆಗೆ 'ಅನುಕೂಲಕರ ಸನ್ನಿವೇಶ' ಕಲ್ಪಿಸಲು ಈ ಸರಕಾರ ಕೆಲಸ ಮಾಡುತ್ತದೆ. ಈಗಾಗಲೇ ವಿದ್ಯಾಸಂಸ್ಥೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರಾಜಕೀಯ ವ್ಯಕ್ತಿಗಳನ್ನು ನೇಮಿಸಿರುವ ವರದಿಗಳು ಬಂದಿವೆ. ಒಂದು ವಾರದೊಳಗೆ ಹಲವಾರು ಮುಖ್ಯ ನ್ಯಾಯಾಧೀಶರನ್ನು ವರ್ಗ ಮಾಡಲಾಗಿದೆ.

ಚುನಾವಣಾ ಸಮಯದಲ್ಲಿ ಯಾವುದೇ ನಾಚಿಕೆಯಿಲ್ಲದೆ ಮಾತನಾಡಿದ ಹಲವು ಮುಖಗಳು ಈಗ ಮಧ್ಯಮವರ್ಗದ ಟಿವಿ ವೀಕ್ಷಕರಿಗೆ ಚಿರಪರಿಚಿತ ವಾಗಿವೆ.ಅವರ 'ಸೇವೆಗಳಿಗೆ' ಈಗ ' ಸೂಕ್ತ ಬಹುಮಾನ' 'ದೊರೆಯಲಿವೆ.

ಎರಡನೇ ಅಜೆಂಡಾ

ಈಗ ಜ್ಯಾರಿಯಾಗುತ್ತಿರುವ ಎರಡನೇ ಬಚ್ಚಿಟ್ಟ ಅಜೆಂಡಾ ಎಂದರೆ ಬಿಜೆಪಿಯ ಮಿತ್ರಪಕ್ಷಗಳ ಬೇಡಿಕೆಗಳಿಗೆ ಸಂಬಂಧ ಪಟ್ಟದ್ದು. ಚುನಾಯಿತ ರಾಜ್ಯ ಸರಕಾರಗಳನ್ನು ವಜಾ ಮಾಡಬೇಕೆಂದು ಮಂತ್ರಿಗಳು ಎಲ್ಲಾ ರೀತಿಯ ಗದ್ದಲ ಎಬ್ಬಿಸುತ್ತಿದ್ದಾರೆ - ಅದು ತಮಿಳುನಾಡಿನ ಬಗ್ಗೆಯಾಗಬಹುದು ಅಥವಾ ಬಿಹಾರದ ಬಗ್ಗೆಯಾಗ ಬಹುದು. ಚೌತಾಲಾರ



'ದಿ ಹಿಂದೂ' ನಲ್ಲಿ ಕೇಶವ್

ಹರ್ಯಾಣಾದ ನಾಲ್ಕು ಎಂಪಿಗಳ ಬೆಂಬಲ ಪಡೆದಿರುವುದರಿಂದ ಅವರು ವಿರೋಧಿಸುವ ಬಂನ್ಸೀಲಾಲ್ ಸರಕಾರವನ್ನೂ ವಜಾ ಮಾಡುವ ಒತ್ತಡವನ್ನೂ ಎದುರಿಸಬೇಕಾಗಿದೆ.

ತನ್ನ ನಿಜ ಅಜೆಂಡಾದ ಜ್ಯಾರಿಗಾಗಿ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಈ ಬೇಡಿಕೆಗಳಿಗೂ ತಲೆಬಾಗಬಹುದು. ಪ್ರಧಾನಮಂತ್ರಿಗಳು 356ನೇ ಕಲಮನ್ನು ಬಳಸುವುದಿಲ್ಲ ಎಂದು ಸಾರಿದ್ದರೂ ಸರಕಾರದ ಉಳಿವಿಗೆ ಅದು ಅವರಿಗೆ ಅನಿವಾರ್ಯವಾಗಬಹುದು. ತಾನು 'ನಿಷ್ಪಕ್ಷಪಾತಿ' ಎಂದು ತೋರಿಸಿಕೊಳ್ಳಲು ತಮ್ಮ ಒಂದೆರಡು ಸರಕಾರಗಳನ್ನೂ ಇತರ ರಾಜ್ಯ ಸರಕಾರಗಳೊಂದಿಗೆ ವಜಾ ಮಾಡಿ ಮಹಾ ವಂಚನೆಗೆ ಇಳಿಯುವ ಸಾಧ್ಯತೆಯೂ ಇದೆ. ಆದರೆ ಜನ ಇಂತಹ ತಂತ್ರದಿಂದ ಮೋಸಹೋಗಲಾರರು. ಒಟ್ಟಿನಲ್ಲಿ, ಜನಗಳ ಇಚ್ಛೆಗೆ ವಿರುದ್ಧವಾದ ಪ್ರಜಾಪ್ರಭುತ್ವ -ವಿರೋಧಿ ಕ್ರಮಗಳನ್ನು ತರಲು ಅಧಿಕಾರದ ಸ್ಥಾನಗಳನ್ನು ದುರುಪಯೋಗ ಪಡಿಸಿಕೊಳ್ಳಲಾಗುವುದು ಎಂಬುದಂತೂ ಸ್ಪಷ್ಟ. **ಒತ್ತಡಕ್ಕೆ ತಲೆ ಬಾಗವುದಲ್ಲದೆ ಇನ್ನೇನು?**

ಸರಕಾರ ಇಂತಹ ಒತ್ತಡಗಳಿಗೆ [illegible] ಬಲಿಯಾಗಲಾರಂಭಿಸಿದೆಯೆಂಬುದಕ್ಕೆ ಒಂದು ಉದಾಹರಣೆಯೆಂದರೆ ತಮಿಳುನಾಡಿನ ಮುಖ್ಯ ನ್ಯಾಯಾಧೀಶರ ವರ್ಗಾವಣೆ. ಎಐಎಡಿಎಂಕೆ ಮುಖಂಡರ ಮೇಲಿನ ಭ್ರಷ್ಟಾಚಾರದ ಕೇಸುಗಳಿಂದ ಅವರನ್ನು ರಕ್ಷಿಸಲು, ಉಳಿದಿರುವ ಕೇಸುಗಳ ಮೇಲೆ ಪ್ರಭಾವ ಬೀರಲು ಕೈಗೊಂಡ ಈ ಕ್ರಮ ಅತ್ಯುನ್ನತ ವಲಯಗಳ ಅನುಮೋದನೆ ಪಡೆದ ಈ ಸರಕಾರದ ಆರಂಭದ ನಿರ್ಣಯಗಳಲ್ಲಿ ಒಂದು.


ಇಷ್ಟೇ ಅಲ್ಲ, ಒಂದು ಅಧಿಕೃತ ಆದೇಶ ಹೊರಡಿಸಿ ಹಣಕಾಸು ಮಂತ್ರಾಲಯವನ್ನು ಇಬ್ಭಾಗ ಮಾಡಿ ಕಂದಾಯಕ್ಕೆ ಸಂಬಂಧಪಟ್ಟ ಇಲಾಖೆಗಳನ್ನೆಲ್ಲಾ ಎಐಎಡಿಎಂಕೆ ಮಂತ್ರಿಗೆ ಕೊಡಲಾಯಿತು. ಅಂದರೆ ವಿವಿಧ ಕಾನೂನುಗಳ ಉಲ್ಲಂಘನೆಗಳ ವಿರುದ್ಧ ಕ್ರಿಮಿನಲ್ ಕ್ರಮ ಆರಂಭಿಸುವ ಮತ್ತು ಭ್ರಷ್ಟಾಚಾರದ ವಿಚಾರಣೆಗಳನ್ನು ನಡೆಸಬೇಕಾದ ಇಲಾಖೆಗಳನ್ನೆಲ್ಲಾ ಈ ಮಂತ್ರಿಗೆ ಕೊಡಲಾಗಿದೆ. ಇದು ಒತ್ತಡಕ್ಕೆ ತಲೆಬಾಗುವುದಲ್ಲದೆ ಮತ್ತೇನು ?

ಒಟ್ಟಿನಲ್ಲಿ ಈ ಸರಕಾರದ ಮೊತ್ತ ಮೊದಲ ವಾರದಲ್ಲೇ ಕೈಗೊಂಡ ಈ ನಿರ್ಣಯಗಳು, ನೀಡಿದ ನಿರ್ದೇಶನಗಳು ಈ ಸರಕಾರ ಎರಡು ಹಂತಗಳಲ್ಲಿ ಬಚ್ಚಿಟ್ಟ ಅಜೆಂಡಾಗಳನ್ನು ಅನುಸರಿಸುವ ಸೂಚನೆಗಳನ್ನು ಸ್ಪಷ್ಟವಾಗಿ ತೋರಿವೆ -ಒಂದು ಹಂತದಲ್ಲಿ, ಆಧುನಿಕ ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವದ ಸ್ತಂಭಗಳನ್ನು ನಾಶಮಾಡುವ ಬಚ್ಚಿಟ್ಟ ಅಜೆಂಡಾ; ಇನ್ನೊಂದು ಹಂತದಲ್ಲಿ, ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ನಾಶಮಾಡಿ ಆಡಳಿತವನ್ನು ದುಷ್ಟಶಕ್ತಿಗಳ ಕೈಯಲ್ಲಿ ಇಡುವ ಬಚ್ಚಿಟ್ಟ ಅಜೆಂಡಾ. ಕೇವಲ ಬಿಜೆಪಿಯನ್ನು ಅಧಿಕಾರದಲ್ಲಿಡಲು ನಮ್ಮ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಲಾಗುತ್ತಿದೆ.

ಇಂತಹ ಹೊಲಸು ಕುತಂತ್ರಗಳಿಂದ ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು, ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಉಳಿಸುವುದು ಭಾರತೀಯ ಜನತೆಯ ಎಚ್ಚರದಿಂದ ಮಾತ್ರ ಸಾಧ್ಯ. ಈ ಜಾಗೃತಿಯೇ ಮುಂಬರುವ ದಿನಗಳಲ್ಲಿ ಜನಪರ ಹೋರಾಟಗಳು ಯಾವ ದಿಕ್ಕು ಹಿಡಿಯಬೇಕು ಎಂಬುದನ್ನು ಸೂಚಿಸಲಿವೆ.

○

ಕಾಮ್ರೇಡ್ ಇಎಂಎಸ್‌ರ ನೆನಪು



ಸಿ.ಆರ್. ಭಟ್

ಕಾಂ. ಇಎಂಎಸ್ ಅವರ ಬದುಕು, ಬರಹ, ಆದರ್ಶ, ಹೋರಾಟ, ಪ್ರೀತಿ, ಮಾರ್ಗದರ್ಶನ, ಮುಂತಾದವುಗಳಿಂದ ಪ್ರಭಾವಿತರಾದ, ಸ್ಫೂರ್ತಿ ಪಡೆದ ನಾಡಿನ ಅಸಂಖ್ಯಾತ ಸಂಗಾತಿಗಳಲ್ಲಿ ನಾನೂ ಒಬನೆಂದು ಹೇಳಿಕೊಳ್ಳಲು ಅಭಿಮಾನವೆನಿಸುತ್ತದೆ. ಇಎಂಎಸ ಭೌತಿಕವಾಗಿ ಇಂದು ನಮ್ಮನ್ನು ಅಗಲಿದರೂ, ಅವರು ಒಂದು ಆರದ ಚೇತನವಾಗಿ ನಮ್ಮೊಂದಿಗೆ ಸದಾ ಇರುವರು. ಸಿಪಿಐ(ಎಂ) ನ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಇಎಂಎಸ್ ಜೊತೆಗಿನ ಕಳೆದ ಮೂರು ದಶಕಗಳ ನನ್ನ ಆತ್ಮೀಯ ಸಂಬಂಧಗಳನ್ನು ನೆನಪಿಸಿಕೊಳ್ಳಲು ಸಂತೋಷಪಡುತ್ತೇನೆ.

★ 1960 ರ ದಶಕದಲ್ಲಿ ಮಂಗಳೂರಿನಲ್ಲಿ ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಆಗಾಗ ನಡೆಯುತ್ತಿದ್ದ ಸಾರ್ವಜನಿ ಸಭೆಗಳಲ್ಲಿ ಇಎಂಎಸ್ ರ ಭಾಷಣ ಕೇಳಲು ನಾನು ಉಡುಪಿಯಿಂದ ಕಾಂ. ಬಿ.ಮಾಧವರೊಂದಿಗೆ ಹೋಗುತ್ತಿದ್ದೆ. ಅವರ ಸ್ಪಷ್ಟ ಸರಳ ಹಾಗೂ ವಿದ್ವತ್ ಪೂರ್ಣ ಭಾಷಣ ಗಳಿಂದ ನಾನು ಸಾಕಷ್ಟು ಪ್ರಭಾವಿತನಾಗಿದ್ದೆ. 1966-68 ರಲ್ಲಿ ಜೀವವಿಮಾ ನೌಕರರು ತಮ್ಮ ಕಾರ್ಯಾಲಯಗಳ ಕೆಲಸಗಳನ್ನು ನಿರ್ವಹಿಸಲು ಗಣಕೀಕರಣ (ಆಟೋಮೆಶನ್) ವಿರುದ್ಧ ದೇಶ ವ್ಯಾಪಿ ಹೋರಾಟ ನಡೆಸುತ್ತಿದ್ದರು. ಅ.ಭಾ.ವಿಮಾ ನೌಕರರ ಸಂಘದ ಉಡುಪಿ ವಿಭಾಗದ ಪದಾಧಿಕಾರಿಗಳಾಗಿ ನಾನು ಮತ್ತು ಮಾಧವ ಮಂಗಳೂರಿಗೆ ಒಮ್ಮೆ ಬಂದಿದ್ದ ಇಎಂಎಸ್‌ರನ್ನು ಭೆಟ್ಟಿಯಾಗಿ, ಉಡುಪಿಯ ರಥಬೀದಿಯಲ್ಲಿ ನಡೆಯುತ್ತಿದ್ದ ಒಂದು ಸಾರ್ವಜನಿ ಸಭೆಗೆ ಮುಖ್ಯ ಅತಿಥಿಯಾಗಿ ಬರಲು ವಿನಂತಿಸಿದೆವು. ಜೀವ ವಿಮಾ ನಿಗಮದಲ್ಲಿ ಗಣಕೀಕರಣದ ವಿರುದ್ಧ ಸಿಪಿಐ(ಎಂ) ತನ್ನ ನಿರ್ಣಯ ಅಷ್ಟರಲ್ಲಿಯೇ ಕೈಗೊಂಡಿರುವುದಾಗಿಯೂ, ತನ್ನ ಎಲ್ಲ ಕಾರ್ಯಕ್ರಮಗಳು ಪಕ್ಷದ ಕೇಂದ್ರಾಲಯದಿಂದ ನಿರ್ಧರಿಸಲ್ಪಡುವುದೆಂದೂ, ತನಗೆ ಉಡುಪಿಯ ಸಭೆಗೆ ಬರಲಾಗುವುದಿಲ್ಲವೆಂದೂ ವಿನಯದಿಂದ ನಮಗೆ ಹೇಳಿ ನಮ್ಮ ಹೋರಾಟಕ್ಕೆ ಶುಭಕೋರಿದರು. ಅದು ಇಎಂಎಸ್‌ರೊಂದಿಗೆ ನನ್ನ ಮೊದಲ ಭೆಟ್ಟಿಯಾಗಿತ್ತು. ಅಂದಿನಿಂದ ಅವರ ಇಡೀ ವ್ಯಕ್ತಿತ್ವ ನನ್ನ ಅಂತರಾಳದಲ್ಲಿ ಅಚ್ಚೊತ್ತಿದಂತಿದೆ.

★ 1972 ರಲ್ಲಿ ನಾನು ಭದ್ರಾವತಿಯಲ್ಲಿ ಜೀವವಿಮಾ ನಿಗಮದಲ್ಲಿ ಅಧಿಕಾರಿಯಾಗಿ ಭಡ್ತಿ ಪಡೆದು ಸೇವೆಯಲ್ಲಿರುತ್ತಿದ್ದಾಗ, ಅಧಿಕಾರಿ ಕೆಲಸ ಬಿಟ್ಟು ಪುನಃ ನೌಕರನಾಗಿಯೇ ಪಕ್ಷದ ಕೆಲಸ ಮಾಡಲು ಯೋಚಿಸುತ್ತಿದ್ದೆ. ಆಗ ಕಾ. ಪಿ.ರಾಮಚಂದ್ರ ರಾವ್ ಮತ್ತು ಇತರ ಇಬ್ಬರು ಸಂಗಾತಿಗಳು ಶಿವಮೊಗ್ಗದಲ್ಲಿ ಪಾರ್ಟಿಕ್ಲಾಸ್‌ಗೆ ಶಿಕ್ಷಕರಾಗಿ ಬಂದಿದ್ದ ಇಎಂಎಸ್‌ರ ಭೆಟ್ಟಿ ಮಾಡಿಸಿದರು. ನನ್ನ ವೈಯಕ್ತಿಕ ಸಮಸ್ಯೆಗಳನ್ನು ಅವರು ಮುಂದಿಟ್ಟಾಗ ಎಲ್ಲರೂ ಕಾರ್ಮಿಕ ರಂಗದಲ್ಲಿಯೇ ಕೆಲಸ ಮಾಡಬೇಕಾಗಿಲ್ಲ, ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಆಡಳಿತ, ಶಿಕ್ಷಣ, ವಿಜ್ಞಾನ, ಸಂಶೋಧನೆ, ಕಲೆ, ಸಾಹಿತ್ಯ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಉಪಯುಕ್ತವಾಗಿ ಕೆಲಸ ಮಾಡು ವುದು ಅಗತ್ಯವಿದೆ ಎಂದು ಇಎಂಎಸ್ ನನಗೆ ತಿಳಿಸಿ ಆತ್ಮವಿಶ್ವಾಸ ಮೂಡಿಸಿದರು. ಆಗಷ್ಟೇ ತಿರುವನಂತಪುರ ಕೇಂದ್ರವಾಗಿ ಪ್ರಾರಂಭಿಸಿದ 'ಇಂಡಿಯನ್ ಆಫ್ ಸೋಷಿಯಲ್ ಸೈನ್ಸ್' (ಸಮಾಜವಿಜ್ಞಾನಗಳ ಭಾರತೀಯ ಶಿಕ್ಷಣ ಸಂಸ್ಥೆ) ಮತ್ತು ಅದರ ಮಾಸಿಕ ಪುರವಣಿ 'ಸೋಷಿಯಲ್ ಸೈಂಟಿಸ್ಟ್' (ಸಮಾಜ ವಿಜ್ಞಾನಿ) ಕುರಿತು ನನಗೆ ಇಎಂಎಸ್ ಪರಿಚಯಿಸಿದರು. ಇವುಗಳ ಮೂಲಕವೇ ನಾನು ಮಾರ್ಕ್ಸ್ ವಾದದ ಕುರಿತು ಗಂಭೀರ ಅಧ್ಯಯನ ಪ್ರಾರಂಭಿಸಿದ್ದು.

ಮುಂದೆ 1974 ರಲ್ಲಿ ಮೈಸೂರಿನಲ್ಲಿ ಟೆಲಿಕಾಂ ನೌಕರರ ಸಂಘದ ಧುರೀಣರಾದ ಕಾಂ. ಎಸ್.ನಾರಾಯಣ ಅವರ ಮುತುವರ್ಜಿಯಿಂದ 'ವಿಕಾಸ ಪ್ರಕಾಶನ' ಎಂಬ ಸಂಸ್ಥೆಯ ಮೂಲಕ ಇಎಂಎಸ್‌ರ ಆತ್ಮಕಥನ 'ನನ್ನ ಬದುಕು', ಗೋದಾವರಿ ಪುರುಳೇಕರ್ ಅವರ 'ಮಾನವ ಎಚ್ಚೆತ್ತಾಗ'(ಮಹಾರಾಷ್ಟ್ರದ ವೊರೋಲಿಯ ಆದಿವಾಸಿ ಜನರ ಆಂದೋಲನ) ಮತ್ತಿತರ ಪುರೋಗಾಮಿ ಪುಸ್ತಕಗಳು ಪ್ರಕಟಗೊಂಡವು. ಅವುಗಳ ಬಿಡುಗಡೆ ಸಮಾರಂಭಕ್ಕೆ ಇಎಂಎಸ್‌ರನ್ನು ಮೈಸೂರಿಗೆ ಮುಖ್ಯ ಅತಿಥಿಯಾಗಿ ಆಮಂತ್ರಿಸಲಾಗಿತ್ತು. ಆ ಸಮಾರಂಭದ ಅಧ್ಯಕ್ಷತೆ ವಹಿಸುವ ಸುಯೋಗ ನನ್ನದಾಗಿತ್ತು. ಆಗ ಇಎಂಎಸ್‌ರೊಂದಿಗೆ ನನಗೆ ಇನ್ನಷ್ಟು ನಿಕಟ ಸಂಪರ್ಕ ಬೆಳೆಯಿತು. ಮುಂದೆ ಅವರ ಮಾರ್ಗದರ್ಶನದಲ್ಲಿ 'ಸೋಷಿಯಲ್ ಸೈಂಟಿಸ್ಟ್' ಮಾದರಿಯ 'ಒಡನಾಡಿ' ಎಂಬ ದ್ವೈಮಾಸಿಕ, ನಂತರ ಮಾಸಿಕ ಪುರವಣಿಯನ್ನು 'ವಿಕಾಸ ಪ್ರಕಾಶನ' ದಿಂದ ಪ್ರಕಟಿಸಲು ಪ್ರಾರಂಭವಾಯಿತು. ಈ ಪತ್ರಿಕೆಯ ಸ್ಥಾಪಕರಲ್ಲಿ ನಾನೂ ಒಬ್ಬನಾಗಿದ್ದು ಅವರ ಮತ್ತು ವಿಕಾಸ ಪ್ರಕಾಶನದ ಪುಸ್ತಕಗಳ ಪ್ರಸಾರದ ಜವಾಬ್ದಾರಿಯಲ್ಲಿ ನಾನು ಪಾಲುಗೊಂಡಿದ್ದೆ. ಈ ಪತ್ರಿಕೆ ಸುಮಾರು ಹತ್ತು ವರ್ಷಗಳ ಕಾಲ ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಬೌದ್ಧಿಕ ಪುರವಣಿಯಾಗಿ ನನ್ನಂತಹ ನೂರಾರು ಯುವ ಜನರಿಗೆ ಮಾರ್ಗದರ್ಶಿ ಆಯಿತು. ಇದರಲ್ಲಿ ಇಎಂಎಸ್‌ರ ಅನೇಕ ಪ್ರಬಂಧಗಳು ಪ್ರಕಟವಾಗಿವೆ.

★ ಈ ಕಾಲಘಟ್ಟದಲ್ಲಿಯೇ, 1974 ರಲ್ಲಿ 'ಇಂಡಿಯನ್ ಸ್ಕೂಲ್ ಆಫ್ ಸೋಶಿಯಲ್ ಸೈನ್ಸ್' ನ ಅ.ಭಾ. ಸಮ್ಮೇಳನವು ಮುಂಬಯಿಯಲ್ಲಿ ನಡೆಯಿತು. 'ನಾಲ್ಕನೇ ಪಂಚವಾರ್ಷಿಕ ಯೋಜನೆ' ಸಮ್ಮೇಳನದ ಚರ್ಚೆಯ ವಿಷಯವಾಗಿತ್ತು. ಇಎಂಎಸ್ ಇಲ್ಲಿ 'ಭಾರತದ ಯೋಜನೆಯಲ್ಲಿ ಬಿಕ್ಕಟ್ಟು' ಎಂಬ ಪ್ರಬಂಧವನ್ನು ಮಂಡಿಸಿದ್ದರು. ಬಂಡವಾಳಶಾಹಿ ಮತ್ತು ಸಮಾಜವಾದಿ ಸಮಾಜಗಳಲ್ಲಿ ಯೋಜನೆಗಳ ಪಾತ್ರದಲ್ಲಿರುವ ಮೂಲಭೂತ ವ್ಯತ್ಯಾಸಗಳನ್ನು ಅದರಲ್ಲಿ ಎತ್ತಿ ತೋರಿಸಿದರು. ರಾಜ್ಯ ಪ್ರಭುತ್ವದಲ್ಲಿ ಬಂಡವಾಳಶಾಹಿ ವರ್ಗದ ಬದಲು ಶ್ರಮಿಕ ವರ್ಗ ಇದ್ದಾಗ ಮಾತ್ರ ಆರ್ಥಿಕ ಯೋಜನೆಯು ಸಮಾಜವಾದಿ ಆಶೋತ್ತರಗಳನ್ನು ಈಡೇರಿಸಲು ಸಾಧ್ಯ ಎಂದು ಮಾರ್ಕ್ಸ್-ಲೆನಿನ್ ಪ್ರತಿಪಾದಿಸಿದ ಹಾಗೂ ಸಾಧಿಸಿ ತೋರಿಸಿದ ಸಮಾಜವಾದಿ ದೇಶಗಳ ಶ್ರೀಮಂತ ಅನುಭವಗಳನ್ನು ಉದಾಹರಿಸಿ ತಿಳಿಸಿದರು. ಮುಂದೆ ಈ ಪ್ರಬಂಧ ಪುಸ್ತಕ ರೂಪದಲ್ಲಿ ಪ್ರಕಟಗೊಂಡು ಪ್ರಸಿದ್ಧಿ ಪಡೆಯಿತು. ಭಾರತದ ಸಂದರ್ಭದಲ್ಲಿ ಕ್ರಾಂತಿಕಾರಕ ಭೂ ಸುಧಾರಣೆ, ಆ ಮೂಲಕ ಪ್ರಜಾಪ್ರಭುತ್ವ ಕ್ರಾಂತಿ ಪೂರ್ಣಗೊಳಿಸುವಿಕೆ, ಆಂತರಿಕ ಮಾರುಕಟ್ಟೆಯ ವಿಸ್ತರಣೆಯ ಆಧಾರದಲ್ಲಿ ಸಾವ್ವಲಂಬನೆ ಹಾಗೂ ಸಂಪೂರ್ಣ ಉದ್ಯೋಗ ಸಾಧ್ಯವಾಗುವುದೆಂದು ಇಎಂಎಸ್ ಪ್ರಬಂಧದಲ್ಲಿ ಪರ್ಯಾಯ ಆರ್ಥಿಕ ನೀತಿಯನ್ನು ಸಮರ್ಥವಾಗಿ ಪ್ರತಿಪಾದಿಸಿದರು.

★ 1977 ರಲ್ಲಿ ಪ.ಬಂಗಾಳದಲ್ಲಿ ಎಡರಂಗ ಸರಕಾರ ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲಿ 1978 ರಲ್ಲಿ ಕಲ್ಕತ್ತದಲ್ಲಿ 'ಇಂಡಿಯನ್ ಸ್ಕೂಲ್.....'ನ ಇನ್ನೊಂದು ಅ.ಭಾ. ಸಮ್ಮೇಳನ ನಡೆಯಿತು. ಇಲ್ಲಿ 'ಭಾರತದ ಒಕ್ಕೂಟ ಪದ್ಧತಿ; ಕೇಂದ್ರ-ರಾಜ್ಯ ಸಂಬಂಧಗಳು' ಎಂಬ ಕುರಿತು ಚರ್ಚೆ ನಡೆಯಿತು. ಇಲ್ಲಿ ಇಎಂಎಸ್ ತಮ್ಮ ಪ್ರಬಂಧದಲ್ಲಿ ಭಾರತದ ಸಂವಿಧಾನದ ಧನಾತ್ಮಕ-ಋಣಾತ್ಮಕ ಅಂಶಗಳನ್ನು ವಿವರಿಸಿ, ಸದೃಢ ರಾಜ್ಯಗಳ ಮೂಲಕವೇ ಸುದೃಢ ಕೇಂದ್ರ ಸಾಧ್ಯ ಎಂದು ಪ್ರತಿಪಾದಿಸಿದರು. ಪಂಚಾಯತ್ ರಾಜ್ಯದ ಮೂಲಕ ಅಧಿಕಾರ ವಿಕೇಂದ್ರೀಕರಣದ ಅಗತ್ಯತೆಯನ್ನು ತಿಳಿಸಿದರು. ಈ ಸಮ್ಮೇಳನಗಳಲ್ಲಿ ದೇಶದ ವಿವಿಧ ವಿಶ್ವವಿದ್ಯಾಲಯಗಳ ಹಾಗೂ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ ನೂರಾರು ಖ್ಯಾತ ವಿದ್ವಾಂಸರು ಭಾಗವಹಿಸಿದ್ದರು. ಆದರೆ, ಇಎಂಎಸ್ ರ ಪ್ರಬಂಧಗಳು ಅತ್ಯಂತ ಸ್ಪಷ್ಟವೂ, ಸರಳವೂ ಆಗಿದ್ದವು. ಈ ಸಮ್ಮೇಳನಗಳಲ್ಲಿಯೇ ಇಎಂಎಸ್‌ರೊಂದಿಗೆ ನಿಕಟ ಸಂಪರ್ಕವಾದುದೇ ಅಲ್ಲದೇ, ಹಿರಿಯ ಸಂಗಾತಿಗಳಾದ ಬಿ.ಟಿ.ಆರ್., ಎಂ.ಪಿ.ಪರಮೇಶ್ವರನ್, ಪಿ..ಗೋವಿಂದ ಪಿಳ್ಳೆ, ಸಿ.ಪಿ.ನಾರಾಯಣನ್ ಮುಂತಾದವರು ಸಂಪರ್ಕ ಬೆಳೆದು ಕಾರ್ಮಿಕ, ಜನವಿಜ್ಞಾನ, ಸಾಂಸ್ಕೃತಿಕ, ಪ್ರಕಾಶನ ಹಾಗೂ ಆಂದೋಳನಗಳ ಅನುಭವಗಳನ್ನು ಪಡೆಯುವಂತಾಯಿತು. "ಇಂಡಿಯನ್ ಸ್ಕೂಲ್......." ನ ಸ್ಫೂರ್ತಿಯಿಂದಲೇ ಧಾರವಾಡದಲ್ಲಿ ಡಾಂ।. ವಿ.ಎನ್. ದೇಶಪಾಂಡೆರವರ ಮುತುವರ್ಜಿಯಲ್ಲಿ "ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ" 1980ರ ದಶಕದಿಂದ ಬೌದ್ಧಿಕ ಮಟ್ಟದಲ್ಲಿ ಕೆಲಸಕಾರ್ಯಗಳನ್ನು ಪ್ರಾರಂಭಿಸಿರುವುದನ್ನು ನೆನಪಿಸಿಕೊಳ್ಳಬಹುದು.

★ 1975-76ರಲ್ಲಿ ದೇಶದ ಆಂತರೀಕ ತುರ್ತ ಪರಿಸ್ಥಿತಿಯ ಕರಾಳ ಕಾಲದಲ್ಲಿ ಬೆಂಗಳೂರಿನ ಪ್ರಸನ್ನ ಮತ್ತಿತರ ಕಲಾವಿದರು 'ಸಮುದಾಯ' ಎಂಬ ಸಾಂಸ್ಕೃತಿಕ ಸಂಘಟನೆಯನ್ನು ಹುಟ್ಟುಹಾಕಿದರು. ಅನತಿ ಕಾಲದಲ್ಲಿಯೇ ನನಗೂ ಅದರ ಸಂಪರ್ಕ ದೊರೆಕಿತು. ಪ್ರಾರಂಭದಿಂದಲೂ ರಾಜ್ಯ ಮತ್ತು ಸ್ಥಳೀಯ ಮಟ್ಟಗಳಲ್ಲಿ (ಉಡುಪಿ, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ) ಅದರ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತಾಯಿತು. ಸಮುದಾಯದ ಸಂಗಾತಿಗಳಿಗೆ ಇ.ಎಂ.ಎಸ್. ಆಗಾಗ ಸಾಂಸ್ಕೃತಿಕ ರಂಗಕ್ಕೆ ಸಂಬಂಧಿಸಿದ ಸೈದ್ಧಾಂತಿಕ ತಿಳುವಳಿಕೆ ನೀಡುತ್ತಿದ್ದರು. ಸಮಾಜ ಪರಿವರ್ತನೆಯಲ್ಲಿ ಆರ್ಥಿಕ ಹಾಗೂ ರಾಜಕೀಯ ಹೋರಾಟಗಳಷ್ಟೆ ಸಾಂಸ್ಕೃತಿಕ ಆಂದೋಳನವೂ ಮಹತ್ವದ್ದಾಗಿದೆ ಎಂದು ನಮಗೆ ಮನವರಿಕೆ ಮಾಡಿ ಕೊಡುತ್ತಿದ್ದರು. ಇ.ಎಂ.ಎಸ್.ರ ಆಯ್ದ ಬರಹಗಳ ಮೊದಲ ಸಂಪುಟದ ಕೊನೆಯ ಅಧ್ಯಾಯ 'ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜ" ಕುರಿತಾದ ಪ್ರಬಂಧದಲ್ಲಿ ಸಮಾಜದ ವಿಕಾಸ, ಭಾರತದಲ್ಲಿ ಭಾಷೆ ಮತ್ತು ಸಂಸ್ಕೃತಿ, ಮೇಲ್‌ರಚನೆಯಲ್ಲಿ ಒಂದು ಅಂಶವಾಗಿ ಸಂಸ್ಕೃತಿ, ಸಾಹಿತ್ಯದಲ್ಲಿ ಮಾನವೀಯತೆ ಮತ್ತು ವರ್ಗ ಹೋರಾಟ, ಜನ ಸಂಸ್ಕೃತಿ, ಮಾರ್ಕ್ಸ್‌ವಾದ ಮತ್ತು ಸೌಂದರ್ಯ ಶಾಸ್ತ್ರ... ಇವುಗಳ ಕುರಿತು ಉಪಯುಕ್ತ ವಿಶ್ಲೇಷಣೆಗಳಿವೆ. 1980ರಲ್ಲಿ ಇ.ಎಂ.ಎಸ್. ಮಣಿಪಾಲದಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಬಂದಿದ್ದಾಗ, ಸಮುದಾಯದ ಸಂಗಾತಿಗಳೊಂದಿಗೆ ಸುಧೀರ್ಘ ಸಂಭಾಷಣೆ ನಡೆಸಿದರು. ಕರ್ನಾಟಕದ ಸಾಂಸ್ಕೃತಿಕ ಆಂದೋಳನವನ್ನು ಶಕ್ತಿಶಾಲಿಗೊಳಿಸಲು ಉತ್ತರ ಕರ್ನಾಟಕದ 'ವಚನ ಸಾಹಿತ್ಯ'ವನ್ನು ಗಂಭೀರವಾಗಿ ಅಧ್ಯಯನ ಮಾಡಲು ಸಲಹೆ ನೀಡಿದರು. ಸಮುದಾಯದ 20ನೇ ವರ್ಷಾಚರಣೆಯ 'ಜನಸಂಸ್ಕೃತಿ' ನಂತರ 1996ರ ಜುಲೈ 28ರಂದು ಸಮುದಾಯದ ಸಂಗಾತಿಗಳಿಗೆ ಇ.ಎಂ.ಎಸ್. ತಿರುವಂತಪುರದ ತಮ್ಮ ಮನೆಯಲ್ಲಿ ನೀಡಿದ ವಿಶೇಷ ಸಂದರ್ಶನದಲ್ಲಿ ಜಾತೀಯತೆ, ಕೋಮುವಾದ, ಜಾಗತೀಕರಣ.... ಸದ್ಯ ಸಾಂಸ್ಕೃತಿಕ ರಂಗದ ಮುಂದಿರುವ ಸವಾಲುಗಳೆಂದು ಗುರುತಿಸಿ ಅವುಗಳನ್ನು ಎದುರಿಸಲು ಸೂಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲು ಸಲಹೆಗಳನ್ನು ನೀಡಿದರು.

ಪುಟ 8ಕ್ಕೆ

ವಿಶ್ವ ಕುಂದಾಪುರ

ಸುಮಾರು 15 ವರ್ಷಗಳ ಹಿಂದಿನ ಮಾತು ಕುಂದಾಪುರದ ಗಾಂಧಿ ಮೈಧಾನದಲ್ಲಿ ಸಿಪಿಐ(ಎಂ)ನ ಬೃಹತ್ ರ್‍ಯಾಲಿಯೊಂದು ವ್ಯವಸ್ಥೆಯಾಗಿತ್ತು. ಆಗ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಮ್ರೇಡ್ ಇ.ಎಂ. ಎಸ್. ನಂಬೂದರಿಪಾದ್ ಪ್ರಮುಖ ಭಾಷಾಣಕಾರರಾಗಿ ಬರುವವರಿದ್ದರು.

ನೆರೆದಿದ್ದ ಸಾವಿರಾರು ಜನರು ಇ.ಎಂ.ಎಸ್ ರನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ಇ.ಎಂ.ಎಸ್. ಇದ್ದ ಕಾರು ಮೈದಾನವನ್ನು ಸಮೀಪಿಸಿ ಅವರು ಕಾರಿನಿಂದ ಇಳಿಯುತ್ತಿದ್ದಂತೆ ಇದ್ದಕ್ಕಿದ್ದ ಹಾಗೆ ಗುಂಪಿನ ಮದ್ಯದಿಂದ ಇ.ಎಂ.ಎಸ್‌ರಿಗೆ ಜಯಕಾರ ಹಾಕುವ ಮಲಯಾಳಂ ಘೋಷಣೆಗಳು ಮೊಳಗಿದವು. ಹೀಗೆ ಘೋಷಣೆ ಕೂಗುತ್ತಿದ್ದವರು ಸಮೀಪಿಸಿ ಮಾರ್ಕ್ಸಿಸ್ಟ್ ನೇತಾರನಿಗೆ ಹೂಹಾರಗಳನ್ನು ಹಾಕಿದರು.

ತಮ್ಮ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಇ.ಎಂ.ಎಸ್ ನನ್ನ ಬಗ್ಗೆ ಅಭಿಮಾನ ತೋರಿಸಿ ಮಲಯಾಳಿಗಳು ಇಲ್ಲಿನ ಜನರೊಂದಿಗೆ ಬೆರೆಯಬೇಕು. ಕೇವಲ ಘೋಷಣೆಕೂಗಿ ಹಾರ ಹಾಕಿದರೆ ಸಾಲದು. ಹಾಗೆ ನೋಡಿದರೆ ಅವರು ಎಲ್ಲೋ ಹೋದರೂ ಅಲ್ಲಿನ ಜನರೊಂದಿಗೆ ಒಂದಾಗಿ ಬಾಳಬೇಕು ಚಳವಳಿಗೆ ಸಹಾಯಕವಾಗಬೇಕು ಎಂದು ಹೇಳಿದರು. ನಿಜ ಹೇಳಬೇಕೆಂದರೆ ಆ ಸಭೆಯ ಸ್ಥಳಕ್ಕೆ ಬಂದ ಆ ಮಲಯಾಳಿ ಬಂಧುಗಳಲ್ಲಿ ಪಕ್ಷದ ಸಂಪರ್ಕ ಇರುವವರು ಯಾರೂ ಇರಲಿಲ್ಲ.

ಆದರೆ ರಾಷ್ಟ್ರೀಯ ಮುಖಂಡರಾದ ಇ.ಎಂ.ಎಸ್ ಕೇರಳದ ಜನರ ಮನಸ್ಸಿನಲ್ಲಿ ಎಷ್ಟೊಂದು ಬೇರೂರಿದ್ದಾರೆ, ಅಲ್ಲಿಯ ಜನವಿಭಾಗಗಳ ಪ್ರೀತಿ ವಿಶ್ವಾಸವನ್ನು ಅವರು ಹೇಗೆ ಗಳಿಸಿದ್ದಾರೆ ಎನ್ನುವುದನ್ನು ಈ ಪ್ರಕರ ತೋರಿಸುತ್ತದೆ.

ಅಷ್ಟೇ ಅಲ್ಲದೆ, ತಮ್ಮ ಕುರಿತ ಅಭಿಮಾನದಿಂದ ವೈಯಕ್ತಿಕವಾಗಿ ಉಬ್ಬುವ ಜಾಯಮಾನ ಇ.ಎಂ.ಎಸ್ ರದ್ದಲ್ಲ. ಜನರು ತಮ್ಮಲ್ಲಿ ಹೊಂದಿರುವ ಪ್ರೀತಿ ಅಭಿಮಾನವನ್ನು ಎಡಪಂಥೀಯ ಅಂದೊಲನದ ವೃದ್ಧಿಗೆ ಬಳಸಿಕೊಳ್ಳುವ ಎಚ್ಚರ ಸಾದಾ ಅವರಲ್ಲಿತ್ತು ಎನ್ನುವುದನ್ನು ಅದು ತೋರಿಸುತ್ತದೆ. ದಿವಂಗತ ನೇತಾರನ ಮಹಾನ್ ಗುಣಗಳಲ್ಲಿ ಅದೂ ಒಂದಾಗಿತ್ತು.

ಸಮಯ ಪ್ರಜ್ಞೆ:

10-11 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಪಕ್ಷದ ಕಾರ್ಯಕರ್ತರ ತರಬೇತಿ ಶಿಬಿರವೊಂದು ನಡೆದಿತ್ತು. ಶಿಬಿರವನ್ನು ನಡೆಸಿಕೊಡಲು ಕಾ.॥ ಇ.ಎಂ.ಎಸ್ ಬಂದಿದ್ದರು.

ಆಗ ಬೇರೆ ಬೇರೆ ಪತ್ರಿಕೆಗಳಲ್ಲಿ ದುಡಿಯುತ್ತಿದ್ದ ಕೆಲವು ಸಂಗಾತಿಗಳು ಇ.ಎಂ.ಎಸ್‌ರ ಸಂದರ್ಶನಕ್ಕಾಗಿ ಸಮಯವನ್ನು ಕೋರಿದ್ದೆವು. ಅವರಲ್ಲಿ ನಾನೂ ಒಬ್ಬ. ಬೆಳಗ್ಗೆ 9ಕ್ಕೆ ಬರುವಂತೆ ಅವರು ಸೂಚಿಸಿದರು. ಮರುದಿನ ನಾವು ಪ್ರಾತಃವಿಧಿಗಳನ್ನೆಲ್ಲ ಮುಗಿಸಿ ಶಾಸಕರ ಭವನದಲ್ಲಿ ಕಾ॥. ಇ.ಎಂ.ಎಸ್ ಉಳಿದುಕೊಂಡಿದ್ದ ಕೊಠಡಿಗೆ ಹೋಗುವಾಗ 9.15 ದಾಟಿ ಹೋಗಿತ್ತು ಆದರೆ ನಾವಲ್ಲಿ ತಲುಪುವಾಗ ಆ ಹಿರಿಯ ಮುತ್ಸದ್ಧಿ ನೇತಾರ ಸಿದ್ದವಾಗಿ ಕುಳಿತಿದ್ದರು. ಅವರು ಒಂಬತ್ತು ಗಂಟೆಗೇ ಬಂದಿದ್ದರು ಎನ್ನುವುದು ಗೊತ್ತಾಯಿತು.

ರಾಜಕಾರಣಿಗಳೆಂದರೆ ಯಾವುದೇ ಕಾರ್ಯಕ್ರಮಕ್ಕೆ ವಿಳಂಬವಾಗಿ ಆಗಮಿಸುತ್ತಾರೆ ಎನ್ನುವುದೇ ಸರ್ವೆ ಸಾಮಾನ್ಯವಾಗಿರುವ ಅಭಿಪ್ರಾಯ. ಅದು ವಾಸ್ತವ ಕೂಡ ಆಗಿದೆ ಆದರೆ ಇ.ಎಂ.ಎಸ್ ಹಾಗಿರಲಿಲ್ಲ .ಸಮಯಕ್ಕೆ ಸರಿಯಾಗಿ ಹಾಜರಾಗುವುದು ಅವರ ಜೀವನದ ಅಂಗವೇ ಆಗಿತ್ತು ರಾಜಕಾರಣಿಗಳ ವಿಳಂಬ ಪ್ರವೃತ್ತಿಗೆ ಇ.ಎಂ.ಎಸ್ ಅಪರೂಪದ ಅಪವಾದ ಆಗಿದ್ದರು. ಇಲ್ಲಿ ಪ್ರಸ್ತಾಪಿಸಿರುವುದು ಒಂದು ಸಣ್ಣ ಉದಾಹರಣೆಯಷ್ಟೆ.

ವಾಜಪೇಯಿ ಸರಕಾರಕ್ಕೆ ಷಾಕ್ ಟ್ರೀಟ್‌ಮೆಂಟ್

ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿರುವ ಕೇಂದ್ರ ಸಚಿವರು ತಾವಾಗಿಯೇ ರಾಜೀನಾಮೆ ನೀಡಬೇಕು ಇಲ್ಲವೇ ಪ್ರಧಾನಿಯವರು ಈ ಮಂತ್ರಿಗಳನ್ನು ವಜಾ ಮಾಡಬೇಕೆಂದು ಅಖಿಲ ಭಾರತ ಅಣ್ಣಾ ಡಿಎಂಕೆ ಪ್ರಧಾನ ಕಾರ್ಯದರ್ಶಿ ಜೆ.ಜಯಲಲಿತಾ ಬುಧವಾರ ಇಲ್ಲಿ ಒತ್ತಾಯಿಸಿದರು.

ತಮ್ಮ ಪಕ್ಷದ ಆರ್.ಮುತ್ತಯ್ಯ ಬಿಜೆಪಿ ನೇತೃತ್ವದ ಸರಕಾರಕ್ಕೆ ಕಳೆದ ವಾರ ರಾಜೀನಾಮೆ ನೀಡಿದ್ದ ಪ್ರಕರಣವನ್ನು ಅನುಸರಿಸಿ ಮೊಕದ್ದಮೆ ಎದುರಿಸುತ್ತಿರುವ ಇತರರೂ ಪದತ್ಯಾಗ ಮಾಡಬೇಕು ಅಥವಾ ಅವರನ್ನು ತೆಗೆದುಹಾಕಬೇಕೆಂಬ ಕೇಳಿಕೆಯನ್ನು ಜಯಲಲಿತಾ ಮುಂದಿಟ್ಟ ಅಚ್ಚರ್ಯಕರ ವಿದ್ಯಮಾನ ಇದಾಗಿದೆ.

ಹಲವು ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿರುವವರು ಕೇಂದ್ರ ಮಂತ್ರಿಮಂಡಳದಲ್ಲಿ ಇರುವುದರಿಂದ ವಾಜಪೇಯಿ ನೇತೃತ್ವದ ಸರಕಾರಕ್ಕೆ ಜಯಲಲಿತಾರ ಈ ಒತ್ತಾಯ ತಲೆನೋವಾಗಿ ಪರಿಣಮಿಸಲಿದೆ.

ಯಾವುದೇ ತತ್ವ ಸಿದ್ಧಾಂತಗಳಿಲ್ಲದ ಬಿಜೆಪಿ ನೇತೃತ್ವದ ಕೂಟದ ಸರಕಾರ ತನ್ನದೇ ಅಂಗಪಕ್ಷಗಳ ಒತ್ತಡದಿಂದ ಕುಸಿದು ಬೀಳಲಿದೆ ಎಂಬ ಸಂಯುಕ್ತ ರಂಗದ ಅಭಿಪ್ರಾಯಕ್ಕೆ ಈ ವಿದ್ಯಮಾನ ಪುಷ್ಟಿಕೊಟ್ಟಿದೆ.

ಅಣ್ಣಾ ಡಿಎಂಕೆ ಕಾರ್ಯಕಾರಿಣಿ ಸಭೆಯ ನಂತರ ಕಿಕ್ಕಿರಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಯಲಲಿತಾ ನ್ಯಾಯಲಯಗಳಲ್ಲಿ ಆರೋಪಗಳನ್ನು ಎದುರಿಸುತ್ತಿರುವ ಸಂಪುಟ ಸಹೋದ್ಯೋಗಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪ್ರಧಾನಿ ಎ.ಬಿ.ವಾಜಪೇಯಿಯವರಿಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

ಮೈತ್ರಿಕೂಟದ ನಾಯಕನಿಗೆ ಮುಜುಗರ ಉಂಟುಮಾಡುವುದು ಈ ಕ್ರಮದ ಹಿಂದಿರುವ ಉದ್ದೇಶ ಎಂದು ಭಾವಿಸಲಾಗಿದೆ.

ಎರಡು ನಿಯಮ ಸಲ್ಲ

'ಎಐಎಡಿಎಂಕೆಗೆ ಒಂದು ನಿಯಮ ಮತ್ತು ಇತರ ರಾಜಕೀಯ ಪಕ್ಷಗಳು ಹಾಗೂ ರಾಜಕಾರಣಿಗಳಿಗೆ ಇನ್ನೊಂದು ನಿಯಮ ಸಲ್ಲದು. ಕೇಂದ್ರ ಮಂತ್ರಿ ಆರ್.ಮುತ್ತಯ್ಯ ಅವರಿಗೆ ಅನ್ವಯವಾದದ್ದು ಅದೇ ರೀತಿಯ ಸನ್ನಿವೇಶ ಎದುರಿಸುತ್ತಿರುವ ಇತರರಿಗೂ ಅನ್ವಯವಾಗಬೇಕು' ಎಂದು ಜಯಲಲಿತಾ ಹೇಳಿದರು.

ಯಾರನ್ನೂ ಹೆಸರಿಸದ ಜಯಲಲಿತಾ, 'ಅವರು ರಾಜಿನಾಮೆ ಕೊಡಬೇಕು, ಇಲ್ಲವೇ ಅವರನ್ನು ವಾಜಪೇಯಿ ಕೈ ಬಿಡಬೇಕು' ಎಂದು ಪ್ರತಿಪಾದಿಸಿದರು.

ಹೆಗಡೆ, ಬೂಟಾ, ಜಾರ್ಜ್ ಗುರಿ

ಜಯಲಲಿತಾರ ಬೇಡಿಕೆ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿರುವ ಬೂಟಾಸಿಂಗ್, ರಾಮಕೃಷ್ಣ ಹೆಗಡೆ ಮತ್ತು ಜಾರ್ಜ್ ಫರ್ನಾಂಡೀಸ್ ರಾಜಿನಾಮೆ ಕೊಡಬೇಕೆಂಬ ಎಡಿಎಂಕೆಯ ಮಿತ್ರ ಪಕ್ಷವಾದ ಜನತಾಪಕ್ಷದ ಅಧ್ಯಕ್ಷ ಸುಬ್ರಹ್ಮಣ್ಯ ಸ್ವಾಮಿ ಅವರ ಒತ್ತಾಯಕ್ಕೆ ಅನುಗುಣವಾಗಿದೆ.

ಜೆಎಂಎಂ/ಸಂಸದರ ಲಂಚ ಪ್ರಕರಣದಲ್ಲಿ ಸಂಪರ್ಕ ಖಾತೆ ಸಚಿವ ಬೂಟಾಸಿಂಗ್ ರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ.

ಆಯೋಧ್ಯಾ ಬಾಬರಿ ಮಸೀದಿ ನಾಶ ಪ್ರಕರಣದಲ್ಲಿ ಗೃಹ ಸಚಿವರಾದ ಎಲ್.ಕೆ.ಅಡ್ವಾಣಿ ಮತ್ತು ಮಾನವ ಸಂಪನ್ಮೂಲ ಖಾತೆ ಸಚಿವ ಮುರುಳಿ ಮನೋಹರ ಜೋಷಿ ಅವರ ವಿರುದ್ಧವೂ ಸಿಬಿಐ ಆರೋಪಪಟ್ಟಿ ಸಲ್ಲಿಸಿದೆ. ಇವುಗಳು ರಾಜಕೀಯ ಪ್ರಕರಣಗಳೆಂದು ಬಿಜೆಪಿ ಪ್ರತಿಪಾದಿಸಿದೆ.

ಚೆನ್ನೈಯ ವಿಶೇಷ ನ್ಯಾಯಾಲಯವೊಂದು ಕೇಂದ್ರ ಭೂ ಸಾರಿಗೆ ಸಚಿವ ಸೇಡಪಟ್ಟಿ ಆರ್. ಮುತ್ತಯ್ಯರ ವಿರುದ್ಧ ಆರೋಪ ಪಟ್ಟಿ ರೂಪಿಸಲು ಆದೇಶಿಸಿದ್ದ ಹಿನ್ನೆಲೆಯಲ್ಲಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು.

ಪಂಚಾಯತ್ ಚುನಾವಣೆ

ಒಗ್ಗಟ್ಟಿನ ಹೋರಾಟಕ್ಕೆ ಎಡರಂಗ ನಿರ್ಧಾರ

ಇದೇ ಮೇ 31 ರಂದು ಪಶ್ಚಿಮ ಬಂಗಾಳದ ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಸ್ಪರ್ಧಿಸಲು ರಾಜ್ಯದ ಎಡರಂಗ ನಿರ್ಧರಿಸಿದೆ. ಈಚೆಗೆ ನಡೆದ ಎಡರಂಗದ ಮಹತ್ವದ ಸಭೆ ಈ ಬಗ್ಗೆ ನಿರ್ಣಯವೊಂದನ್ನು ಕೈಗೊಂಡಿತು.

ಮುಖ್ಯಮಂತ್ರಿ ಜ್ಯೋತಿಬಸು ಸಭೆಯಲ್ಲಿ ಮಾತನಾಡಿದರು. ಲೋಕಸಭೆ ಚುನಾವಣೆಗಳ ನಂತರ ಉದ್ಭವವಾಗಿರುವ ರಾಜಕೀಯ ಪರಿಸ್ಥಿತಿಯನ್ನು ಅವರು ವಿವರವಾಗಿ ಪ್ರಸ್ತಾಪಿಸಿದರು.

ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಸ್ಪರ್ಧಿಸುವುದನ್ನು ಖಾತರಿಪಡಿಸುವುದು ಎಡರಂಗದ ಪ್ರತಿಯೊಂದು ಅಂಗಪಕ್ಷದ ಕರ್ತವ್ಯವಾಗಿದೆ ಎಂದು ಬಸು ಹೇಳಿದರು. ಹಿಂದೆ ಎಲ್ಲಾ 'ಮೈತ್ರಿಯುತ ಸ್ಪರ್ಧೆಯ' ಹೆಸರಿನಲ್ಲಿ ರಂಗದ ಅಂಗ ಪಕ್ಷಗಳು ಪರಸ್ಪರ ವಿರುದ್ಧ ಸೆಣಸಿದಂಥ ಪ್ರವೃತ್ತಿ ನಿಲ್ಲಲೇಬೇಕು ಎಂದು ಅವರು ಒತ್ತಿ ಹೇಳಿದರು. ಹಾಗೆ ಮಾಡದಿದ್ದಲ್ಲಿ ಎಡ ವಿರೋಧಿ ತೃಣಮೂಲ ಕಾಂಗ್ರೆಸ್, ಬಿಜೆಪಿ ಮತ್ತು ಕಾಂಗ್ರೆಸ್ ಗುಂಪುಗಳು ಚುನಾವಣೆಯಲ್ಲಿ ಹೆಚ್ಚಿನ ಲಾಭ ಪಡೆಯುತ್ತವೆ ಎಂದು ಸಿಪಿಐ(ಎಂ) ಮುಖಂಡರು ಎಚ್ಚರಿಕೆ ನೀಡಿದರು.

ರಂಗದ ಪ್ರತಿ ಪಾಲುದಾರ ಪಕ್ಷ ಸಾಕಷ್ಟು ರಾಜಕೀಯ ಪಕ್ವತೆ ಮತ್ತು ದೃಢತೆಯನ್ನು ತೋರಿಸಬೇಕು. ಒಂದು ಸ್ಥಾನಕ್ಕೆ ರಂಗದ ಒಬ್ಬ ಅಭ್ಯರ್ಥಿ ತತ್ವವನ್ನು ನಿಜವಾಗಿಯೂ ಅನುಷ್ಠಾನಕ್ಕೆ ತರಲು ಇದು ಅತ್ಯಗತ್ಯ ಎಂದು ನುಡಿದರು.

ಸಭೆಯಲ್ಲಿ ಹಾಜರಿದ್ದ ರಂಗದ ಎಲ್ಲಾ ಮುಖಂಡರು ಚುನಾವಣೆಯಲ್ಲಿ ಐಕ್ಯದಿಂದ ಹೋರಾಡಲು ಒಪ್ಪಿದರು.

ಪಂಚಾಯತ್ ಚುನಾವಣೆಗಾಗಿ ಚುನಾವಣಾ ಪ್ರಣಾಳಿಕೆಯೊಂದನ್ನು ಬಿಡುಗಡೆ ಮಾಡಲು ಎಡರಂಗ ನಿರ್ಧರಿಸಿದೆ.

ದೇಶದೊಳಗೆ

ವಿಶ್ವ

ಬೆಂಕಿ ಅನಾಹುತ 'ತೀಕದೀರ್' ಪತ್ರಿಕೆಗೆ ಹಾನಿ

ಮಧುರೆ ಪಟ್ಟಣದಲ್ಲಿರುವ ಸಿಪಿಐ(ಎಂ) ನ ತಮಿಳು ಪತ್ರಿಕೆ 'ತೀಕದೀರ್' ಸಮುಚ್ಛಯದಲ್ಲಿ ಏಪ್ರಿಲ್ ಐದರಂದು ಸಂಭವಿಸಿದ ಅಗ್ನಿ ಅನಾಹುತದಿಂದಾಗಿ ಆಸ್ತಿಪಾಸ್ತಿಗೆ ಅಪಾರ ಹಾನಿ ಉಂಟಾಗಿದೆ.

'ತೀಕದೀರ್' ದೈನಿಕದ ಮಧುರೆ ಆವೃತ್ತಿಯ ಸಂಪಾದಕೀಯ ಕಚೇರಿ, ಮುದ್ರಣಾಲಯ ಮತ್ತು ವೈಗೈ ಪ್ರಕಟಣೆಗಳು ಈ ಸಮುಚ್ಛಯದಿಂದ ಕಾರ್ಯ ನಿರ್ವಹಿಸುತ್ತಿವೆ.


ನಡು ಹಗಲಲ್ಲಿ ಶೆಡ್ ಒಂದರಲ್ಲಿ ಕಾಣಿಸಿಕೊಂಡ ಬೆಂಕಿ ಮಧ್ಯಾಹ್ನದ ಬಿಸಿಗಾಳಿಯಿಂದಾಗಿ ನ್ಯೂಸ್‌ಪ್ರಿಂಟ್ ಮತ್ತು ಗೋದಾಮಿನಲ್ಲಿರುವ ಇತರ ವಸ್ತುಗಳಿಗೆ ಬೇಗನೆ ವ್ಯಾಪಿಸಿಕೊಂಡಿತು. ಬೆಂಕಿಯ ಕೆನ್ನಾಲಿಗೆ ಚಾಚಿದ ವೇಳೆ ಪತ್ರಪುಸ್ತಗಳ ಬೈಂಡಿಂಗ್ ಮತ್ತು ಬಂಡ್ಲಿಂಗ್, ವೈಗೈ ಪಬ್ಲಿಕೇಷನ್ ಕೈಗೊಂಡಿದ್ದ ಜಾಬ್‌ವರ್ಕ್ ಕೆಲಸ ನಡೆಯುತ್ತಿತ್ತು. ಬೆಂಕಿಯಿಂದ ಅದೆಲ್ಲ ಪೂರ್ಣ ಸುಟ್ಟುಹೋಯಿತು.

ಸಂಕೀರ್ಣದ ಸಮೀಪದ ಸ್ಥಳದ ಪಕ್ಷದ ಕಾರ್ಯಕರ್ತರು ಮತ್ತು ಹಿತೈಷಿಗಳು ಸುದ್ದಿ ತಿಳಿದ ತಕ್ಷಣವೇ ಧಾವಿಸಿ ಬಂದು ಬೆಂಕಿ ಆರಿಸುವ ಪ್ರಯತ್ನದಲ್ಲಿ ನೆರವಾದರು. 25 ಲಕ್ಷ ರೂಪಾಯಿ ಮೊತ್ತದ ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಸುದ್ದಿ ತಿಳಿಯುತ್ತಲೇ ಧಾವಿಸಿಬಂದ ಪಕ್ಷದ ಕೇಂದ್ರ ಸಮಿತಿ ಸದಸ್ಯ ಎಸ್.ವರದರಾಜನ್ ಪರಿಹಾರ ಕಾರ್ಯಗಳ ಮೇಲುಸ್ತುವಾರಿ ನೋಡಿಕೊಂಡರು.

ತ್ರಿಪುರಾದಲ್ಲಿ ಏನಾಗುತ್ತಿದೆ?

ಮುಖ್ಯಮಂತ್ರಿ ಮಾಣಿಕ್‌ಸರ್ಕಾರ್‌ರೊಡನೆ ಐಎನ್‌ಎನ್ ಸಂದರ್ಶನ



ತ್ರಿಪುರಾದಲ್ಲಿ ಉಗ್ರಗಾಮಿಗಳ ಹಿಂಸಾ ಕೃತ್ಯಗಳು ಹೆಚ್ಚುತ್ತಿರುವಂತೆ ಕಾಣುತ್ತಿದೆ. ಇತ್ತೀಚೆಗೆ ರಾಜ್ಯದ ಆರೋಗ್ಯ ಮಂತ್ರಿ ಬಿಮಲ್ ಸಿನ್ಹಾ ಕೊಲೆ ಇದರ ಒಂದು ಸಂಕೇತ. ಎಡರಂಗ ಸರಕಾರ ಬೆಸೆದಿರುವ ಜನಾಂಗೀಯ ಐಕ್ಯತೆಯನ್ನು ಮುರಿಯುವುದು ಉಗ್ರಗಾಮಿಗಳ ಮುಖ್ಯ ಗುರಿ. ಹಲವರನ್ನು ಬಲಿ ತೆಗೆದುಕೊಂಡರೂ ಅವರ ಉದ್ದೇಶ ಮಾತ್ರ ಈಡೇರಿಲ್ಲ. ಏಕೆಂದರೆ ಬಹುಪಾಲು ಬುಡಕಟ್ಟು ಜನ ಈಗಲೂ ಪ್ರಜಾಪ್ರಭುತ್ವವಾದಿ ಆಂದೋಲನದೊಂದಿಗೆ ಇದ್ದಾರೆ ಎನ್ನುತ್ತಾರೆ ತ್ರಿಪುರಾದ ಹೊಸ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್.

ದಿಲ್ಲಿಗೆ ಬಂದಿದ್ದಾಗ ತಮ್ಮನ್ನು ಭೇಟಿ ಮಾಡಿದ ಐ.ಎನ್.ಎನ್. ನೊಂದಿಗೆ ಮಾತನಾಡುತ್ತಾ ಮಾಣಿಕ್ ಸರ್ಕಾರ್ ರಾಜ್ಯದಲ್ಲಿ ಈಗಲೂ ಬಡತನದ ರೇಖೆಯ ಕೆಳಗಿರುವ ಶೇ. 74 ರಷ್ಟು ಜನರ ಬದುಕನ್ನು ಉತ್ತಮಗೊಳಿಸುವುದು ತಮ್ಮ ಸರಕಾರದ ಪ್ರಮುಖ ಕಾರ್ಯಭಾರ ಎಂದರು. ಇದಕ್ಕಾಗಿ ರಾಜ್ಯದ ಅಭಿವೃದ್ಧಿಗೆ ಪ್ರಥಮ ಆದ್ಯತೆ ಕೊಡಬೇಕಾಗುತ್ತದೆ, ಈ ನಿಟ್ಟಿನಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವುದು, ಜನಾಂಗೀಯ ಐಕ್ಯತೆಯನ್ನು ಕಾಪಾಡಿಕೊಳ್ಳುವುದು ತಮ್ಮ ನಾಲ್ಕನೇ ಎಡರಂಗ ಸರಕಾರದ ಮುಂದಿರುವ ಮುಖ್ಯ ಸವಾಲು ಎಂದು ಹೇಳಿದರು.

"ಉಗ್ರಗಾಮಿ ಚಟುವಟಿಕೆಗಳು ಬುಡಕಟ್ಟು ಪ್ರದೇಶಗಳಲ್ಲಿ ರಚನಾತ್ಮಕ ಕೆಲಸಗಳಿಗೆ ಧಕ್ಕೆ ತರುತ್ತಿದೆ. ನಾವು ಅವರನ್ನು ಮುಖ್ಯ ಪ್ರವಾಹಕ್ಕೆ ತರಬಯಸುತ್ತೇವೆ, ಅದಕ್ಕಾಗಿ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸಿದ್ಧರಿದ್ದೇವೆ. ಅದೇ ವೇಳೆಗೆ ಈ ಕೇಳಿಕೆಗೆ ಸ್ಪಂದಿಸದವರನ್ನು ಎದುರಿಸಲೇಬೇಕು. ಅದಕ್ಕೆ ನಮಗೆ ಕೇಂದ್ರ ಸರಕಾರದಿಂದ ಹೆಚ್ಚು ನೆರವು ಬೇಕು ಎಂದು ಮಾಣಿಕ್ ಸರ್ಕಾರ್ ಹೇಳಿದರು:

ತ್ರಿಪುರಾದಲ್ಲಿ ಏಕೆ ಈ ಉಗ್ರಗಾಮಿ ಚಟುವಟಿಕೆಗಳು?

ಈ ಬಗ್ಗೆ ಕೇಳಿದಾಗ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅದರ ಮೂಲಗಳನ್ನು ವಿವರಿಸಿದರು. 1947ರಲ್ಲಿ ರಾಜ್ಯದಲ್ಲಿ ಬುಡಕಟ್ಟು ಜನಗಳೇ ಬಹುಸಂಖ್ಯಾತರಾಗಿದ್ದರು. ಆದರೆ ಸ್ವಾತಂತ್ರ್ಯನಂತರ ದೇಶ ವಿಭಜನೆಗೊಂಡಾಗ ದೊಡ್ಡ ಸಂಖ್ಯೆಯಲ್ಲಿ ಆಗಿನ ಪೂರ್ವ ಪಾಕಿಸ್ತಾನ ಗಡಿಜಿಲ್ಲೆಗಳಿಂದ ಶರಣಾರ್ಥಿಗಳು ಬಂದು ಈ ರಾಜ್ಯದ ಸ್ವರೂಪವೇ ಬದಲಾಯಿತು. ಬುಡಕಟ್ಟು ಜನಗಳು ಅಲ್ಪ ಸಂಖ್ಯಾತರಾದರು. ಕ್ರಮೇಣ ಅವರ ಜಮೀನು ಪರಭಾರೆಯಾಗಿ ಅವರ ಬಡತನ ಹೆಚ್ಚುತ್ತಾ ಹೋಯಿತು. ಶಿಕ್ಷಣವೂ ಇಲ್ಲದೆ ರಾಜ್ಯ ಆಡಳಿತದಲ್ಲಿ ಅವರ ಪ್ರಾತಿನಿಧ್ಯವೂ ಇರಲಿಲ್ಲ. ಕೇಂದ್ರ ಮತ್ತು ರಾಜ್ಯದ ಕಾಂಗ್ರೆಸ್ ಸರಕಾರಗಳ ನೀತಿಯಿಂದಾಗಿ ಬುಡಕಟ್ಟು ಜನಗಳ ಪರಕೀಯ ಭಾವನೆ ಇನ್ನಷ್ಟು ಹೆಚ್ಚಾಯಿತು.

ಆಗ ಬುಡಕಟ್ಟು ಜನಗಳ ಪರವಾಗಿ ನಿರಂತರ ಹೋರಾಟ ನಡೆಸಿದವರು ಕಮ್ಯುನಿಸ್ಟರು ಮತ್ತು ಇತರ ಎಡಪಂಥೀಯರು. ಇದರಿಂದಾಗಿ ಈ ರಾಜ್ಯದಲ್ಲಿ ಬುಡಕಟ್ಟು ಜನ ಕಮ್ಯುನಿಸ್ಟ್ ಆಂದೋಲನದ ಬೆನ್ನೆಲುಬಾದರು. 1940 ರ ದಶಕದಲ್ಲಿ ದಶರಥ್ ದೇಬ್ ಬುಡಕಟ್ಟು ಜನಗಳ ಬಂಡಾಯಕ್ಕೆ ನೇತೃತ್ವ ನೀಡಿದರು. 1980ರ ದಶಕದಲ್ಲಿ ಮೊದಲ ಮತ್ತು ಎರಡನೇಯ ಎಡರಂಗ ಸರಕಾರಗಳು ಬುಡಕಟ್ಟು ಜನಗಳ ಪರಿಸ್ಥಿತಿ ಸುಧಾರಿಸಲು ಹಲವು ಕ್ರಮ ಕೈಗೊಂಡರು. ತ್ರಿಪುರಾ ಬುಡಕಟ್ಟು ಪ್ರದೇಶ ಸ್ವಾಯತ್ತ ಜಿಲ್ಲಾ ಮಂಡಳಿ ರಚನೆ, ಕೋಕ್ ಬೋರಾಕ್ ಭಾಷೆಗೆ ಎರಡನೇ ಅಧಿಕೃತ ಭಾಷೆಯ ಸ್ಥಾನಮಾನ, ಆ ಭಾಷೆಯಲ್ಲಿ ಶಿಕ್ಷಣ ನೀಡುವ 1000 ಶಾಲೆಗಳು, ಬುಡಕಟ್ಟು ಜನಗಳಿಗೆ ಜಮೀನು ಮತ್ತೆ ಪಡೆಯುವ ಶಾಸನ, ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ಕೋಟಾ ಭರ್ತಿ - ಮುಂತಾದ ಹಲವು ಕ್ರಮಗಳನ್ನು ಕೈಗೊಳ್ಳಲಾಯಿತು. ಈಗಲೂ ಬುಡಕಟ್ಟು ಜನಗಳ ಕಲ್ಯಾಣ ಹಾಗೂ ಅವರ ಆರ್ಥಿಕ ಅಭಿವೃದ್ಧಿಗೆ ಅವಕಾಶ ಕಲ್ಪಿಸುವುದು ನಾಲ್ಕನೇ ಸಿ.ಪಿ.ಐ.(ಎಂ) ಸರಕಾರದ ಕಾರ್ಯಕ್ರಮದ ಪ್ರಮುಖ ಅಂಶ ಎನ್ನುತ್ತಾರೆ ಹೊಸ ಮುಖ್ಯಮಂತ್ರಿಗಳು.

ಭಯೋತ್ಪಾದನೆ ಎಂದು ಆರಂಭವಾಯಿತು?

ಜನವರಿ 1978 ರಲ್ಲಿ ಮೊದಲ ಎಡರಂಗ ಸರಕಾರ ಅಧಿಕಾರಕ್ಕೆ ಬಂದು ಬುಡಕಟ್ಟು ಜನಗಳ ಪರಿಸ್ಥಿತಿಯನ್ನು ಸುಧಾರಿಸುವ ಕ್ರಮಗಳನ್ನು ಒಂದೊಂದಾಗಿ ಜಾರಿಮಾಡಲಾರಂಭಿಸಿ ಬುಡಕಟ್ಟು ಜನಗಳ ಪರಕೀಯ ಭಾವನೆ ಮಾಯವಾಗ ತೊಡಗಿದಾಗ 1980ರಲ್ಲಿ ಭಾರತದ ಹಿತಾಸಕ್ತಿಗಳನ್ನು ಬಯಸದ ಶಕ್ತಿಗಳು ಗಲಭೆ ಪ್ರಚೋದಿಸಲಾರಂಭಿಸಿದರು. ಪ್ರತಿಪಕ್ಷವಾಗಿ ಮೂಲೆಗೆ ತಳ್ಳಲ್ಪಟ್ಟ ಕಾಂಗ್ರೆಸ್ ಪಕ್ಷ ದೇಶದ ಐಕ್ಯತೆಯ ಹಿತಾಸಕ್ತಿಗಳನ್ನು ಮರೆತು ತನ್ನ ಸಂಕುಚಿತ ಹಿತಾಸಕ್ತಿಗಳಿಗಾಗಿ ಇದಕ್ಕೆ ಪ್ರೋತ್ಸಾಹ ನೀಡಲಾರಂಭಿಸಿತು. ತ್ರಿಪುರಾ ನ್ಯಾಶನಲ್ ವಾಲಂಟಿಯರ್ಸ್ ಅಥವಾ ಟಿ.ಎನ್.ವಿ.ಗೆ ಪ್ರೋತ್ಸಾಹ ನೀಡ ಲಾರಂಭಿಸಿತು.

1988ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಮರಳಿದಾಗ ಟಿ.ಎನ್.ವಿ.ಯನ್ನು ಬಳಸಿ ಜನಗಳಲ್ಲಿ ಭಯದ ವಾತಾವರಣ ಮೂಡಿಸಲು ಕೇಂದ್ರ-ರಾಜ್ಯ ಸರಕಾರಗಳೆರಡೂ ಪ್ರಯತ್ನಿಸಿದವು. ಟಿ.ಎನ್.ವಿ. ಕಾಂಗ್ರೆಸ್ ಕೇಂದ್ರ ಸರಕಾರದೊಡನೆ ಒಂದು ಒಪ್ಪಂದ ಮಾಡಿಕೊಂಡು ಕಾಂಗ್ರೆಸ್‌ನ ಮಿತ್ರ ಪಕ್ಷವಾಯಿತು. ಆದರೆ ಉಗ್ರವಾದಿ ಚಟುವಟಿಕೆಗಳು ನಿಲ್ಲಲಿಲ್ಲ. ಹಳೆಯ ಟಿ.ಎನ್.ವಿ.ಯಿಂದ ಹೊಸ ಸಂಘಟನೆಗಳು ಹುಟ್ಟಿಕೊಂಡವು. ಎನ್.ಎಲ್.ಎಫ್.ಟಿ., ಎ.ಟಿ.ಟಿ.ಎಫ್. ಇತ್ಯಾದಿ. ಬಾಂಗ್ಲಾ ದೇಶದಲ್ಲಿ ಅಡಗಿಕೊಂಡು ಈಶಾನ್ಯ ಭಾರತದ ಇತರ ಉಗ್ರಗಾಮಿ ಸಂಘಟನೆಗಳೊಂದಿಗೆ ಸಂಪರ್ಕ ಇಟ್ಟುಕೊಂಡ ಸಂಘಟನೆಗಳಿವು. ಇವು ಬುಡಕಟ್ಟು ಜನಗಳಿಗಾಗಿ ಹೋರಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದರೂ ವಾಸ್ತವವಾಗಿ ತಮ್ಮ ಭಯೋತ್ಪಾದಕತೆಯ ಮೂಲಕ ಅಭಿವೃದ್ಧಿ ಕಾರ್ಯದಲ್ಲಿ ಅಡಚಣೆ ತಂದು ಅವು ಬುಡಕಟ್ಟು ಜನಗಳಿಗೇ ಹೆಚ್ಚಿನ ಹಾನಿ ತರುತ್ತಿವೆಯೆನ್ನುವ ತ್ರಿಪುರ ಮುಖ್ಯಮಂತ್ರಿಗಳು ಅವರು ಎಡಶಕ್ತಿಗಳು ರಾಜ್ಯದಲ್ಲಿ ಬೆಸೆದ ಜನಾಂಗ ಐಕ್ಯತೆಯನ್ನು ಮುರಿಯಲು ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗಿಲ್ಲ ಎಂದರು. ಇನ್ನೊಂದೆಡೆ ಬುಡಕಟ್ಟು ಜನಗಳೆಲ್ಲರನ್ನೂ ಉಗ್ರಗಾಮಿಗಳೆಂದು ಚಿತ್ರಿಸುವ ಪ್ರಯತ್ನವನ್ನು ವಿರೋಧಿಸಿದ ಮುಖ್ಯಮಂತ್ರಿಗಳು ಬುಡಕಟ್ಟು ಜನಗಳಲ್ಲಿ ಶೇ. 1ರಷ್ಟು ಕೂಡ ಈ ಚಟುವಟಿಕೆಗಳಲ್ಲಿ ತೊಡಗದೆ ಅವರೆಲ್ಲಾ ಪ್ರಜಾಪ್ರಭುತ್ವವಾದಿ ಆಂದೋಲನದೊಂದಿಗೆ ದೃಢವಾಗಿ ನಿಂತಿದ್ದಾರೆ ಎನ್ನುತ್ತಾರೆ. ಈ ಐಕ್ಯತೆಯನ್ನು ಕಾಪಾಡಿಕೊಂಡು ಬಲಿಷ್ಠಗೊಳಿಸುವುದು ಸರಕಾರದ ಕರ್ತವ್ಯ ಎಂದು ಮಾಣಿಕ್ ಸರ್ಕಾರ್ ಐ.ಎನ್.ಎನ್.ನ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು.

(ಐಎನ್‌ಎನ್)

ಐತಿಹಾಸಿಕ ಉತ್ತರ ಐರ್ಲೆಂಡ್ ಶಾಂತಿ ಒಪ್ಪಂದ

ಇಂಗ್ಲೆಂಡಿನ 'ಕಾಶ್ಮೀರ ಸಮಸ್ಯೆ' ಎಂದು ಕುಖ್ಯಾತವಾದ ಉತ್ತರ ಐರ್ಲೆಂಡಿನ ಮೂರು ದಶಕಗಳ ಹಿಂಸಾಚಾರ ನಿಲ್ಲಿಸ ಬಹುದಾದ ಶಾಂತಿ ಒಪ್ಪಂದಕ್ಕೆ, ಈ ವಿವಾದದಲ್ಲಿ ಮುಳುಗಿರುವ ಎರಡು ಪಕ್ಷ ಸಹಿ ಹಾಕಿದವು. ಈ ಒಪ್ಪಂದದ ಕರಡನ್ನು ಅಮೇರಿಕದ ಮಾಜಿ ಸೆನೆಟರ್ ಜಾರ್ಜ್ ಮಿತೆಲ್‌ರ ನಾಯಕತ್ವದಲ್ಲಿ ಅಂತರಾಷ್ಟ್ರೀಯ ನಿಯೋಗವೊಂದು ತಯಾರಿಸಿತ್ತು. ಈ ಒಪ್ಪಂದದಿಂದ ಮೂರು ದಶಕಗಳಿಂದ ಮೂರು ಸಾವಿರಕ್ಕೂ ಹೆಚ್ಚು ಜನರನ್ನು ಉತ್ತರ ಐರ್ಲೆಂಡಿನಲ್ಲಿ ಬಲಿ ತೆಗೆದುಕೊಂಡ ಘರ್ಷಣೆ, ಹಿಂಸಾಚಾರ ನಿಲ್ಲುವ ಸಾಧ್ಯತೆ ಇದೆ. ಆದರೆ ಈ ಒಪ್ಪಂದ ಜಾರಿ ಆಗುವುದು ಐರ್ಲೆಂಡಿನ ಮತ್ತು ಬ್ರಿಟಿಷ್ ದೇಶದ ಭಾಗ ವಾದ ಉತ್ತರ ಐರ್ಲೆಂಡಿನಲ್ಲಿ ಪ್ರತ್ಯೇಕವಾಗಿ ಮೇ 22ರಂದು ನಡೆಸಲಾಗುವ ಜನಮತ ಸಂಗ್ರಹದಲ್ಲಿ ಈ ಒಪ್ಪಂದಕ್ಕೆ ಅಂಗೀಕಾರ ದೊರೆತ ಮೇಲೆ. ಇಂತಹ ಜನಮತ ಸಂಗ್ರಹ ನಡೆಸಬೇಕೆಂಬುದು ಈ ಒಪ್ಪಂದದ ಭಾಗ. ಸಾಕಷ್ಟು ಚೌಕಾಸಿ, ಬಿಸಿ-ಬಿಸಿ ಚರ್ಚೆ, ಅನುಮಾನ-ಬಿಗುಮಾನ, ಘರ್ಷಣೆಗಳ ನಂತರ ಆದ ಈ ಒಪ್ಪಂದವನ್ನು ಇನ್ನೂ ಹಾಳುಗೆಡವಬಹುದಾದ ಉಗ್ರಗಾಮಿಗಳು ಅವರ ಕಡೆ ಇದ್ದಾರೆ. ಆದರೂ ಬ್ರಿಟಿಷ್, ಐರ್ಲೆಂಡ್ ಸರ್ಕಾರ ಮತ್ತು ಅಂತ ರ್ರಾಷ್ಟ್ರೀಯ ನೆರವಿನಿಂದ ಆದ ಈ ಒಪ್ಪಂದ ಉಳಿಯುವ ಹೆಚ್ಚಿನ ಸಾಧ್ಯತೆ ಇದೆ. ಈ ಒಪ್ಪಂದದ ಪ್ರಕಾರ ಉತ್ತರ ಐರ್ಲೆಂಡ್ ಸಧ್ಯಕ್ಕೆ ಬ್ರಿಟನ್ ದೇಶದ ಭಾಗವಾಗಿಯೇ ಉಳಿದು, ಐರ್ಲೆಂಡ್ ಜೊತೆ ಕ್ಷೇಮ ಸಂಬಂಧ ಬೆಳೆಸುತ್ತದೆ. ಈ ವಿವಾದದ ಮುಖ್ಯ ಪಕ್ಷಗಳಾದ ಕ್ಯಾಥೋಲಿಕ್ ಐರಿಷ್ ರಿಪಬ್ಲಿಕನ್ ಆರ್ಮಿಯ ರಾಜಕೀಯ ವಿಭಾಗ ಸಿನ್‌ಫಿನ್ ಮತ್ತು ಪ್ರೊಟೆಸ್ಟೆಂಟ್ ಅಲ್‌ಸ್ಟರ್ ಯೂನಿಯನಿಸ್ಟ್ ಪಾರ್ಟಿಗಳು ಈ ಚರ್ಚೆ ಯಲ್ಲಿ ಭಾಗವಹಿಸಿ ಒಪ್ಪಂದದ ಭಾಗವಾಗಿದ್ದು ಗಮನಾರ್ಹ.

ಉತ್ತರ ಐರ್ಲೆಂಡಿನ ಸಮಸ್ಯೆ ಉಗಮ ವಾದದ್ದು, ಬ್ರಿಟಿಷ್ ವಸಾಹತುಶಾಹಿಯಿಂದ ಐರ್ಲೆಂಡಿನ ಸ್ವಾತಂತ್ರ್ಯ ಪಡೆಯುವ ಸಮಯದಲ್ಲಿ ಆ ದೇಶವನ್ನು ಧರ್ಮದ ಆಧಾರದ ಮೇಲೆ ಇಬ್ಭಾಗಗೊಳಿಸಿದ್ದು. ಕ್ಯಾಥೋಲಿಕ್ ಬಹು ಸಂಖ್ಯಾತರಾದ ದಕ್ಷಿಣ ಐರ್ಲೆಂಡ್‌ಗೆ ಸ್ವಾತಂತ್ರ್ಯ ಕೊಡಲಾಯಿತು. ಇದು ಹೊಸದೇನಲ್ಲ- ಬ್ರಿಟನ್‌ನ ಒಡೆದು ಆಳುವ ನೀತಿ. ಅಂದಿನಿಂದ ಬ್ರಿಟಿಷ್ ಸರಕಾರದ ಕೃಪಾಕಟಾಕ್ಷದಿಂದ ಹುಟ್ಟಿದ ಪ್ರೊಟೆಸ್ಟೆಂಟ್ ಪಕ್ಷ ಮತ್ತು ಕ್ಯಾಥೋಲಿಕ್ ಅಲ್ಪಸಂಖ್ಯಾತರ ನಡುವೆ ಘರ್ಷಣೆ ಹಿಂಸಾತ್ಮಕ ಘಟ್ಟ ಮುಟ್ಟಿದೆ. ಐರಿಷ್ ರಿಪಬ್ಲಿಕನ್ ಆರ್ಮಿ(ಐ.ಆರ್.ಎ.) ಮತ್ತು ಅದರ ರಾಜಕೀಯ ವಿಭಾಗ ಸಿನ್‌ಫಿನ್ ಉತ್ತರ ಐರ್ಲೆಂಡು ಐರ್ಲೆಂಡಿನ ಜೊತೆ ಸೇರಲು ಇಚ್ಛಿಸುವ ಕ್ಯಾಥೋಲಿಕ್ ಅಲ್ಪಸಂಖ್ಯಾತರ ಪರವಾಗಿ ಹೋರಾಡುತ್ತಿತ್ತು. ಅಲ್‌ಸ್ಟರ್ ಯೂನಿಯನಿಸ್ಟ್ ಪಾರ್ಟಿ ಉತ್ತರ ಐರ್ಲೆಂಡಿನಲ್ಲಿ ಮಾತ್ರ ಬಹುಸಂಖ್ಯಾತ ರಾಗಿರುವ ಪ್ರೊಟೆಸ್ಟೆಂಟ್‌ರ ಪರವಾಗಿ ಬ್ರಿಟಿಷ್ ಪ್ರಾಂತ್ಯವಾಗಿ ಉಳಿಯಲು ಹೋರಾಡುತ್ತಿತ್ತು. ಉತ್ತರ ಐರ್ಲೆಂಡ್ ಪ್ರಾಂತ್ಯದಲ್ಲಿ ಪ್ರೊಟೆಸ್ಟೆಂಟರ ವಲಸೆಯಿಂದ ಅವರನ್ನು ಬೇಕೆಂತಲೆ ಬಹುಸಂಖ್ಯಾತ ರನ್ನಾಗಿಸಲಾಯಿತು. ನಿಜವಾಗಿ ಐರ್ಲೆಂಡ್ ಸ್ವತಂತ್ರವಾದಾಗ ಕ್ಯಾಥೋಲಿಕರೇ ಬಹುಸಂಖ್ಯಾತರು ಎಂದು ಐ.ಆರ್.ಎ. ಹೇಳುತ್ತದೆ. ಕಳೆದ ಮೂರು ದಶಕದಲ್ಲಿ ಬ್ರಿಟಿಷ್ ಸೈನ್ಯ ಐ.ಆರ್.ಎ. ಗೆರಿಲ್ಲಾಗಳನ್ನು ಬೇಟೆಯಾಡುತ್ತಿದ್ದರೆ, ಐ.ಆರ್.ಎ. ಗೆರಿಲ್ಲಾಗಳು ಪ್ರೊಟೆಸ್ಟೆಂಟ್ ನಾಗರಿಕರ ಹತ್ಯೆ, ಹಲ್ಲೆಯ ಪ್ರತೀಕಾರದಲ್ಲಿ ತೊಡಗಿದ್ದಾರೆ. ಅಲ್‌ಸ್ಟರ್ ಯೂನಿಯನಿಸ್ಟ್ ಪಾರ್ಟಿಯ ಸದಸ್ಯರು ಕ್ಯಾಥೋಲಿಕ್ ನಾಗರಿಕರ ಹತ್ಯೆ, ಹಲ್ಲೆಯಲ್ಲಿ ತೊಡಗಿದ್ದರು.

ಟೋನಿ ಬ್ಲೇರರ ಲೇಬರ್ ಸರ್ಕಾರದ ನೀತಿ ಬದಲಾವಣೆಯಿಂದ ಐರಿಷ್ ಶಾಂತಿ ಒಪ್ಪಂದ ಬಾಳೀತು ಎಂದು ಆಶಿಸಬಹುದು. ಜನರಲ್ಲಿ ಶಾಂತಿ ಮರಳುವ ಬಗ್ಗೆ ಉತ್ಸುಕತೆಯೂ ಇದಕ್ಕೆ ಸಹಾಯ ಮಾಡೀತು.

ಚೀನಾದಲ್ಲಿ ಎರಡು ಕೊರಿಯಾಗಳ ಮಾತುಕತೆಗಳು

ನಾಲ್ಕು ವರ್ಷಗಳ ಅವಧಿಯ ನಂತರ ಉತ್ತರ ಮತ್ತು ದಕ್ಷಿಣ ಕೊರಿಯಾಗಳು ಉನ್ನತ ಮಟ್ಟದ ಮಾತುಕತೆಗಳನ್ನು ಪುನರಾರಂಭಿಸಿದರು. ಈ ಮಾತುಕತೆಗಳನ್ನು ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ನಡೆಸಲಾಗುತ್ತಿದೆ. ಈಗ ಎರಡು ಸರ್ಕಾರಗಳ ನಡುವೆ ಉಪಮಂತ್ರಿಗಳ ಮಟ್ಟದ ಪ್ರತಿನಿಧಿ ಮಂಡಲಗಳ ನಡುವೆ ಮಾತುಕತೆ ನಡೆಯುತ್ತಿದೆ. ಹಾಗೂ ಇತರ ಕ್ಷೇತ್ರಗಳಲ್ಲಿ ಪರಸ್ಪರ ಆರ್ಥಿಕ ಸಹಕಾರ, ದೇಶ ಇಬ್ಭಾಗ ವಾದಾಗ ಒಡೆದು ಹೋದ ಕುಟುಂಬಗಳ ನಡುವೆ ಸಂಪರ್ಕ ಸಾಧ್ಯಮಾಡುವುದು, ಎರಡು ದೇಶಗಳ ನಡುವೆ ಘರ್ಷಣೆ, ಅಪನಂಬಿಕೆ ಕಡಿಮೆ ಮಾಡಲು ಕ್ರಮಗಳು - ಇವು ಮಾತಕತೆಗಳ ವಿಷಯಗಳು. ಉತ್ತರ ಕೊರಿಯಾ ಈಗ ಎದುರಿಸುತ್ತಿರುವ ಕ್ಷಾಮ ಪರಿಹಾರಕ್ಕೆ ದಕ್ಷಿಣ ಕೊರಿಯಾದ ಸಹಾಯ ಒಂದು ಪ್ರಮುಖ ವಿಷಯ.

1950ರಲ್ಲಿ ನಡೆದ ಕೊರಿಯಾ ಯುದ್ಧದ ಮೂಲಕ ಸಾಮ್ರಾಜ್ಯಶಾಹಿ, ಇಡೀ ಕೊರಿಯಾ ಸಮಾಜವಾದಿ ಹಾದಿಯನ್ನು ಆಯ್ದುಕೊಳ್ಳುವುದನ್ನು ಮಿಲಿಟರಿ ಮಧ್ಯಪ್ರವೇಶದ ಮೂಲಕ ತಪ್ಪಿಸಿತು. ಸಮಾಜವಾದಿ ಉತ್ತರ ಕೊರಿಯಾ ಮತ್ತು ಸಾಮ್ರಾಜ್ಯಶಾಹಿ ಬೆಂಬಲಿತ ಬಂಡವಾಳಶಾಹಿ ದಕ್ಷಿಣ ಕೊರಿಯಾಗಳು ಆಗಿನಿಂದ ಸೈದ್ಧಾಂತಿಕ, ರಾಜಕೀಯ ಘರ್ಷಣೆಯಲ್ಲಿ ತೊಡಗಿವೆ. ಇದು ಸಾಮ್ರಾಜ್ಯಶಾಹಿಯ ಒಡೆದು ಆಳುವ ತಂತ್ರ. ಕೊರಿಯಾದ ಸಮಾಜವಾದಿ ಕ್ರಾಂತಿಯ ನೇತಾರ ಕಿಮ್-ಉಲ್-ಸುಂಗರ 'ಎರಡು ವ್ಯವಸ್ಥೆಗಳು, ಒಂದು ದೇಶ' ನೀತಿ ಆಧಾರದ ಮೇಲೆ ಕೊರಿಯಾ ಪುನರೈಕ್ಯತೆಯನ್ನು ಉತ್ತರ ಕೊರಿಯಾ ಪ್ರತಿಪಾದಿಸುತ್ತಿದೆ. ದಕ್ಷಿಣ ಕೊರಿಯಾ ಮತ್ತು ಅದರ ಬೆಂಬಲಿಗ ಅಮೇರಿಕ ಅತ್ತ ಕೊರಿಯಾದ ಸಮಾಜವಾದಿ ವ್ಯವಸ್ಥೆ ಕಳಚಿ ಹಾಕಿ ಬಂಡವಾಳಶಾಹಿ ಕೊರಿಯಾ ಐಕ್ಯತೆ ಸಾಧಿಸಲು ಪ್ರಯತ್ನಿಸುತ್ತಿದೆ. 1994ರಲ್ಲಿ ಕಿಮ್-ಉಲ್-ಸುಂಗರ ಆಸಕ್ತಿಯಿಂದ ಯೋಜಿಸಲಾಗಿದ್ದ ಉಪಪ್ರಧಾನಿ ಮಟ್ಟದ ಕೊರಿಯಾ ಶೃಂಗಸಭೆ, ಕಿಮ್-ಉಲ್-ಸುಂಗರ ನಿಧನದಿಂದಾಗಿ ಮುಂದೆ ಹೋಗಿತ್ತು.


ಪೂರ್ವ ಜರ್ಮನರ ವಿರುದ್ಧ ಕೋರ್ಟುಗಳ ಕಿರುಕುಳದ ವಿರುದ್ಧ ಮನವಿ

ಐಕ್ಯ ಜರ್ಮನಿಯಲ್ಲಿ ಸಮಾಜವಾದಿ ವ್ಯವಸ್ಥೆ ಜಾರಿಯಲ್ಲಿದ್ದ ಪೂರ್ವ ಜರ್ಮನಿಯ ಸರ್ಕಾರದ ಕಾರ್ಯಕರ್ತರು ಹಾಗೂ ಸಾವಿರಾರು ಸಾಮಾನ್ಯ ನಾಗರೀಕರ ವಿರುದ್ಧ ದುರುದ್ದೇಶಪೂರಿತ ಕ್ರಿಮಿನಲ್ ಕೇಸುಗಳನ್ನು ನಡೆಸುವ ಮೂಲಕ ವ್ಯಾಪಕ ಕಿರುಕುಳ ಕೊಡುತ್ತಿರುವುದು ದೊಡ್ಡ ಪ್ರಮಾಣದಲ್ಲಿ ಇನ್ನೂ ಮುಂದುವರೆದಿದೆ. ಎಲ್ಲಾ ಅಂತ ರ್ರಾಷ್ಟ್ರೀಯ ಕಾನೂನುಗಳ ಎಲ್ಲೆ ಮೀರಿದ ಈ ಕಿರುಕುಳದ ವಿರುದ್ಧ ಪೂರ್ವ ಜರ್ಮನಿಯ ಹಲವಾರು ಪಾರ್ಟಿಗಳ ಕಾರ್ಯಕರ್ತರು, ಕಿರುಕುಳಕ್ಕೊಳಗಾದ ನಾಗರೀಕರು ಒಂದು ಅಂತರ್ರಾಷ್ಟ್ರೀಯ ಮನವಿ ಮೂಲಕ ಈ ಕಿರುಕುಳ ನಿಲ್ಲಿಸಲು ಸಹಾಯ ಕೋರಿದ್ದಾರೆ.

ಪೂರ್ವ ಜರ್ಮನಿಯ ಅರವತ್ತು ಸಾವಿರ ನಾಗರೀಕರ ಮೇಲೆ ಇಂತಹ ಕಿರುಕುಳ ಸತತವಾಗಿ ನಡೆಯುತ್ತಿದೆ. ಸುಮಾರು ಆರು ನೂರು ಜನರ ಮೇಲೆ ಪ್ರಾಥಮಿಕ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಶಿಕ್ಷೆ ವಿಧಿಸಲಾಗಿದೆ. ಈ ರೀತಿ ಕಿರುಕುಳ, ಶಿಕ್ಷೆಗೆ ಒಳಗಾದವರಲ್ಲಿ ಸರ್ಕಾರಿ ಅಧಿಕಾರಿಗಳು, ಸೈನ್ಯದ ಅಧಿಕಾರಿಗಳು, ಡಾಕ್ಟರು, ವಕೀಲರು, ಆಟಪಾಠಗಳ ತರಬೇತಿದಾರರು, ಬುದ್ಧಿಜೀವಿಗಳು; ಪ್ರೊಫೆಸರುಗಳು ಸೇರಿದ್ದಾರೆ. ಇವರೆಲ್ಲರ ವಿರುದ್ಧ ನಲ್ವತ್ತು ವರ್ಷಗಳ ಹಿಂದಿನ ಘಟನೆಗಳ ಆಧಾರದ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಲಾಗುತ್ತಿದೆ. ಆಗಿನ ಸರ್ಕಾರದ ವ್ಯವಸ್ಥೆಯ ಕಾನೂನುಗಳ ಪ್ರಕಾರ ನಡೆದ ನಡುವಳಿಕೆಯನ್ನು, ಈಗ ಹೊಸದಾಗಿ ರಚಿತವಾದ ಕಾನೂನುಗಳ ಪ್ರಕಾರ ಕ್ರಿಮಿನಲ್ ಅಪರಾಧವೆಂದು ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಪೂರ್ವ ಜರ್ಮನಿಯ ಸಮಾಜವಾದಿ ವ್ಯವಸ್ಥೆಯ ಹಲವಾರು ಆಯಾಮಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವವರನ್ನೆಲ್ಲಾ ಈ ಪಟ್ಟಿಗೆ ಸೇರಿಸಲಾಗಿದೆ. ಪೂರ್ವ ಜರ್ಮನಿಯ ಆಗಿದ್ದ ಸಮಾಜವಾದಿ ವ್ಯವಸ್ಥೆ ನಾಜಿ ವ್ಯವಸ್ಥೆಯಂತೆ ಕ್ರೂರ ವ್ಯವಸ್ಥೆ. ಆದ್ದರಿಂದ ಆ ವ್ಯವಸ್ಥೆ ಜೊತೆ ಸಂಬಂಧ ಇಟ್ಟುಕೊಂಡವರೆಲ್ಲಾ ಕ್ರಿಮಿನಲ್ ಅಪರಾಧ ಮಾಡಿದವರು. ಈಗ ಇದು ಪ್ರಾಥಮಿಕ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಕಾನೂನು, ಅಂತ್ರರಾಷ್ಟ್ರೀಯ ಕಾನೂನುಗಳ ವಿರುದ್ಧವಾದ ಕಾನೂನು.

ವಿಪರ್ಯಾಸವೆಂದರೆ ಜರ್ಮನಿಯ ಇಬ್ಭಾಗ ಮತ್ತು ಆನಂತರ ಎರಡು ದೇಶಗಳ ಕಾನೂನುಗಳು ಅಂತ್ರರಾಷ್ಟ್ರೀಯ ಒಪ್ಪಂದದ ಫಲವಾಗಿ ಮೂಡಿ ಬಂದದ್ದು, ಪೂರ್ವ ಜರ್ಮನಿಯ ಆಗಿನ ಯಾವುದೇ ಕಾನೂನುಗಳನ್ನು ಅಂತ ರ್ರಾಷ್ಟ್ರೀಯ ಕಾನೂನಿನ ವಿರುದ್ಧ ಎಂದು ಪರಿಗಣಿತವಾಗಿರಲಿಲ್ಲ. ಜಗತ್ತಿನ ಅತ್ಯಂತ ಕ್ರೂರ ವ್ಯವಸ್ಥೆಯಾಗಿದ್ದ ನಾಜಿ ಫ್ಯಾಸಿಸಂನ ನರಮೇಧಗಳಲ್ಲಿ ಭಾಗ ವಹಿಸಿದವರನ್ನು ಶಿಕ್ಷಿಸಬೇಕೆಂಬ ಅಂತ್ರರಾಷ್ಟ್ರೀಯ ಒಪ್ಪಂದ ವನ್ನು ಜಾರಿ ಮಾಡದೆ ಇದ್ದ ಪಶ್ಚಿಮ ಜರ್ಮನಿ, ಈಗ ಸಮಾಜವಾದಿ ವ್ಯವಸ್ಥೆಗೆ ಆ ಪಟ್ಟ ಕಟ್ಟುವುದು ವಿಪರ್ಯಾಸ.

ಪೂರ್ವ ಜರ್ಮನಿಯ ಸುಮಾರು ಅರವತ್ತು ಸಾವಿರ ನಾಗರೀಕರು ಹಾಗೂ ಅವರ ಕುಟುಂಬಗಳನ್ನು 'ಕರಿ ಪಟ್ಟಿ'ಯಲ್ಲಿ ಹಾಕಿ ಕಿರುಕುಳ ಕೊಡಲಾಗುತ್ತಿದೆ. ಇದಕ್ಕೆ ಜರ್ಮನಿಯಲ್ಲಿ ಬಲವಾಗಿರುವ ಸಮಾಜವಾದಿ ಚಳುವಳಿಯನ್ನು ನಾಶ ಮಾಡುವುದು ಈ ಕಿರುಕುಳದ ಉದ್ದೇಶ. ಇದರ ವಿರುದ್ಧ ಅಂತ್ರರಾಷ್ಟ್ರೀಯ ಚಳುವಳಿ ಸಂಘಟನೆ ಬೇಕು ಎಂದು ಮನವಿ ಹೇಳಿದೆ.



ಜರ್ಮನಿಯ ರಾಜಧಾನಿ ಬರ್ಲಿನ್‌ನಲ್ಲಿ ನಿರುದ್ಯೋಗದ ವಿರುದ್ಧ ಮತಪ್ರದರ್ಶನ. 'ದೇಶವೆಂದರೆ ನಾವು', 'ಕೊಹಲ್ ಹೊರಟುಹೋಗಿ, ಕೋಟ್ಯಾಧೀಶರ ಮೇಲೆ ತೆರಿಗೆ ಹಾಕಿ' ಮುಂತಾದ ಘೋಷಣಾ ಫಲಕಗಳನ್ನು ಹಿಡಿದ ಮತಪ್ರದರ್ಶಕರು.

ಕರಿಯರ ನಾಯಕ ಕಿಂಗ್ ಹತ್ಯೆಯ ಕಹಿ ನೆನಪು

60 ರ ದಶಕದಲ್ಲಿ ಅಮೇರಿಕದಲ್ಲಿ ಸಾಮಾಜಿಕ ಅಲ್ಲೋಲ ಕಲ್ಲೋಲ ಉಂಟು ಮಾಡಿದ ಕರಿಯರ ಚಳುವಳಿಯ ಧೀಮಂತ ನಾಯಕ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್‌ರ ಹತ್ಯೆಯ ಮೂವತ್ತನೇ ವಾರ್ಷಿಕ ಇತ್ತೀಚೆಗೆ ಅಮೇರಿಕದಾದ್ಯಂತ ಆಚರಿಸಲಾಯಿತು. ಅಮೇರಿಕಾದ ಟೆಕ್ಸಾಸ್ ಪ್ರಾಂತ್ಯದ ಮೆಂಫೀಸ್ ಎಂಬ ಪಟ್ಟಣದಲ್ಲಿ ಮಾರ್ಟಿನ್ ಲೂಥರ್ ಕಿಂಗ್‌ರವರ ಹತ್ಯೆಯಾಗಿತ್ತು. ವಾರ್ಷಿಕದ ದಿನ ಕಿಂಗ್‌ರ ಕೊಲೆಯ ದಿನ ನಡೆಸಿದ ಮೆರವಣಿಗೆಯ ಪುನಾರಾವರ್ತನೆ ಮಾಡಲಾಯಿತು. ಕಿಂಗ್‌ರ ಅನುಯಾಯಿಗಳು, ಪ್ರಮುಖ ಬುದ್ಧಿಜೀವಿಗಳು, ಕರಿಯ ನಾಯಕರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ದೇಶದಾದ್ಯಂತ ಕರಿಯರ ಸ್ವಾಭಿಮಾನ ಚಳುವಳಿ, ಸಾಮಾಜಿಕ-ಆರ್ಥಿಕ ಸಮಾನತೆಯ ಹೋರಾಟಕ್ಕೆ ಕಿಂಗ್‌ರ ಕೊಡುಗೆ ಹಾಗೂ ಈಗಿನ ಪರಿಸ್ಥಿತಿಯ ಬಗ್ಗೆ ಚರ್ಚೆ, ವಿಮರ್ಶೆಗಳು ನಡೆದವು.

ಕಿಂಗ್‌ರ ನಾಯಕತ್ವದಲ್ಲಿ ಕರಿಯರ ಚಳುವಳಿ ಸಾಧಿಸಿದ್ದ ಮಿಸಲಾತಿ, ಸಾಮಾಜಿಕ-ಆರ್ಥಿಕ ಸಮಾನತೆಯತ್ತ ಹಲವು ಹೆಜ್ಜೆಗಳು ತಿರುವು ಮುರುವಾಗಿದ್ದನ್ನು ಈ ಎಲ್ಲಾ ವಿಮರ್ಶೆಗಳು ಗಮನಿಸಿದವು. ಕರಿಯರ ಸ್ಥಾನದಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆ ಆಗಿದ್ದರೂ, ಕರಿಯರ ಸಾಮಾಜಿಕ-ಆರ್ಥಿಕ ಶೋಷಣೆ, ಅಸಮಾನತೆ ಮೇಲೆ ಅಮೇರಿಕನ್ ವ್ಯವಸ್ಥೆ ನಿಂತಿದೆ ಎಂಬುದನ್ನು ಗಮನಿಸಲಾಯಿತು. 60 ರ ದಶಕದ ಕರಿಯರ ಚಳುವಳಿ ಸಾಧಿಸಿದ್ದ ಮಿಸಲಾತಿಯನ್ನು ಹಲವಾರು ಕ್ಷೇತ್ರಗಳಲ್ಲಿ, ರಾಜ್ಯಗಳಲ್ಲಿ ತೆಗೆದು ಹಾಕಲಾಗಿದೆ. ಹಲವಾರು ವಿಶ್ವವಿದ್ಯಾಲಯಗಳ, ರಾಜ್ಯ ಸರ್ಕಾರಗಳ ಉದ್ಯೋಗಗಳಲ್ಲಿ ಜಾರಿಯಾದ ಮೀಸಲಾತಿಯನ್ನು ಮೊಟಕುಗೊಳಿಸಲಾಗುತ್ತಿದೆ ಇಲ್ಲವೆ ರದ್ದು ಮಾಡಲಾಗಿದೆ. 18-21 ವರ್ಷದ ಕರಿಯ ಯುವಕರಲ್ಲಿ ನಿರುದ್ಯೋಗದಿಂದ ಉಂಟಾದ ಆಕ್ರೋಶ ಅವರನ್ನು ಅಪರಾಧದತ್ತ ತಳ್ಳುತ್ತಿದೆ. ಕರಿಯ ಯುವಕರನ್ನು ವ್ಯವಸ್ಥಿತವಾಗಿ ಅಪರಾಧಿ ಸಿಂಡಿಕೇಟ್‌ಗಳತ್ತ ತಳ್ಳಲಾಗುತ್ತಿದೆ. ಕರಿಯ ಯುವಕರಲ್ಲಿ ಮೂವರಲ್ಲಿ ಒಬ್ಬ ಜೈಲಿನಲ್ಲಿ ಕೊಳೆಯುತ್ತಿದ್ದಾನೆ ಎಂಬ ಸತ್ಯವೇ ಎಲ್ಲವನ್ನು ಹೇಳುತ್ತಿದೆ. ಈ ಸಂದರ್ಭದಲ್ಲಿ ಕರಿಯ ಸಂಘಟನೆಗಳು, ಚಳುವಳಿಗಳು ಅಮೇರಿಕನ್ ವ್ಯವಸ್ಥೆಯ ಭಾಗವಾಗಿ ಹೋಗುತ್ತಿದೆ. ಈ ವಾಸ್ತವವನ್ನು ಹಲವಾರು ಕರಿಯರ ಹಾಗೂ ಪ್ರಗತಿಪರ ಚಳುವಳಿಗಳು ವಿಮರ್ಶಿಸಿದವು.

ದಿಗ್ಭ್ರಮೆಗೊಳಿಸುವ ರಕ್ಷಣಾ ಮಂತ್ರಿಗಳ ಹೇಳಿಕೆ

ಭಾರತ -ಚೀಣಾ ಸಂಬಂಧಗಳನ್ನು ಉತ್ತಮಗೊಳಿಸುವ ಪ್ರಕ್ರಿಯೆಯನ್ನು ತಿರುಗು-ಮುರುಗುಗೊಳಿಸುವ ಜವಾಬ್ದಾರಿಯನ್ನು ನಮ್ಮ ರಕ್ಷಣಾಮಂತ್ರಿಗಳು ಸ್ವತಃ ವಹಿಸಿಕೊಂಡಂತಿದೆ. ಅವರ ಬೇಜವಾಬ್ದಾರಿ ಹೇಳಿಕೆ ದಿಗ್ಭ್ರಮೆಯುಂಟು ಮಾಡುವಂತದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಹೇಳಿದೆ. ಈ ಎರಡು ದೇಶಗಳ ಜನಗಳ ಭಾವನೆಗಳನ್ನು ಪ್ರತಿಧ್ವನಿಸುತ್ತಾ ಎರಡೂ ಕಡೆಯ ರಾಜಕೀಯ ಮುಖಂಡರು ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಉತ್ತಮ ನೆರೆಕರೆ ಸಂಬಂಧಗಳನ್ನು ಸುಧಾರಿಸುವ ಪ್ರಕ್ರಿಯೆಯನ್ನು ಆರಂಭಿಸಿದ್ದರು.ಈ ಬಗ್ಗೆ ರಾಜಕೀಯ ವಲಯಗಳಲ್ಲಿ ವ್ಯಾಪಕವಾಗಿ ಸಂಪೂರ್ಣ ಸಹಮತಿಯಿದೆಯೆಂಬುದನ್ನು ಸಿಪಿಐ(ಎಂ) ನೆನಪಿಸಿದೆ.

ಪಾಕಿಸ್ತಾನ ಹೊಸದಾಗಿ ಹಾರಿಸಿದ ಕ್ಷಿಪಣಿಯಲ್ಲಿ ಚೀಣಾದ ಪಾತ್ರವಿದೆಯೆಂದು ರಕ್ಷಣಾಮಂತ್ರಿಗಳು ಬಹಿರಂಗವಾಗಿ ಆಪಾದಿಸಿದ್ದು ಇದಕ್ಕೆ ಚೀಣಾದಿಂದ ಬಲವಾದ ಪ್ರತಿಕಿಯೆ ಬಂದಿದೆ. ಈ ಆಪಾದನೆಯನ್ನು ಅದು ಸಂಪೂರ್ಣವಾಗಿ ನಿರಾಕರಿಸಿದೆ. "ಚೀಣಾ ಒಂದು ಜವಾಬ್ದಾರಿಯುತ ದೇಶ, ಈ ರೀತಿ ಯೆಲ್ಲಾ ಟಿಪ್ಪಣಿ ಮಾಡುವುದು ತಿಳಿಗೇಡಿತನ" ಎಂದು ಚೀಣಾದ ಅಧಿಕೃತ ಮೂಲಗಳು ಹೇಳಿವೆ. ತಾವು ಸಹಿ ಮಾಡಿದ ಪರಮಾಣು ಪ್ರಸರಣ ನಿಷೇಧ ಸಂಧಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ ಎಂದು ಆ ಮೂಲಗಳು ಹೇಳಿವೆ.

ಇಷ್ಟೇ ಅಲ್ಲ, ಚೀಣೀಯರು ಭಾರತೀಯ ಪ್ರದೇಶದಲ್ಲಿ ಹೆಲಿಪ್ಯಾಡ್ ಕಟ್ಟುತ್ತಿದ್ದಾರೆ ಎನ್ನುವ ಬಗ್ಗೆ ಪ್ರಧಾನಮಂತ್ರಿಗಳು ಒಂದು ರೀತಿ ಹೇಳುತ್ತಿದ್ದರೆ, ರಕ್ಷಣಾಮಂತ್ರಿಗಳು ಎನ್ನೊಂದು ರೀತಿಯಲ್ಲಿ ಹೇಳುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಹೇಳಿದೆ.

ಪ್ರದೇಶಗಳು ಮತ್ತು ಇತರ ವಿವಾದಗಳ ಪರಿಹಾರಕ್ಕೆಂದು ಎರಡೂ ದೇಶಗಳು ಸೇರಿಕೊಂಡು ಒಂದು ಕಾರ್ಯಗುಂಪು ರಚಿಸಿಕೊಂಡಿವೆ. ಈ ಗುಂಪು ನಿಯಮಿತವಾಗಿ ಸಭೆ ಸೇರಿತ್ತಿದೆ. ಆದ್ದರಿಂದ ಸಾರ್ವಜನಿಕವಾಗಿ ಆಪಾದನೆ ಹಾಕುವ ಬದಲು ರಕ್ಷಣಾ ಮಂತ್ರಿಗಳು ಈ ಪ್ರಶ್ನೆಗಳನ್ನು ಈ ಗುಂಪುಗಳಲ್ಲಿ ಎತ್ತಿ ಭಾರತದ ಆತಂಕಗಳಿಗೆ ದನಿ ನೀಡಿದ್ದರೆ ಅದು ಪ್ರೌಢತೆಯ ಹಾಗೂ ಜವಾಬ್ದಾರಿಕೆಯ ಲಕ್ಷಣವಾಗುತ್ತಿತ್ತು ಎಂದು ಪೊಲಿಟ್‌ಬ್ಯೂರೊ ಅಭಿಪ್ರಾಯಪಟ್ಟಿದೆ.

ಭಾರತದ ಹಿತಾಸಕ್ತಿಗಳು ಮತ್ತು ಭದ್ರತೆಯ ರಕ್ಷಣೆಗೆ ಅತ್ಯುನ್ನತ ಆದ್ಯತೆ ನೀಡಲೇಬೇಕು , ನಿಜ. ಆದರೆ ಇದು ಚೀಣಾದೊಂದಿಗೆ ಸಂಬಂಧಗಳನ್ನು ಸುಧಾರಿಸುವಲ್ಲಿ ಗಡಿಯಾರದ ಮುಳ್ಳನ್ನು ಹಿಂದಕ್ಕೆ ತಳ್ಳಲು ಒಂದು ನೆವವಾಗಿಸಲು ಸಾಧ್ಯವಿಲ್ಲ, ಏಕೆಂದರೆ ಇದು ಈ ಪ್ರದೇಶದ ಶಾಂತಿ ಮತ್ತು ಅಭಿವೃದ್ಧಿಗೆ ಬಹಳ ಅಗತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಅಭಿಪ್ರಾಯಪಟ್ಟಿದೆ.

ರಶ್ಯಾದಲ್ಲಿ ಪಾರ್ಲಿಮೆಂಟು: ಅಧ್ಯಕ್ಷರ ನಡುವೆ ಘರ್ಷಣೆ

ರಶ್ಯಾದ ಪಾರ್ಲಿಮೆಂಟು ಹೊಸ ಪ್ರಧಾನ ಮಂತ್ರಿ ಬಗೆಗಿನ ಅಧ್ಯಕ್ಷ ಯೆಲ್ಸಿನರ ಸೂಚನೆಗೆ ಅಂಗೀಕಾರ ಕೊಟ್ಟಿಲ್ಲ. ಅಧ್ಯಕ್ಷರ ಸೂಚನೆ ಬಗ್ಗೆ ನಡೆದ ಮತದಾನದಲ್ಲಿ 175-143 ಮತಗಳಿಂದ, ಅದನ್ನು ತಿರಸ್ಕರಿಸಿದೆ. ಅಧ್ಯಕ್ಷ ಯೆಲ್ಸಿನರು ಕಿರಿಯಂಕೊರ ಹೆಸರನ್ನು ಮತ್ತೆ ಪ್ರಧಾನಿಯಾಗಿ ಸೂಚಿಸಿದ್ದಾರೆ. ಆ ಬಗ್ಗೆ ಪಾರ್ಲಿಮೆಂಟು ಪುನಃ ಪರಿಶೀಲಿಸಲಿದೆ. ಈ ನಡುವೆ ಪಾರ್ಲಿಮೆಂಟರಿ ನಾಯಕರು ಹಾಗೂ ಅಧ್ಯಕ್ಷರ ನಡುವೆ ನಡೆದ ಎಲ್ಲಾ ಮಾತುಕತೆಗಳು ವಿಫಲವಾಗಿವೆ. ಇನ್ನೆರಡು ಬಾರಿ ಪಾರ್ಲಿಮೆಂಟು ಯೆಲ್ಸಿನರ ಸೂಚನೆ ತಿರಸ್ಕರಿಸಿದರೆ, ರಶ್ಯಾ ಇನ್ನೊಂದು ಸಂವೈಧಾನಿಕ ಬಿಕ್ಕಟ್ಟಿನತ್ತ ಹೆಜ್ಜೆ ಇಡುತ್ತಿದೆ. ರಶ್ಯಾದ ಕಮ್ಯುನಿಸ್ಟ್ ಹಾಗೂ ದೇಶಪ್ರೇಮಿ ಪಕ್ಷಗಳು ಪ್ರಧಾನ ಮಂತ್ರಿ ಬದಲಾಯಿಸಿ, ಈ ಸಂವೈಧಾನಿಕ ಬಿಕ್ಕಟ್ಟು ತಪ್ಪಿಸಬೇಕೆಂದು ಮಾಡಿರುವ ಮನವಿಗೆ ಯೆಲ್ಸಿನ್ ಕಿವಿಗೊಡುತ್ತಿಲ್ಲ. ರಶ್ಯಾದ ಅಧಿಕಾರದಡಿ ಸಂವಿಧಾನದ ಪ್ರಕಾರ ಯೆಲ್ಸಿನರಿಗೆ ಪಾರ್ಲಿಮೆಂಟ್ ವಿಸರ್ಜಿಸುವ ಅಧಿಕಾರ ಇರುವುದೇ ಇದಕ್ಕೆ ಕಾರಣ.

ನೇಪಾಳದಲ್ಲಿ ಕೊಯಿರಾಲಾ ಪ್ರಧಾನಿ

ನೇಪಾಳದ ಮಿಶ್ರ ಸರ್ಕಾರಗಳೊಳಗಿನ ಬಿಕ್ಕಟ್ಟು ಬಗೆಹರಿದಿದ್ದು, ಆರ್.ಪಿ.ಪಿ.ನ ಥಾಪಾ ರಾಜೀನಾಮೆ ಕೊಟ್ಟಿದಾರೆ. ನೇಪಾಳೀ ಕಾಂಗ್ರೆಸ್ಸಿನ ಕೋಯಿರಾಲ ಪ್ರಧಾನಿಯಾಗಿದ್ದಾರೆ. ಒಂದು ತಿಂಗಳೊಳಗೆ ಅವರು ವಿಶ್ವಾಸಮತ ಸಂಪಾದಿಸಬೇಕು. ಥಾಪಾರವರ ಆರ್.ಪಿ.ಪಿ. ವಿಶ್ವಾಸಮತದಲ್ಲಿ ಯಾವ ನೀತಿ ಅನುಸರಿಸುತ್ತದೆ ಎಂಬುದರ ಮೇಲೆ ನೇಪಾಳದ ರಾಜಕೀಯ ಬಿಕ್ಕಟ್ಟಿನ ಭವಿಷ್ಯ ನಿಂತಿದೆ.

ಸಾರ್ವಜನಿಕ ವಲಯದ ತೈಲ ಕಂಪನಿಯನ್ನು ವಿದೇಶಿ ಕಂಪನಿಗಳು ನುಂಗಿ ಹಾಕದಂತೆ ತಡೆಯಲು ಭಾರತ್ ಪೆಟ್ರೋಲಿಯಂ ಕಾರ್ಮಿಕರಿಂದ ಯಶಸ್ವಿ ದೇಶವ್ಯಾಪಿ ಮುಷ್ಕರ

ಎಪ್ರಿಲ್ 7ರಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್(ಬಿಪಿಸಿಎಲ್)ನ ಕಾರ್ಮಿಕರು ಸಿಐಟಿಯು, ಎಐಟಿಯುಸಿ ಇಂಟಕ್‌ಗೆ ಸೇರಿದ ಮತ್ತು ಸ್ವತಂತ್ರ ಸಂಘಗಳ ಕರೆಯ ಮೇರೆಗೆ ನಡೆಸಿದ ದೇಶವ್ಯಾಪಿ ಮುಷ್ಕರ ಯಶಸ್ವಿಯಾಗಿದೆಯೆಂದು ವರದಿಯಾಗಿದೆ. ಇಡೀ ದಕ್ಷಿಣ, ಉತ್ತರ, ಪೂರ್ವ ವಲಯಗಳಲ್ಲಿ ಸಂಪೂರ್ಣ ಮುಷ್ಕರ ನಡೆಯಿತೆಂದು ತಿಳಿದು ಬಂದಿದೆ.

ಈ ಮುಷ್ಕರ ಯಾವುದೇ ಆರ್ಥಿಕ ಬೇಡಿಕೆಗಳಿಗಾಗಿ ಆಗಿರಲಿಲ್ಲ ಎಂಬುದು ಗಮನಾರ್ಹ. ಅಮೆರಿಕನ್ ಕಂಪನಿ ಎಡಿಎಲ್‌ನ ಸಲಹೆಯಂತೆ ತಮ್ಮ ಸಂಸ್ಥೆಯನ್ನು ಪುನರ್ರಚನೆಯ ಹೆಸರಿನಲ್ಲಿ ವಿಘಟನೆಗೊಳಿಸುವ ಆಡಳಿತ ಮಂಡಳಿಯ ಪ್ರಯತ್ನದ ವಿರುದ್ಧ ಕಾರ್ಮಿಕರು ಮುಷ್ಕರಕ್ಕಿಳಿದರು.

ಬಿಪಿಸಿಎಲ್ ನ ಕೆಲವು ಆರಿಸಿದ ಕಾರ್ಯಗಳನ್ನು ಬಿಟ್ಟುಕೊಟ್ಟು ಖಾಸಗೀಕರಿಸುವುದು ಈ ಅಮೇರಿಕನ್ ಕಂಪನಿಯ ಸಲಹೆಯ ಮುಲಭೂತ ಉದ್ದೇಶ. ಈ ದಿಕ್ಕಿನಲ್ಲಿ ಆಡಳಿತ ಮಂಡಳಿ ಕೈಗೊಂಡಿರುವ ಕ್ರಮಗಳು ಅಂದರೆ ಕಂಪನಿಯನ್ನು ಆರು 'ಸ್ಟ್ರಟೆಜಿಕ್ ಬಿಸಿನೆಸ್ ಯುನಿಟ್' ಗಳಾಗಿ ವಿಭಜಿಸುವ ಕ್ರಮ ಈ ಸಂಸ್ಥೆಯನ್ನು ಕಳಚಿಹಾಕುವ ಪ್ರಯತ್ನ ಎಂದು ಎಲ್ಲಾ ಕಾರ್ಮಿಕ ಸಂಘಗಳ ವಾದ. ಈ ರೀತಿಯ ವಿಭಜನೆಯಿಂದ ಮಾರುಕಟ್ಟೆ ಆರ್ಥಿಕದ ವಾತಾವರಣದಲ್ಲಿ ತಮ್ಮ ಕಂಪನಿ ಹೆಚ್ಚು ಸ್ಪರ್ಧಾತ್ಮಕವಾಗಲು ನೆರವಾಗುತ್ತದೆಂಬ ಆಡಳಿತ ಮಂಡಳಿಯ ವಾದವನ್ನು ಕಾರ್ಮಿಕ ಸಂಘಗಳು ತಿರಸ್ಕರಿಸಿವೆ. ಬದಲಾಗಿ ಆರು ಘಟಕಗಳ ರಚನೆಯಿಂದಾಗಿ ಆಡಳಿತದ ಖರ್ಚು ಬಹಳಷ್ಟು ಹೆಚ್ಚಿ ಕೆಲವು ಘಟಕಗಳ ಹಣಕಾಸು ಸ್ಥಿತಿ ಹದಗೆಟ್ಟು ಅವು ರೋಗಗ್ರಸ್ತಗೊಳ್ಳುವ ಸಾಧ್ಯತೆಯೂ ಇದೆ. ದೊಡ್ಡ ಪ್ರಮಾಣದಲ್ಲಿ ಕೆಲಸಗಳನ್ನು ಕಾಂಟ್ರಾಕ್ಟಿಗೆ ಕೊಡುವುದರಿಂದ ಬಹುಪಾಲು ಕಾರ್ಮಿಕರು ಅನಗತ್ಯ ಎಂದಾಗಬಹುದು. ಹೀಗೆ ಕಾರ್ಮಿಕರ ಕೆಲಸದ ಭದ್ರತೆ ಹಾಗೂ ಸೇವಾ ಪರಿಸ್ಥಿತಿಗಳನ್ನು ತೀವ್ರವಾಗಿ ತಟ್ಟುತ್ತದೆ ಎಂದು ಕಾರ್ಮಿಕರ ಭಯ. ಈ ಹಿನ್ನೆಲೆಯಲ್ಲಿ ಈ ಮುಷ್ಕರ ನಡೆದಿದೆ.

ಈ ಮೊದಲು ಇವರು ಇದೇ ಪ್ರಶ್ನೆಯ ಮೇಲೆ ಕಳೆದ ನವಂಬರ್ 12ರಂದು ಕೂಡ ಯಶಸ್ವಿ ಮುಷ್ಕರ ನಡೆಸಿದ್ದರು. ಆದರೂ ಆಡಳಿತ ಮಂಡಳಿ ಕಾರ್ಮಿಕ ಸಂಘಗಳ ಅಭಿಪ್ರಾಯ, ಸಲಹೆಗಳನ್ನು ಸಂಪೂರ್ಣವಾಗಿ ಬದಿಗೊತ್ತಿ 'ಪುನರ್ರಚನೆ' ಮಾಡಲು ಟೊಂಕಕಟ್ಟಿದಂತೆ ಕಾಣುತ್ತದೆ.

ಸಿಐಟಿಯು ಯಶಸ್ವಿ ಮುಷ್ಕರ ನಡೆಸಿದ ಬಿಪಿಸಿಎಲ್ ಕಾರ್ಮಿಕರನ್ನು ಅಭಿನಂದಿಸಿದೆ ಹಾಗೂ ಆಡಳಿತ ಮಂಡಳಿ ಈ ವಿನಾಶಕಾರಿ ಕ್ರಮಗಳಲ್ಲಿ ಮುಂದುವರಿಯದಂತೆ ತಡೆಯಬೇಕೆಂದು ಆ ಮೂಲಕ ಸಾರ್ವಜನಿಕ ವಲಯದ ಈ ತೈಲ ಕಂಪನಿಯನ್ನು ವಿದೇಶಿ ತೈಲ ಬಹುರಾಷ್ಟ್ರೀಯ ಕಂಪನಿಗಳು ನುಂಗಿ ಹಾಕದಂತೆ ತಡೆಯಬೇಕೆಂದು ಕೇಂದ್ರ ಸರಕಾರವನ್ನು ಆಗ್ರಹಪಡಿಸಿದೆ.

ಸಾರ್ವಜನಿಕ ವಲಯದ ಪ್ರಶ್ನೆಗಳು -ಕೈಗಾರಿಕಾ ಮತ್ತು ಕಾರ್ಮಿಕ ಮಂತ್ರಿಗಳೊಂದಿಗೆ ಕಾರ್ಮಿಕ ಸಂಘಗಳ ಭೇಟಿ

ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ(ಸಿಪಿಎಸ್‌ಟಿಯು) ಯ ನಿಯೋಗವೊಂದು ಎಪ್ರಿಲ್ 6 ರಂದು ಕೇಂದ್ರ ಕೈಗಾರಿಕಾ ಮಂತ್ರಿ ಸಿಕಂದರ್ ಭಕ್ತ್ ಹಾಗೂ ಕಾರ್ಮಿಕ ಮಂತ್ರಿ ಡಾ. ಸತ್ಯನಾರಾಯಣ್ ಜಟಿಯಾರನ್ನು ಭೇಟಿಮಾಡಿ ರೋಗಗ್ರಸ್ತ ಮತ್ತು ಮುಚ್ಚಿದ ಘಟಕಗಳು ಹಾಗೂ ಅವುಗಳ ಪುನರುಜ್ಜೀವನ, ಹಲವು ರೋಗಗ್ರಸ್ತ ಘಟಕಗಳಲ್ಲಿ ಸಂಬಳ ಕೊಡದಿರುವುದು, ಸಾರ್ವಜನಿಕ ವಲಯದಲ್ಲಿ ವೇತನ ಮಾತುಕತೆಗಳನ್ನು ಆರಂಭಿಸುವಲ್ಲಿ ವಿಪರೀತ ವಿಳಂಬ ಮತ್ತು ಹಲವು ಘಟಕಗಳಲ್ಲಿ ಮಧ್ಯಂತರ ಪರಿಹಾರವನ್ನು ತೆರದಿರುವುದು ಮುಂತಾದ ಪ್ರಶ್ನೆಗಳನ್ನು ಚರ್ಚಿಸಿತು. ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟಕ್ಕೆ ಕಾರ್ಮಿಕ ಸಂಘಗಳ ವಿರೋಧವಿದೆಯೆಂದು ಹೇಳಿ ಶೇರು ಮಾರಾಟದ ಇಡೀ ಯೋಜನೆಯ ಪುನರ್ವಿಮರ್ಶೆ ನಡೆಸಬೇಕೆಂದು ನಿಯೋಗ ಆಗ್ರಹಪಡಿಸಿತು.

ಇಬ್ಬರೂ ಮಂತ್ರಿಗಳು ಈ ಪ್ರಶ್ನೆಗಳ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆ ನೀಡಿದರು ಹಾಗು ಸ್ವಲ್ಪ ಸಮಯದ ನಂತರ ಈ ಸಮಸ್ಯೆಗಳಿಗೆ ಒಪ್ಪಿತ ಪರಿಹಾರ ಕಂಡುಕೊಳ್ಳಲು ಕಾರ್ಮಿಕ ಸಂಘಗಳೊಡನೆ ಚರ್ಚಿಸುವುದಾಗಿ ಹೇಳಿದರು.

ಸಿಪಿಎಸ್‌ಟಿಯು ನಿಯೋಗದಲ್ಲಿ ಎಂ. ಕೆ. ಪಂಧೆ ಮತ್ತು ಜೀವನ್ ರಾಯ್(ಸಿಐಟಿಯು), ಎ.ಡಿ. ನಾಗಪಾಲ್(ಹೆಚ್‌ಎಂಎಸ್),ಡಿ.ಎಲ್. ಸಚ್‌ದೇವ್ (ಎಐಟಿಯುಸಿ), ಮೈಕೆಲ್ ಫರ್ನಾಂಡೀಸ್(ಜೆಎಫ್), ಜಿ.ನರಸಿಂಗರಾವ್ (ಹೈದರಾಬಾದ್) ಇದ್ದರು.

ಪುಟ 5 ರಿಂದ

ಇಎಂಎಸ್

★ ಇ.ಎಂ.ಎಸ್. ಒಬ್ಬ ಅತ್ಯಂತ ಸಮರ್ಥ ಶಿಕ್ಷಕರಾಗಿದ್ದರು. 1983ರಲ್ಲಿ ಬೆಂಗಳೂರಿನಲ್ಲಿ ನಡೆದ ಪಕ್ಷದ ರಾಜ್ಯ ಶಾಲೆಯಲ್ಲಿ ಮತ್ತು 1994ರಲ್ಲಿ ದೆಹಲಿಯಲ್ಲಿ ನಡೆದ ಪಕ್ಷದ ಕೇಂದ್ರ ಶಾಲೆಯಲ್ಲಿ ನಾವು ಹಾಜರಿದ್ದು, ಸಿ.ಪಿ.ಐ.(ಎಂ)ನ ಸಂವಿಧಾನ, ಕಾರ್ಯಕ್ರಮ, ಕಾರ್ಯತಂತ್ರ, ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ಸಂಬಂಧ ಮುಂತಾದವುಗಳ ಕುರಿತಾದ ಇ.ಎಂ.ಎಸ್.ರ ಪಾಠಗಳು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ. ಕಮ್ಯುನಿಸ್ಟರು ಜನರ ನೋವು ನಲಿವುಗಳಲ್ಲಿ ಪಾಲ್ಗೊಂಡು, ಅವರನ್ನು ವರ್ಗ ಸಂಘಟನೆಗಳಲ್ಲಿ(ರೈತ, ಕಾರ್ಮಿಕ) ಮತ್ತು ಸಾಮೂಹಿಕ ಸಂಘಟನೆಗಳಲ್ಲಿ(ವಿದ್ಯಾರ್ಥಿ, ಯುವಜನ, ಮಹಿಳಾ....) ಅವರ ತುರ್ತು ಬೇಡಿಕೆಗಳ ಆಧಾರದಲ್ಲಿ ಸಂಘಟಿಸಿ ಅವರ ಹೋರಾಟಗಳ ಅನುಭವಗಳ ಆಧಾರದಲ್ಲಿ ಹೊಸ ಕಮ್ಯುನಿಸ್ಟರನ್ನು ಆಯ್ಕೆ ಮಾಡಿ, ಪ್ರಾದೇಶಿಕ, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟಗಳಲ್ಲೂ ಸಿ.ಪಿ.ಐ(ಎಂ) ಪಕ್ಷ ಕಟ್ಟಿ ಬೆಳೆಸಿ, ಎಲ್ಲಾ ಹಂತಗಳಲ್ಲಿ ಶ್ರಮಿಕ ವರ್ಗದ ಪ್ರಭುತ್ವ ಸ್ಥಾಪಿಸಲು 'ಜನತಾ ಪ್ರಜಾಪ್ರಭುತ್ವ ಕ್ರಾಂತಿ' ಯಶಸ್ವಿಗೊಳಿಸಲು ಬೇಕಾದ ಸಮರ್ಥ ಕಾರ್ಯ ವ್ಯೂಹ ಹಾಗೂ ಕಾರ್ಯ ತಂತ್ರಗಳ ಕುರಿತು ಇ.ಎಂ.ಎಸ್.ರಿಂದ ಪಾಠ ಹೇಳಿಸಿಕೊಳ್ಳುವುದು ಒಂದು ಅಭೂತಪೂರ್ವ ಅನುಭವ.

ಪಕ್ಷದ ಕರ್ನಾಟಕ ರಾಜ್ಯ ಸಮ್ಮೇಳನಗಳಲ್ಲಿ ಇ.ಎಂ.ಎಸ್.ರಿಗೆ ಪ್ರತಿನಿಧಿಗಳ ಭಾಷಣಗಳನ್ನು ಇಂಗ್ಲೀಷನಲ್ಲಿ ಭಾಷಾಂತರಿಸಿ ಬರೆದುಕೊಡುವ ಜವಾಬ್ದಾರಿಯೂ ನನಗೆ ಆಗಾಗ ದೊರೆಕಿತ್ತು. ಸಮ್ಮೇಳನದಲ್ಲಿ ಅವರ ಉದ್ಘಾಟನಾ ಭಾಷಣಗಳು, ಪ್ರತಿನಿಧಿಗಳ ಎಲ್ಲಾ ಭಾಷಣಗಳಿಗೆ ಪ್ರತಿಕ್ರಿಯಿಸಿ ಅವರ ಮುಕ್ತಾಯ ಭಾಷಣಗಳು ಸ್ಮರಣೀಯ ವಾಗಿದ್ದವು. ಗುರಿಸಾಧಿಸುವತ್ತ ಪ್ರತಿನಿಧಿಗಳಿಗೆ ಸ್ಪಷ್ಟ ಮಾರ್ಗದರ್ಶಿಗಳಾಗಿದ್ದವು.

ಚರಿತ್ರೆಯನ್ನು, ಅದರ ಗತಿಶೀಲತೆಯಲ್ಲಿ ನಮಗೆ ಅದಮ್ಯ ವಿಶ್ವಾಸ ಹುಟ್ಟಿಸುವುದರಲ್ಲಿ ಇ.ಎಂ.ಎಸ್. ಅವರದ್ದು ಎತ್ತಿದಕೈ. 'ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸ' ಎಂಬ ಅವರ ಪುಸ್ತಕ ಸ್ವಾತಂತ್ರ್ಯದ ಸುವರ್ಣ ಉತ್ಸವದ ಸಂದರ್ಭದಲ್ಲಿ ಅಧ್ಯಯನಶೀಲವಾಗಿದೆ. ಆದರೂ ಸ್ವಾತಂತ್ರ್ಯ ಹೋರಾಟದ ಮೂರು ಮಜಲುಗಳನ್ನು ಇ.ಎಂ.ಎಸ್. ಸ್ಪಷ್ಟವಾಗಿ ತಿಳಿಸಿ ತಮ್ಮನ್ನು ಕರ್ತವ್ಯ ಪ್ರಜ್ಞರನ್ನಾಗಿ ಮಾಡಿದ್ದಾರೆ.



ಅಣಕ

ಶರತ್ ಚಂದ್ರ

ಅ(ನ)ರ್ಥಕೋಶ

ಮೊನ್ನೆ ನಕ್ಷತ್ರಿಕ ಇದ್ದಕ್ಕಿದ್ದ ಹಾಗೆ ಪ್ರತ್ಯಕ್ಷನಾದ. ಯಾಕಪ್ಪ ಏನೂ ವರದಿ ಕಳಿಸಿಲ್ಲ. ವಾರಗಟ್ಲೆ ಆಯ್ತಲ್ಲ ಅಂದ್ರೆ, ಸಾರ್ ತುಂಬಾ ಡಿಪ್ರೆಶನ್. ಬೇಜಾರಾಗಿ ಹೋಗಿತ್ತು. ಅಂತದ್ದೇನು ಅಂದ್ರೆ ಹೊಸ ಸರಕಾರ ಬಂತು ನೋಡಿ, ಇ.ಎಂ.ಎಸ್ ಬೇರೆ ಹೊರಟು ಹೋದ್ರು ಅಂದ ಅವನಿಗೆ ಸಮಾಧಾನ ಹೇಳುವಷ್ಟರಲ್ಲಿ ಒಂದು ಸುತ್ತೋಲೆ ಮುಂದಿಟ್ಟ. ದಿಲ್ಲಿಯಿಂದ ಮಾನವ ಸಂಪನ್ಮೂಲ (ಅಂದರೆ ಶಿಕ್ಷಣ) ಖಾತೆಯಲ್ಲಿ ತಯಾರಾದ ಸುತ್ತೋಲೆ. ಹೊಸ ಸರಕಾರದ ಭಾಷೆ ಬೇರೆಯಾದ್ದರಿಂದ ಸರ್ಕಾರಿ ಅಧಿಕಾರಿಗಳು ಕಾರಕೂನರು ಆಳುವ ರಂಗದ ಸದಸ್ಯರಿಗೆ ಸೌಕರ್ಯವಾಗುವಂತೆ ಸುತ್ತೋಲೆ ಇತ್ತು. ಸುತ್ತೋಲೆ ಹಿಂಗಿದೆ ನೋಡಿ.

ಸುತ್ತೋಲೆ-420

ಸರಕಾರಿ ಅಧಿಕಾರಿಗಳು, ಆಳುವ ರಂಗದ ಎಂ.ಪಿ.ಗಳು, ಕೈಗಾರಿಕೋದ್ಯಮಿಗಳು, ವಿದೇಶಿ ಕಂಪನಿಗಳು, ಅವರ ಮಧ್ಯವರ್ತಿಗಳು, ಪತ್ರಕರ್ತರು ಹೊಸ ಸರಕಾರದ ಭಾಷೆ ಅರಿಯದವರು. ಅವರಿಗೆ ಹೊಸ ಸರಕಾರ ಮತ್ತು ಅವರ ಪ್ರತಿನಿಧಿಗಳ ಹೇಳಿಕೆ ಅರ್ಥಮಾಡಿಕೊಳ್ಳುವುದರಲ್ಲಿ ಕಷ್ಟ ತೋಡಿಕೊಂಡಿದ್ದಾರೆ. ಅವರಿಗೆ ಸಹಾಯಕವಾಗುವಂತೆ ಒಂದು ಅರ್ಥಕೋಶ ತಯಾರಿಸಲಾಗಿದೆ. ಅರ್ಥಕೋಶವನ್ನು ಆಗಾಗ ಪರಿಷ್ಕರಿಸಲಾಗುತ್ತದೆ. ಈ ಅರ್ಥಕೋಶ ಓದಿದ ನಂತರವೂ ಓದುಗರಿಗೆ ಕಷ್ಟವಾದರೆ, ಎಲ್ಲಾ ಸಚಿವ ಖಾತೆಗಳಲ್ಲಿರುವ ನಮ್ಮ ಸ್ವಯಂ ಸೇವಕರನ್ನು ಸಂಪರ್ಕಿಸಬಹುದು.

ಮುಖವಾಡ: ಎಲ್ಲರಿಗೂ ಗೊತ್ತಿರುವ ಶಬ್ದ. ಆದರೆ ಒಂದು ಮುಖಕ್ಕೆ ಒಂದಕ್ಕಿಂತ ಹೆಚ್ಚು ಮುಖವಾಡಗಳಿರಬಹುದು ಎಂದು ಬಹಳ ಜನಕ್ಕೆ ಗೊತ್ತಿಲ್ಲ. ಹಲವು ಮುಖಗಳಿಗೆ ಹಲವು ಮುಖವಾಡಗಳೂ ಇರಬಹುದು, ಮುಖವಾಡ ಬದಲಾಯಿಸುತ್ತಾ ಹೋಗಬಹುದು. ಮುಖವಾಡ ತಾನೆ ಮುಖ ಎಂದು ತಿಳಿದುಕೊಳ್ಳುವುದು, ಹೇಳುವುದು ಇರಬಹುದು.

ಸಮಾನಾರ್ಥ ಪದಗಳು: ಪ್ರಧಾನ ಮಂತ್ರಿ

ಸಂಬಂಧಿಸಿದ ಪದಗಳು - ಮುಖ

ರಿಮೋಟ್ ಕಂಟ್ರೋಲ್: ಟಿ.ವಿ., ವಿಸಿಆರ್‌ನಂತೆ ಸರಕಾರಗಳಿಗೂ ರಿಮೋಟ್ ಕಂಟ್ರೋಲ್ ಇರುತ್ತದೆ. ಸರಕಾರಕ್ಕೆ ಪಕ್ಷದ ಕಂಟ್ರೋಲ್, ಪಕ್ಷಕ್ಕೆ ಸಂಘದ ಕಂಟ್ರೋಲ್ ಇತ್ಯಾದಿ. ರಿಮೋಟ್ ಕಂಟ್ರೋಲ್ ಕಾಣುವುದೇ ಇಲ್ಲ ಅಂತೇನಿಲ್ಲ. ದೂರ ಇರ್ತದಷ್ಟೆ.

ಸಮಾನಾರ್ಥ ಪದಗಳು: ಠಾಕ್ರೆಗಳು

ಸಂಬಂಧಿಸಿದ ಪದಗಳು: ಮೈನ್‌ಸ್ವಿಚ್

ಸ್ವದೇಶಿ: ಈ ಪದಕ್ಕೆ ಬಹಳ ಅರ್ಥಗಳಿವೆ. ಒಂದೊಂದು ಸಚಿವ ಖಾತೆಯಲ್ಲಿ ಒಂದೊಂದು ಅರ್ಥ ಇದೆ. ಅರ್ಥಖಾತೆಯಲ್ಲಿ ಐಎಂಎಫ್ ಏನು ಹೇಳುತ್ತೋ ಅದೇ ಸ್ವದೇಶಿ. ರಕ್ಷಣಾ ಖಾತೆಯಲ್ಲಿ ಕೊಕೊಕೋಲಾ ಬಿಟ್ಟು ಉಳಿದೆಲ್ಲಾ ಸ್ವದೇಶಿ. ವಾಣಿಜ್ಯ ಖಾತೆಯಲ್ಲಿ ಯಾರ್‍ಯಾರು ರಫ್ತು ಹೆಚ್ಚಿಸಲಿಕ್ಕೆ ಆಮದು ಮಾಡ್ತಾರೋ, ಅವರೆಲ್ಲಾ ಸ್ವದೇಶಿ. ಕೈಗಾರಿಕಾ ಖಾತೆಯ ಪ್ರಕಾರ ಯಾರ್‍ಯಾರು ದೇಶದಲ್ಲಿ ಬಂಡವಾಳ ಹೂಡಿದ್ದಾರೋ ಅವರೆಲ್ಲ ಸ್ವದೇಶಿಗಳು.

ಸಮಾನಾರ್ಥ ಪದಗಳು: ವಿಕ್ಕೊ ವಜ್ರದಂತಿ ಟೂಥ್‌ಪೇಸ್ಟ್, ಲಿಮ್ಕ

ಸಂಬಂಧಿಸಿದ ಪದಗಳು: ವಿದೇಶಿ, ಕೊಕೊಕೋಲಾ, ಐಎಂಎಫ್

ಅಜೆಂಡಾ: ಸರಳ ಅರ್ಥಕಾರ್ಯಕ್ರಮ ಅಂತ. ಆದರೆ ಅದು ಅಷ್ಟು ಸರಳವಲ್ಲ, ಬಹಳ ಅರ್ಥದ ಅಜೆಂಡಾಗಳಿರುತ್ತವೆ. ಕಾಣುವಂತದ್ದು, ಕಾಣದಂತಹದ್ದು. ಮುಖವಾಡದ ಅಜೆಂಡಾ, ಮುಖದ ಅಜೆಂಡಾ, ರಾಷ್ಟ್ರೀಯ ಅಜೆಂಡಾ, ರಾಜ್ಯಗಳ ಅಜೆಂಡಾ, ಮಮತಾ, ಜಯಾ, ಹೆಗಡೆ, ಠಾಕ್ರೆಗಳ ಅಜೆಂಡಾ.

ಜಾತ್ಯಾತೀತತೆ: ಇಲ್ಲೇ ಈಗಿನ ಸರಕಾರಿ ಭಾಷೆ ಪೂರ್ತಿ ಬೇರೆಯಾಗಿರುವುದು. ಹುಸಿ ಜಾತ್ಯಾತೀತ ಪಕ್ಷಗಳು ಏನನ್ನು ಕೋಮುವಾದ ಅಂತಾರೋ ಅದೇ ಜಾತ್ಯಾತೀತತೆ. ಇದಕ್ಕೂ ಬೇರೆ ಬೇರೆ ಖಾತೆಗಳಲ್ಲಿ, ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಅರ್ಥ ಇರುತ್ತದೆ. ಸ್ವಯಂ ಸೇವಕರನ್ನು ಸಂಪರ್ಕಿಸುವುದು.

ಸಮಾನಾರ್ಥ ಪದಗಳು - ಅಯೋಧ್ಯೆ, ಕಾಶಿ, ಮಥುರಾ, 370, 420, 272

ಸಂಬಂಧಿಸಿದ ಪದಗಳು - ಕೋಮುವಾದ

ಮುಖ: ಮುಖವಾಡದ ಹಿಂದಿರುವುದು ಮುಖ. ಸರಳ ಅಲ್ಲ. ಅಥವಾ ಎಲ್ಲಾ ಮುಖವಾಡಗಳನ್ನು ಬಿಚ್ಚುತ್ತಾ ಹೋದರೆ ಕೊನೆಗೆ ಉಳಿಯುವುದು ಮುಖ. ಮುಖ ಯಾವುದು ಅಂತ ಸಮಸ್ಯೆ ಆದರೆ ಸ್ವಯಂ ಸೇವಕರನ್ನು ಸಂಪರ್ಕಿಸುವುದು.

ಸಂಬಂಧಿಸಿದ ಪದಗಳು - ಮುಖವಾಡ

ವಿದೇಶಿ: ನಮ್ಮ ದೇಶದಲ್ಲಿ ಹುಟ್ಟದವರು ವಿದೇಶಿಗಳು. ಗೃಹಖಾತೆಯ ಪ್ರಕಾರ ಐಡೆಂಟಿಟಿ ಕಾರ್ಡ್ ಇಲ್ಲದವರೆಲ್ಲಾ ವಿದೇಶಿಗಳು. ಆರ್ಯರು ನಮ್ಮ ಪೂರ್ವಜರು ಎಂದು ತಿಳಿಯದವರು ವಿದೇಶಿಗಳಿರಬಹುದು. ನಮ್ಮ ದೇಶದಲ್ಲಿ ಹುಟ್ಟದೆ ಇಲ್ಲಿ ಬಂಡವಾಳ ಹೂಡುವವರು ವಿದೇಶಿಗಳು. ನಮ್ಮ ದೇಶದಲ್ಲಿ ಹುಟ್ಟದೆ ಬಂಡವಾಳ ಹಾಕಿದರೆ ಅವರನ್ನು ಸ್ವದೇಶಿ ಹೌದೋ ಅಲ್ಲವೋ ಎಂದು ಹಣಕಾಸು ಮತ್ತು ವಾಣಿಜ್ಯ ಖಾತೆಯ ಸ್ವಯಂ ಸೇವಕರು ತಿಳಿಸುತ್ತಾರೆ.

ಮೈನ್‌ಸ್ವಿಚ್: ಮೈನ್‌ಸ್ವಿಚ್, ರಿಮೋಟ್ ಕಂಟ್ರೋಲ್ ಬೇರೆ ಅಂತ ತಿಳಿದು ಕೊಂಡಿರುವುದು ತಪ್ಪು. ರಿಮೋಟ್ ಕಂಟ್ರೋಲ್, ಮೈನ್‌ಸ್ವಿಚ್ ಎರಡೂ ದೂರ ಇರುತ್ತವೆ. ರಿಮೋಟ್ ಕಂಟ್ರೋಲ್ ನಿಂದಲೂ ಪೂರ್ತಿ ಆಫ್ ಮಾಡಲು ಆಗುತ್ತದೆ. ಎರಡಕ್ಕೂ ವ್ಯತ್ಯಾಸ ಅಂದರೆ ಒಂದಕ್ಕೆ ವಯರು ಇರುತ್ತದೆ, ಇನ್ನೊಂದಕ್ಕೆ ವಯರು ಇರುವುದಿಲ್ಲ.

ಸಂಬಂಧಿಸಿದ ಪದ - ರಿಮೋಟ್ ಕಂಟ್ರೋಲ್

ಕೋಮುವಾದ: ಇದು ಒಂದು ಅರ್ಥಹೀನ ಪದ. ಭಾರತದಂತಹ ಭವ್ಯ ಸಂಸ್ಕೃತಿಯ ದೇಶದಲ್ಲಿ ಕೋಮುವಾದ ಎಂಬುದೇ ಇಲ್ಲ. ಇದು ಹುಸಿ-ಜಾತ್ಯಾತೀತ ಪಕ್ಷಗಳ ಭ್ರಮೆ ನಿಜವಲ್ಲ.

ಸಮಾನಾರ್ಥ ಪದಗಳು - ಜಾತ್ಯಾತೀತತೆ, ಅಯೋಧ್ಯಾ, ಕಾಶಿ, ಮಥುರಾ, 370, 272, 420

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27